ವೈದ್ಯ ಬರಹಗಾರರ ಸಮಿತಿ ಸಾರಥ್ಯದಲ್ಲಿ

# ವೈದ್ಯ ಸಂಪದ

ಕನ್ನಡ ಬಳಸಿ ವೈದ್ಯ ಸಾಹಿತ್ಯ ಬೆಳೆಸಿ

ಸಂಪುಟ: ೩ ಸಂಚಿಕೆ: ೪ ದ್ವೈಮಾಸಿಕ ಜುಲೈ - ಆಗಸ್ಟ್ ೨೦೨೪ ಪುಟಗಳು: ೭೨

ಭಾರತೀಯ ವೈದ್ಯಕೀಯ ಸಂಘ, ಕರ್ನಾಟಕ ಶಾಖೆಯ ಸದಸ್ಯರ ಆಂತರಿಕ ವಿತರಣೆಗಾಗಿ ಮಾತ್ರ

## ಜುಲೈ ೧
## ರಾಷ್ಟ್ರೀಯ ವೈದ್ಯರ ದಿನಾಚರಣೆಯ ಶುಭಾಶಯಗಳು...



ಕನ್ನಡ ವೈದ್ಯ ಬರಹಗಾರರ ಐದನೇ ರಾಜ್ಯ ಸಮ್ಮೇಳನ ಬೆಳಗಾವಿಯಲ್ಲಿ

ಸರ್ವರಿಗೂ ಸುಸ್ವಾಗತ
(೨೦೨೪ರ ಆಗಸ್ಟ್ ೨೪, ೨೫ )

# ಸಂಪದದೊಳಗೆ...


**ಸಂಪಾದಕೀಯ...** ಡಾ. ಸುರೇಶ ಸಗರದ ಪುಟ ೩

**ರಾಜ್ಯಾಧ್ಯಕ್ಷರ ನುಡಿ** ಡಾ. ಶ್ರೀನಿವಾಸ ಎಸ್ ಪುಟ ೪

**ಸಮಿತಿಯ ಅಧ್ಯಕ್ಷರ ನುಡಿ** ಡಾ. ವೀಣಾ ಎನ್. ಸುಳ್ಯ ಪುಟ ೫

**ಜೀವಂತ ಉಯಿಲು (ಪ್ರಚಲಿತ)** ಡಾ. ಕೆ. ರಮೇಶ ಬಾಬು ಪುಟ ೬

**ವೈದ್ಯಕೀಯ ಕ್ಷೇತ್ರ ಅಂದು... ಇಂದು... (ಪ್ರಚಲಿತ)** ಡಾ. ಸುನಂದ ಕುಲಕರ್ಣಿ ಪುಟ ೧೦

**ಜಾಂಡೀಸ್ ಇಲ್ವಾ?!? (ಕಥೆ)** ಡಾ. ಅರುಣಾ ಯಡಿಯಾಳ್ ಪುಟ ೧೩

**ಹೀಗೊಂದು ಹುಟ್ಟುಹಬ್ಬ (ಕಥೆ)** ಡಾ. ವಿನಯಾ ಶ್ರೀನಿವಾಸ ಪುಟ ೧೪

**ನೇತ್ರದಾನ (ಆರೋಗ್ಯ ದಿನಾಚರಣೆ)** ಡಾ. ಇಂದಿರಾ ದೊಡ್ಡಬಳ್ಳಾಪುರ ಪುಟ ೧೫

**ಜೈ ಗುರುದೇವ (ವೈದ್ಯೇತರ)** ಡಾ. ಸುಲೋಚನಾ ಚನಿವಾಲರ ಪುಟ ೧೯

**ತಾಯಿಯಿಂದ ಮಗುವಿಗೆ ಹೆಚ್.ಐ.ವಿ. ಮತ್ತು ಸಿಫಿಲಿಸ್ ಸೋಂಕು (ಕಾಯಿಲೆ / ಚಿಕಿತ್ಸೆ)** ಡಾ. ದಿನೇಶ್ ಗುಡಿ ಪುಟ ೨೨

**ಯೌಗಿಕ ಜೀವನ ಶೈಲಿ (ಅಧ್ಯಾತ್ಮ ಆರೋಗ್ಯ)** ಡಾ. ವೀಣಾ ಎಸ್. ಭಟ್ ಪುಟ ೨೮

**ಸಿಂಧು-ಸರಸ್ವತಿ ಮತ್ತು ಪ್ರಾಚೀನ ಭಾರತದಲ್ಲಿ ಆರೋಗ್ಯ ವಿಜ್ಞಾನ (ವೈದ್ಯ ಲೋಕದ ವಿಸ್ಮಯಗಳು)** ಡಾ. ನಾ. ಸೋಮೇಶ್ವರ ಪುಟ ೩೩

**ಶಿಕಾರಿ (ಕೃತಿ ಪರಿಚಯ)** ಡಾ. ಉಷಾ ಎಂ. ಜಿ. ಪುಟ ೩೮

**ಇತ್ತೀಚಿಗೆ ಬಿಡುಗಡೆಯಾದ ವೈದ್ಯರ ಕೃತಿಗಳು** ಡಾ. ಉಷಾ ಎಂ. ಜಿ. ಪುಟ ೪೨

**ರೋಗಿಯ ಹಕ್ಕುಗಳು (ವೈದ್ಯಕೀಯ ಮತ್ತು ಕಾನೂನು)** ಡಾ. ಶಿವಕುಮಾರ ಕುಂಬಾರ ಪುಟ ೪೪

**ನಾವೂ ಕಳ್ಳನನ್ನು ಹಿಡಿದೆವು! (ಅನಿವಾಸಿ ಲೋಕ)** ಡಾ. ಲಕ್ಷ್ಮೀ ನಾರಾಯಣ ಗುಡೂರ್ ಪುಟ ೪೬

**ಕನ್ನಡ ಚಟುವಟಿಕೆಗಳ ವರದಿ** ಡಾ. ವಿನಯ ಶ್ರೀನಿವಾಸ ಪುಟ ೪೯

**ಬೇರೆ ಮಧುವೇಕೆ ನನಗೆ? (ಕಾವ್ಯ ಸಂಪದ / ವಿಶ್ಲೇಷಣೆ)** ಡಾ. ಗೋವಿಂದ ಹೆಗಡೆ ಪುಟ ೫೩

**ಕಾವ್ಯ ಸಂಪದ** ಡಾ. ಪವನ್ ಕುಮಾರ್ ಎಂ., ಡಾ. ಗೋವಿಂದ ಹೆಗಡೆ ಪುಟ ೫೬

**ಕೆಡವರ್ ಎಂಬ ಜ್ಞಾನ ಸಂಪತ್ತನ್ನು ಭೇಟಿಯಾದ ಕ್ಷಣ (ವಿದ್ಯಾರ್ಥಿ ಲೋಕ)** ವಿನುತಾ ಡಿ. ಪುಟ ೫೮

**ಪದಬಂಧ- ೧೬** ಡಾ. ರಮೇಶ್ ಬಾಬು ಪುಟ ೬೦

**ಕನ್ನಡ ವೈದ್ಯ ಬರಹಗಾರರ 5ನೇ ರಾಜ್ಯ ಸಮ್ಮೇಳನದ**
**ಸರ್ವಾಧ್ಯಕ್ಷರೊಂದಿಗೆ ಸಂದರ್ಶನ (ಸಂದರ್ಶನ)** ಡಾ. ಇಂದಿರಾ ದೊಡ್ಡಬಳ್ಳಾಪುರ ಪುಟ ೬೨

**ಚಿತ್ರ ಸಂಪದ** ಡಾ ಶ್ರೀಕಾಂತ್ ಬಳ್ಳಾರಿ / ಡಾ. ನಾಗರಾಜ ಸಿ. ಎಸ್. / ಡಾ. ಡಿ ಟಿ. ಕೃಷ್ಣಮೂರ್ತಿ / ಡಾ. ನಿತ್ಯ ಸಕಲೇಶ ಪಾಟೀಲ್ ಪುಟ ೬೮

**ಚಿಣ್ಣರ ಲೋಕ** ಡಾ. ಜ್ಯೋತಿ ಘೊಂಗಡೆಮಠ ಪುಟ ೭೧


**ಲೇಖಕರಿಗೆ ಮಾಹಿತಿ:**

ಲೇಖನಗಳನ್ನು ವಿಭಾಗೀಯ ಸಂಪಾದಕರಿಗೆ ಮೇಲ್ ಮೂಲಕ ಕಳುಹಿಸಬೇಕು
ಲೇಖನಗಳನ್ನು ವರ್ಡ್ ಫೈಲ್‌ನಲ್ಲಿ ನುಡಿ ಫಾಂಟ್‌ಗಳನ್ನು ಬಳಸಿ ಬರೆಯಬೇಕು
ಲೇಖನ ಕಳುಹಿಸಿದ ನಂತರ ವಿಭಾಗೀಯ ಸಂಪಾದಕರಿಗೆ ಸಂದೇಶ ಅಥವಾ ವಾಟ್ಸಾಪ್ ಮೂಲಕ ತಿಳಿಸಿ
ಪ್ರಕಟಿಸಿದ ಲೇಖನಗಳಿಗೆ ಲೇಖಕರೆ ಹೊಣೆ

ವೈದ್ಯ ಸಂಪದ ಸಂಪಾದಕ ಮಂಡಳಿ 2024

ಡಾ. ಶ್ರೀನಿವಾಸ್ ಎಸ್, ರಾಜ್ಯಾಧ್ಯಕ್ಷರು
ಡಾ. ಕರುಣಾಕರ ಬಿ ಪಿ, ರಾಜ್ಯ ಕಾರ್ಯದರ್ಶಿ
ಡಾ. ವಿ ವಿ ಚಿನಿವಾಲರ್, ಚುನಾಯಿತ ಅಧ್ಯಕ್ಷರು
ಡಾ. ವೀಣಾ ಎನ್ ಸುಳ್ಯ,
ಅಧ್ಯಕ್ಷರು, ಕನ್ನಡ ವೈದ್ಯ ಬರಹಗಾರರ ಸಮಿತಿ (23–24)
9448215940 I drnveena@gmail.com

ಪ್ರಧಾನ ಸಂಪಾದಕರು
ಡಾ. ಸುರೇಶ ಸಗರದ
9448139339
drssagarad@hotmail.com I vaidyasampadaeditor@gmail.com

ವಿಭಾಗೀಯ ಸಂಪಾದಕರು
ಪ್ರಚಲಿತ – ಡಾ. ಶ್ರೀನಿವಾಸ ಹರಪನಹಳ್ಳಿ
9886236300I h_shrinivas@hotmail.com

ವೈದ್ಯೇತರ – ಡಾ. ಶಿವಾನಂದ ಕುಬಸದ
9448012767I smkubasad@gmail.com

ವಿದ್ಯಾರ್ಥಿ ಲೋಕ – ಡಾ. ಶುಭ್ರತ ಕೆ ಎಸ್
9448149927I shubrataks@gmail.com

ಕಥೆ – ಡಾ. ದಿವ್ಯಾ ಕೆ ಎನ್
9886157094I divyaural@yahoo.co.in

ಕಾಯಿಲೆ / ಚಿಕಿತ್ಸೆ – ಡಾ. ಗಡ್ಡಿ ದಿವಾಕರ
9448371009I gaddidiwakar@gmail.com

ಸಂದರ್ಶನ / ವ್ಯಕ್ತಿ ವಿಷಯ – ಡಾ. ಅರವಿಂದ ಪಟೇಲ್
9448918764I draravindpatel@gmail.com

ಚಿಣ್ಣರ ಲೋಕ / ಹನಿಗವನ – ಡಾ. ಜ್ಯೋತಿ ಘೊಂಗಡೆಮಠ
9242139990I jsgvvd2@gmail.com

ಪದಬಂಧ / ಪದಕೋಶ / ಇತರೆ – ಡಾ. ಸುಮಾ ಗುಡಿ
9880616349I gudi.suma@gmail.com

ಕಾವ್ಯ ಸಂಪದ – ಡಾ. ಜಯಲಕ್ಷ್ಮಿ ನಾಯಕ್
9980070942I drjayalakshminaik@gmail.com

ಕಾವ್ಯ ವಿಶ್ಲೇಷಣೆ – ಡಾ. ಗೋವಿಂದ ಹೆಗಡೆ
9353118024I hegadegs@gmail.com

ಅಧ್ಯಾತ್ಮ ಮತ್ತು ಆರೋಗ್ಯ – ಡಾ. ವೀಣಾ ಎಸ್ ಭಟ್
9480353878I veenaseetharambhat@gmail.com

ಚಿತ್ರ ಸಂಪದ – ಡಾ. ಶಾಂತಲಾ / ಡಾ. ಪ್ರಿಯಾ ಭಾಲ್ಕಿ
9448679684I shanyashas@gmail.com
9980888922 Idrpriyabhalki@gmail.com

ಸಂಘಟನೆ – ಡಾ. ಮಧುಸೂದನ ಕಾರಿಗನೂರು
9448237145I madhusudhanva@gmail.com

ಕಾನೂನು ಮತ್ತು ವೈದ್ಯಕೀಯ – ಡಾ. ಶಿವಕುಮಾರ ಕುಂಬಾರ
9448114421I docshivak@gmail.com

ಕೃತಿ ಪರಿಚಯ – ಡಾ. ಉಷಾ ಎಂ ಜಿ
9448667233 I ushaumeshdvg@rediffmail.com

ವೈದ್ಯ ಲೋಕದ ವಿಸ್ಮಯ – ಡಾ. ನಾ. ಸೋಮೇಶ್ವರ
9880465661 I naasomeshwara@gmail.com

ವರದಿ – ಡಾ. ವಿನಯ ಶ್ರೀನಿವಾಸ್
9844083284 I vinaya_s@rocketmail.com

ಅನಿವಾಸಿ ಲೋಕ – ಡಾ. ರಾಮಶರಣ ಎಲ್
+447825447939 I lramasharan@hotmail.com

ಆರೋಗ್ಯ ದಿನಾಚರಣೆ – ಡಾ. ಇಂದಿರಾ ದೊಡ್ಡಬಳ್ಳಾಪುರ
8970821216 I indirashyamprasad@gmail.com

# ಸಂಪಾದಕೀಯ...



## ಡಾ. ಸುರೇಶ ಸಗರದ

ಆತ್ಮೀಯ ಓದುಗರೇ...

ವೈದ್ಯರ ದಿನಾಚರಣೆಯ ಶುಭಾಶಯಗಳು. ವೈದ್ಯರ ದಿನಾಚರಣೆ ಡಾ. ಬಿ. ಸಿ. ರಾಯ್ ಅವರ ಬದುಕು ಮತ್ತು ಧ್ಯೇಯಗಳನ್ನು ಮೆಲುಕು ಹಾಕುವ ದಿನ. ಹಾಗೆ ಎಲ್ಲಾ ವೈದ್ಯರು ಆತ್ಮಾವಲೋಕನ ಮಾಡಬೇಕಾದ ದಿನ. ವೃತ್ತಿ ಗೌರವದ ಕುರಿತು ಸಂಕಲ್ಪ ಮಾಡುವ ದಿನ. ಬದುಕು ಅನಂತವಲ್ಲ. ಆದರೆ ಬದುಕುವ ಕಲೆ ಮತ್ತು ಬದುಕಿಸುವ ಕಲೆ ಅನಂತ! ಜುಲೈ ೧ ರಂದು ಆಧುನಿಕ ವೈದ್ಯ ಪದ್ಧತಿಯಲ್ಲಿ ಕರುನಾಡಿನ ಪದ್ಮ ಪ್ರಶಸ್ತಿ ಪುರಸ್ಕೃತ ವೈದ್ಯರ ಕುರಿತು ಕೃತಿ ಲೋಕಾರ್ಪಣೆ ಆಗುತ್ತಿರುವುದು ಸಂತಸದ ಹಾಗೂ ಪ್ರೇರಣೆಯ ವಿಷಯ.

ವೈದ್ಯ ವೃತ್ತಿ ಅನೇಕ ಸಂಕಷ್ಟ ಮತ್ತು ಸವಾಲುಗಳ ನಡುವೆಯೂ ಶ್ರೇಷ್ಠತೆಯನ್ನು ಮೆರೆದಿದೆ. ಪರಂಪರೆಯನ್ನು ಮೆಲುಕು ಹಾಕಿದಾಗ ಈ ವೃತ್ತಿಗೆ ದೊರಕಿರುವ ಗೌರವ ಅಪಾರ. ಆಧುನಿಕ ವೈದ್ಯ ಪದ್ಧತಿ ವೈಜ್ಞಾನಿಕ ತಳಹದಿಯ ಮೇಲೆ ಅಗಣಿತವಾಗಿ ಬೆಳೆದಿದೆ. ಆರೋಗ್ಯ ಕ್ಷೇತ್ರದ ಆವಿಷ್ಕಾರಗಳು ಸಾವನ್ನು ಮುಂದೂಡುವಲ್ಲಿ ಸಾಫಲ್ಯ ಕಂಡಿವೆ. ಹಾಗೆಯೇ ಆರ್ಥಿಕ ಪ್ರಗತಿ ಸಾಮಾನ್ಯ ವ್ಯಕ್ತಿಗೂ ಗುಣಮಟ್ಟದ ಚಿಕಿತ್ಸೆ ಲಭ್ಯವಾಗಲು ಸಾಧ್ಯವಾಗಿದೆ. ಇದು ಎಷ್ಟರಮಟ್ಟಿಗೆ ಅಭಿಪ್ರಾಯ ಬೆಳೆಸಿದೆ ಎಂದರೆ ಇಂದು ರೋಗಿ ಗುಣವಾಗದಿದ್ದರೆ ಅದು ವೈದ್ಯಕೀಯ ವೈಫಲ್ಯ ಮತ್ತು ವೈದ್ಯರ ನಿರ್ಲಕ್ಷ್ಯ ಎಂದು ತಿಳಿಯಲಾಗುತ್ತಿದೆ. ಇದರಿಂದಾಗಿ ರೋಗಿಗಳು ಮೃತ ಹೊಂದಿದಾಗ ಗಲಾಟೆಗಳು ಹಲ್ಲೆಗಳು ಮತ್ತು ಆರೋಪಗಳು ಸಾಮಾನ್ಯವಾಗುತ್ತಿವೆ. ಗ್ರಾಹಕ ನ್ಯಾಯಾಲಯಗಳಲ್ಲಿ ವ್ಯಾಜ್ಯಗಳ ಸಂಖ್ಯೆ ಹೆಚ್ಚುತ್ತಿದೆ. ಇದು ಹೀಗೆ ಮುಂದುವರೆದರೆ ಪರಂಪರಾಗತ ವೃತ್ತಿ ಜೀವನ ಕಷ್ಟ. ವೈದ್ಯಕೀಯ ಶಿಕ್ಷಣವನ್ನು ವಾಣಿಜ್ಯೀಕರಣಗೊಳಿಸಿದ್ದು,

೫೭ನೇ ಪುಟಕ್ಕೆ



# ವೈದ್ಯರ ನಿತ್ಯೋತ್ಸವ!

**ಡಾ. ಶ್ರೀನಿವಾಸ ಎಸ್.**
ರಾಜ್ಯಾಧ್ಯಕ್ಷರು, ಭಾರತೀಯ ವೈದ್ಯಕೀಯ ಸಂಘ,
ಕರ್ನಾಟಕ ರಾಜ್ಯ ಶಾಖೆ

ಆತ್ಮೀಯ ವೈದ್ಯ ಸಂಪದ ಓದುಗರೇ

ರಾಷ್ಟ್ರೀಯ ವೈದ್ಯರ ದಿನಾಚರಣೆಯ ಹಾರ್ದಿಕ ಶುಭಾಶಯಗಳು.

ಡಾ. ಬಿ. ಸಿ. ರಾಯ್ ಅವರ ಜಯಂತ್ಯುತ್ಸವ ಎಲ್ಲ ವೈದ್ಯರ ನಿತ್ಯೋತ್ಸವವಾಗಬೇಕು. ಅವರ ಆಶೋತ್ತರಗಳು ಈಡೇರಲಿ. ನಮ್ಮ ಅನೇಕ ಹಿರಿಯ ವೈದ್ಯರು ಭಾರತೀಯ ವೈದ್ಯ ಪರಂಪರೆಗೆ ನಾಂದಿ ಹಾಡಿದ್ದಾರೆ. ಆ ಭದ್ರ ಬುನಾದಿಯ ಮೇಲೆ ಹೊಸ ಪಯಣ ಸಾಗಿದೆ. ಬದಲಾಗುತ್ತಿರುವ ಕಾಲ ಘಟ್ಟದಲ್ಲಿ ಹೊಸ ಪೀಳಿಗೆ ಹೊಸ ಹೊಸ ಸವಾಲುಗಳನ್ನು ಎದುರಿಸಬೇಕಿದೆ. ಅದಕ್ಕೆ ಹಿರಿಯ ವೈದ್ಯರ ಮಾರ್ಗದರ್ಶನವೂ ಅವಶ್ಯಕ. ರಾಜ್ಯ ಮಟ್ಟದಲ್ಲಿ ಮತ್ತು ಕೇಂದ್ರ ಮಟ್ಟದಲ್ಲಿ ರಾಷ್ಟ್ರೀಯ ವೈದ್ಯರ ದಿನಾಚರಣೆಯ ಅಂಗವಾಗಿ ಪ್ರಶಸ್ತಿ ಮತ್ತು ಗೌರವ ಸ್ವೀಕರಿಸುತ್ತಿರುವ ಹಿರಿಯ ವೈದ್ಯ ಸಾಧಕರಿಗೆ ಅಭಿನಂದನೆಗಳು.

ಚುನಾವಣೆಯ ನಂತರ ಹೊಸ ಸರಕಾರ ಕೇಂದ್ರದಲ್ಲಿ ಅಸ್ಥಿತ್ವಕ್ಕೆ ಬಂದಿದೆ. ಪುನಹ ಶ್ರೀಮತಿ ನಿರ್ಮಲ ಸೀತಾರಾಮನ್ ಅವರು ವಿತ್ತ ಸಚಿವರಾಗಿ ಆಯ್ಕೆಯಾಗಿದ್ದಾರೆ. ಕಳೆದ ಅವಧಿಯಲ್ಲಿಯೂ ಭಾರತೀಯ ವೈದ್ಯಕೀಯ ಸಂಘ ಅವರಿಗೆ ಸಂಘದ ಆಶಯಗಳನ್ನು ತಿಳಿಸಿದೆ. ಸಾರ್ವಜನಿಕ ಆರೋಗ್ಯದ ಹಿತದೃಷ್ಟಿಯಿಂದ ವಿತ್ತವರ್ಷದಲ್ಲಿ ಆರೋಗ್ಯ ಕ್ಷೇತ್ರಕ್ಕೆ ಒತ್ತು ನೀಡುವ ಬೇಡಿಕೆ ಬಹು ದಿನಗಳಿಂದ ಇದೆ. ಚುನಾವಣಾ ಪೂರ್ವದಲ್ಲಿ ಪೂರ್ಣ ಪ್ರಮಾಣದ ಆಯವ್ಯಯ ಮಂಡನೆಯಾಗಿರಲಿಲ್ಲ. ಈಗ ಪೂರ್ಣ ಪ್ರಮಾಣದ ಆಯವ್ಯಯ ಮಂಡನೆಗೆ ಸಿದ್ಧತೆ ನಡೆದಿದೆ. ಭಾರತೀಯ ವೈದ್ಯಕೀಯ ಸಂಘದ ಕೇಂದ್ರೀಯ ಪದಾಧಿಕಾರಿಗಳು ಸಚಿವರನ್ನು ಭೇಟಿಯಾಗಿ ಭಾರತೀಯ ವೈದ್ಯಕೀಯ ಸಂಘದ ಚುನಾವಣಾ ಪ್ರಣಾಳಿಕೆಯನ್ನು ಸಲ್ಲಿಸಿ ಬೇಡಿಕೆಗಳನ್ನು ಗಮನಿಸಲು ಮನವಿ ಮಾಡಬೇಕಿದೆ. ಡಾ. ಜಗತ್ ಪ್ರಕಾಶ ನಡ್ಡಾ ಅವರು ಕೇಂದ್ರ ಆರೋಗ್ಯ ಮಂತ್ರಿಯಾಗಿ ಆಯ್ಕೆಯಾಗಿರುವುದು ಸ್ವಾಗತಾರ್ಹ. ಅವರ ಅನುಭವ ಮತ್ತು ಕಾರ್ಯ ದಕ್ಷತೆ ಆರೋಗ್ಯ ಕ್ಷೇತ್ರದ ಮುನ್ನಡೆಗೆ ಸಾಕ್ಷಿಯಾಗಲಿ. ಅದೇ ರೀತಿಯಾಗಿ ಶ್ರೀ ಜಾಧವ ಪ್ರತಾಪರಾವ್ ಗಣಪತರಾವ್ ಹಾಗೂ ಶ್ರೀಮತಿ ಅನುಪ್ರಿಯಾ ಪಟೇಲ್ ಅವರು ರಾಜ್ಯ ಮಂತ್ರಿಗಳಾಗಿ ಶ್ರೀ ಜೆ. ಪಿ. ನಡ್ಡಾ ಅವರಿಗೆ ಸಹಾಯ ಮಾಡಲಿದ್ದಾರೆ. ಭಾರತೀಯ ವೈದ್ಯಕೀಯ ಸಂಘ ಹೊಸ ಸರಕಾರದ ಆಶಯಗಳಿಗೆ ಸಂಪೂರ್ಣ ಸಹಕಾರ ನೀಡಲು ಸಿದ್ಧವಿದೆ. ವೈದ್ಯಕೀಯ ಶಿಕ್ಷಣ ಮತ್ತು ನೀಟ್ ಪರೀಕ್ಷೆಗಳ ಗೊಂದಲವನ್ನು ಸಮರೋಪಾದಿಯಲ್ಲಿ ಸರಿಪಡಿಸಬೇಕಾಗಿದೆ.

ಆಗಸ್ಟ್ ೨೪ ಮತ್ತು ೨೫ರಂದು ಕನ್ನಡ ವೈದ್ಯ ಬರಹಗಾರರ ಐದನೇ ರಾಜ್ಯ ಸಮ್ಮೇಳನ ಡಾ. ನಾ. ಸೋಮೇಶ್ವರ ಅವರ ಸರ್ವಾಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಆಯೋಜಿಸಲಾಗುತ್ತಿದೆ. ಎಲ್ಲಾ ಕನ್ನಡ ಮನಸ್ಸುಗಳು ಕುಂದಾನಗರಿಯಲ್ಲಿ ಸೇರಿ ಕನ್ನಡ ತೇರನ್ನು ಎಳೆಯೋಣ. ರಾಜ್ಯ ಶಾಖೆ ಎಲ್ಲಾ ರೀತಿಯ ಸಹಕಾರ ನೀಡಲು ಸಿದ್ಧವಿದೆ.

ಮತ್ತೊಮ್ಮೆ ವೈದ್ಯ ದಿನಾಚರಣೆಯ ಶುಭಾಶಯಗಳು...



# ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ

**ಡಾ. ವೀಣಾ ಎನ್. ಸುಳ್ಯ**
ಅಧ್ಯಕ್ಷರು,
ಕನ್ನಡ ವೈದ್ಯ ಬರಹಗಾರರ ಸಮಿತಿ (೨೦೨೩–೨೦೨೪)

ಆತ್ಮೀಯ ಓದುಗರೇ

ಎಲ್ಲಾ ಕನ್ನಡ ಮನಸುಗಳಿಗೆ ನಮಸ್ಕಾರ

ವೈದ್ಯ ದಿನಾಚರಣೆಯ ಶುಭಾಶಯಗಳು ಡಾ. ಬಿದನಚಂದ್ರರಾಯ ಅವರ ಹುಟ್ಟಿದ ದಿನವೂ ಪುಣ್ಯ ಜಯಂತಿಯ ದಿನವೂ ಆದ ಜುಲೈ ಒಂದರಂದು ನಮ್ಮ ದೇಶದಲ್ಲಿ ವೈದ್ಯ ದಿನಾಚರಣೆಯನ್ನಾಗಿ ಆಚರಿಸುತಿದ್ದೇವೆ.

**ಯದ್ಯದಾಚರತಿ ಶ್ರೇಷ್ಠ: ತತ್ತದೇವೇತರೋ ಜನಃ**
**ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೆ.**

ಲೋಕದಲ್ಲಿ ಉನ್ನತಸ್ಥಾನದಲ್ಲಿ ಇರುವವರು ಹೇಗೆ ವರ್ತಿಸುತ್ತಾರೋ ಹಾಗೆಯೇ ಲೋಕ ಅವರನ್ನು ಅನುಸರಿಸುತ್ತದೆ ಎನ್ನುವ ಗೀತೆಯ ಮಾತಿನಂತೆ ಶ್ರೇಷ್ಠವಾದ ಬದುಕನ್ನು ಬಾಳಿ ಬದುಕಿದವರು. ಶ್ರೇಷ್ಠ ರಾಜಕಾರಣಿಯಾಗಿ, ಕರ್ಮಯೋಗಿಯಾಗಿ, ಜ್ಞಾನಯೋಗಿಯಾಗಿ ದೇಶದ ಅಭಿವೃದ್ಧಿಗಾಗಿ ತನ್ನ ಬದುಕನ್ನು ಮುಡಿಪಾಗಿಟ್ಟವರು. ತನ್ನದಾದ ಎಲ್ಲವನ್ನು ದೇಶಕ್ಕೆ ಸಮರ್ಪಣೆ ಮಾಡಿದವರು. ಅಷ್ಟೇ ಅಲ್ಲದೆ ನಮ್ಮ ಆಧುನಿಕ ವೈದ್ಯ ಪದ್ಧತಿಯ ವೈದ್ಯರಿಗಾಗಿ ಭಾರತೀಯ ವೈದ್ಯಕೀಯ ಸಂಘದ ಸ್ಥಾಪನೆ ಮಾಡಿ ಅದಕ್ಕೊಂದು ರೂಪುರೇಷೆಗಳ ಕೊಟ್ಟವರು. ಅವರ ನೆನಪಿನಲ್ಲಿ ಆಚರಿಸುತ್ತಿರುವ ವೈದ್ಯ ದಿನಾಚರಣೆಯ ದಿನದಂದು ಅವರ ಆಶೋತ್ತರಗಳು ಪೂರ್ಣಗೊಳ್ಳುವಂತಾಗಲಿ ಎಂದು ಮತ್ತೊಮ್ಮೆ ಹಾರೈಸುತ್ತೇನೆ.

'ವೈದ್ಯ ಪದ್ಮರು'–ಆಧುನಿಕ ವೈದ್ಯ ಪದ್ಧತಿಯ ಪದ್ಮ ಪುರಸ್ಕೃತ ಕರುನಾಡ ವೈದ್ಯರು ಎಂಬ ಪುಸ್ತಕ ಡಾ. ನಾ. ಸೋಮೇಶ್ವರರ ಸಂಪಾದಕತ್ವದಲ್ಲಿ ಜುಲೈ ೧ರಂದು ಲೋಕಾರ್ಪಣೆಗೊಳ್ಳಲಿದೆ. ನಮ್ಮ ಹಿರಿಯ ವೈದ್ಯರ ದೂರದರ್ಶಿತ್ವ, ಕಾರ್ಯಕ್ಷಮತೆ ಮತ್ತು ಕಾಯಕವೇ ಕೈಲಾಸ ಎನ್ನುವ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು ಬದುಕಿ ಬಾಳಿದ ರೀತಿಯನ್ನು ವಿಶದಪಡಿಸುವ ಪುಸ್ತಕ ನಮ್ಮ ಎಲ್ಲಾ ಕಿರಿಯ ವೈದ್ಯರಿಗೆ ಮಾರ್ಗದರ್ಶಿಯಾಗಲಿದೆ.

ಇದೇ ಆಗಸ್ಟ್ ತಿಂಗಳ ೨೪, ೨೫ರಂದು ಬೆಳಗಾವಿ ಕೆ. ಎಲ್. ಇ. ಜವಾಹರಲಾಲ ನೆಹರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ, ಭಾರತೀಯ ವೈದ್ಯಕೀಯ ಸಂಘ ಬೆಳಗಾವಿ ಶಾಖೆಯ ಸಹಯೋಗದಲ್ಲಿ ನಮ್ಮ ಕನ್ನಡ ವೈದ್ಯ ಬರಹಗಾರರ ಐದನೆಯ ವಾರ್ಷಿಕ ಸಮ್ಮೇಳನ ನಡೆಯಲಿದೆ. ಕನ್ನಡ ಸಾಹಿತ್ಯ ಪರಿಚಾರಿಕೆ ಎಷ್ಟು ಮುಖ್ಯವೋ ಅಷ್ಟೇ ಕನ್ನಡ ಬರಹಗಾರರ ಸಮ್ಮಿಲನ, ಮಾತುಕತೆ, ಚರ್ಚೆ ಸಂಭ್ರಮ, ಇವು ಎಲ್ಲದಕ್ಕೂ ತನ್ನದೇ ಆದ ಸ್ಥಾನವಿದೆ. ವೈದ್ಯ ವಿದ್ಯಾರ್ಥಿಗಳಿಗಾಗಿ, ರಸಪ್ರಶ್ನೆ ಕಾರ್ಯಕ್ರಮ, ಕವಿಗೋಷ್ಠಿ, ಕಾವ್ಯ–ಕಥಾ ಕಮ್ಮಟಗಳನ್ನು ಆಯೋಜಿಸಲಾಗುತ್ತದೆ. ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ನೋಂದಾಯಿಸಿಕೊಂಡು, ಬಿಡುವು ಮಾಡಿಕೊಂಡು ನಿಮ್ಮ ಅಮೂಲ್ಯ ಸಮಯವನ್ನು ನಮ್ಮೊಡನೆ ಕಳೆಯಬೇಕಾಗಿ ಬಳಗದ ಪರವಾಗಿ ಸವಿನಯ ಪ್ರಾರ್ಥನೆ.

– ಡಾ. ವೀಣಾ ಎನ್. ಸುಳ್ಯ

○



**ಡಾ. ಕೆ. ರಮೇಶ ಬಾಬು**
ನಿವೃತ್ತ ವೈದ್ಯಕೀಯ ಪ್ರಾಧ್ಯಾಪಕರು,
ಹುಬ್ಬಳ್ಳಿ.

ಪ್ರಚಲಿತ

# ಜೀವಂತ ಉಯಿಲು



ಡಾ ಶ್ರೀನಿವಾಸ ಹರಪನಹಳ್ಳಿ
ವಿಭಾಗೀಯ ಸಂಪಾದಕರು

ಸುಮಾರು ನಲವತ್ತು ವರ್ಷಗಳ ಹಿಂದೆ ನಾನು ಬಳ್ಳಾರಿ ವೈದ್ಯಕೀಯ ವಿದ್ಯಾಲಯದಲ್ಲಿ ಕಾರ್ಯ ನಿರ್ವಹಿಸುತ್ತಿದ್ದೆ. ಈ ವಿದ್ಯಾಲಯದ ಸನಿಹದಲ್ಲಿಯೇ ಇರುವ ಸಿಬ್ಬಂದಿ ನಿವಾಸಗಳಲ್ಲಿ ನನ್ನ ವಾಸವಿತ್ತು. ವೈದ್ಯಕೀಯ ವಿದ್ಯಾಲಯದ ಆಸ್ಪತ್ರೆಗೆ ಸನಿಹದಲ್ಲಿಯೇ ನಿವೃತ್ತ ಕ್ರೈಸ್ತ ಪಾದ್ರಿಗಳ ನಿವಾಸವೊಂದಿತ್ತು. ನಾನು ಆ ನಿವಾಸಕ್ಕೆ ಗೌರವ ವೈದ್ಯಾಧಿಕಾರಿಯಾಗಿ ನಿಯಮಿತವಾಗಿ ಭೇಟಿ ನೀಡುತ್ತಿದ್ದೆ. ಒಂದು ರಾತ್ರಿ ಸುಮಾರು ಎರಡು ಗಂಟೆಯ ಹೊತ್ತಿಗೆ ನನಗೆ ಆ ನಿವಾಸದಿಂದ ತುರ್ತು ಕರೆ ಬಂದಿತ್ತು. ನಾನು ತಕ್ಷಣವೇ ಅಲ್ಲಿಗೆ ಹೋದಾಗ, ಆ ನಿವಾಸದಲ್ಲಿದ್ದ ಒಬ್ಬ ನಿವೃತ್ತ ಬಿಷಪ್‌ರಿಗೆ ಎದೆ ನೋವು ಕಾಣಿಸಿಕೊಂಡಿತ್ತು ಎಂದು ತಿಳಿಯಿತು. ಅವರನ್ನು ಪರೀಕ್ಷಿಸಿದಾಗ ಅವರಿಗೆ ತೀವ್ರತರದ ಹೃದಯಾಘಾತವಾಗಿದೆ ಎಂದು ತಿಳಿಯಿತು. ತುರ್ತು ಚಿಕಿತ್ಸೆಗೆ ಆಸ್ಪತ್ರೆಗೆ ಅವರನ್ನು ಸಾಗಿಸಲು ಸಲಹೆ ನೀಡಿದೆ. ಆದರೆ ಆ ಬಿಷಪ್ ನನ್ನ ಸಲಹೆಯನ್ನು ನಯವಾಗಿ ತಿರಸ್ಕರಿಸಿ, “ನನ್ನ ಅಂತ್ಯ ಕಾಲ ಸಮೀಪಿಸಿದೆ, ದಯವಿಟ್ಟು ಆಸ್ಪತ್ರೆಗೆ ಸೇರಿಸಬೇಡಿ, ಕೇವಲ ನೋವಿಗಾಗಿ ಔಷಧಿ ನೀಡಿ” ಎಂದು ನನ್ನನ್ನು ಕೋರಿದರು. ಅದರಂತೆ ಅವರಿಗೆ ನಾನು ನೋವು ನಿವಾರಕ ಚುಚ್ಚುಮದ್ದೊಂದನ್ನು ನೀಡಿ ಸ್ವಲ್ಪ ಹೊತ್ತು ಅವರನ್ನು ಗಮನಿಸುವ ಉದ್ದೇಶದಿಂದ ಅಲ್ಲಿಯೇ ಕುಳಿತೆ. ಆಗ ಅವರು ಆ ನಿವಾಸದಲ್ಲಿದ್ದ ಇತರ ನಿವಾಸಿಗಳನ್ನು ಕರೆಸಿಕೊಂಡು, ಪ್ರತಿಯೊಬ್ಬರ ಕೈ ಹಿಡಿದು ಅವರು ತಮಗೆ ಮಾಡಿರಬಹುದಾದ ಸಹಾಯಕ್ಕೆ ಕೃತಜ್ಞತೆಗಳನ್ನು ಅರ್ಪಿಸಿದರು. ಅದನ್ನು ನೋಡುತ್ತಿರುವಾಗ, ಯಾವುದಾದರೂ ಕಾರ್ಯಕ್ರಮದ ಕೊನೆಯಲ್ಲಿ ನಡೆಯಬಹುದಾದ ವಂದನಾರ್ಪಣೆಯಂತೆ ತೋರಿತು. ಕೆಲ ಹೊತ್ತಿನ ನಂತರ ಅವರ ಶ್ವಾಸ ಕ್ರಿಯೆ ನಿಂತು ಹೋಗಿ ಶಾಂತವಾಗಿ ನಿಧನ ಹೊಂದಿದರು.

ಈ ಪ್ರಸಂಗವನ್ನು ನೆನೆಯುವಾಗಲೆಲ್ಲಾ ನನಗೆ ಆ ಬಿಷಪ್ ರ ಬಗ್ಗೆ ಅಸೂಯೆ ಎನಿಸುತ್ತದೆ. ನಮ್ಮ ಜೀವನದಲ್ಲಿ ನಾವು ಭಾಗವಹಿಸಬಹುದಾದ ಅದೆಷ್ಟೋ ಚಿಕ್ಕಪುಟ್ಟ ಕಾರ್ಯಕ್ರಮಗಳಲ್ಲಿ ಕೂಡಾ ವಂದನಾರ್ಪಣೆ ಮಾಡಿರುತ್ತೇವೆ. ಆದರೆ ನಮ್ಮ ಜೀವನವೆಂಬ ಅತಿ ಮುಖ್ಯ ಕಾರ್ಯಕ್ರಮ ಮುಗಿಯುತ್ತಿರುವಾಗ ವಂದನಾರ್ಪಣೆ ಮಾಡುವ ಭಾಗ್ಯ ಅದೆಷ್ಟು ಜನರಿಗೆ ದೊರೆಯುತ್ತದೆ? ಒಂದು ವೇಳೆ ನಮ್ಮ ಅಂತ್ಯ ಸಮೀಪಿಸಿದೆ ಎಂದು ತಿಳಿದರೂ ಆ ಹೊತ್ತಿನಲ್ಲಿ ವಂದನಾರ್ಪಣೆ ಮಾಡುವ ಮನೋಸ್ಥಿತಿ ನಮಗಿರುತ್ತದೆಯೇ? ಇಂತಹ ವಿಚಾರಗಳು ನನ್ನಲ್ಲಿ ಸುಳಿಯುತ್ತಿರುವಾಗ, ನಮ್ಮ ಅಂತ್ಯದ ವೇಳೆ ನಮಗೆ ತಿಳಿಯುವಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು ಯೋಚಿಸುತ್ತೇನೆ. ಹಾಗೆ ಸಾಧ್ಯವಾಗುವುದಿದ್ದರೆ ನಮ್ಮ ಈ ಕೊನೆಯ ವಂದನಾರ್ಪಣೆಯ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನೆರವೇರಿಸುವ ಅವಕಾಶವಿರುತ್ತಿತ್ತು. ಹೀಗೆ ಯೋಚಿಸುತ್ತಿರುವಾಗ ನಮ್ಮೆಲ್ಲರ ಅಂತ್ಯ ಒಂದು ಪೂರ್ವನಿಶ್ಚಿತ ದಿನದಂದು ಆಗುವಂತಿದ್ದು ಆ




ದಿನದಂದು ಇದ್ದಕ್ಕಿದ್ದಂತೆ 'ಸ್ವಿಚ್ ಆಫ್' ಮಾಡಿದಂತೆ ನಮ್ಮ ಅಂತ್ಯವಾಗುವಂತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂಬ ಹುಚ್ಚು ಯೋಚನೆಯೂ ಬರುತ್ತಿತ್ತು. ಇದೇ ಸಮಯದಲ್ಲಿ ಇದಕ್ಕೆ ಪೂರಕವಾಗಿ ದಯಾಮರಣದ ಬಗ್ಗೆ ನನ್ನ ಒಲವೂ ಹೆಚ್ಚುತ್ತಿತ್ತು.

ಹಲವಾರು ವರ್ಷಗಳ ಕೆಳಗೆ ನಾನು ಒಂದು ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ, ಒಂದು ದಿನ ಎಂದಿನಂತೆ ಐ.ಸಿ.ಯುಗೆ ನನ್ನ ರೋಗಿಗಳನ್ನು ತಪಾಸಿಸಲು ಹೋಗಿದ್ದೆ. ಒಬ್ಬ ರೋಗಿಯ ಕೇಸ್ ಶೀಟ್ ನೋಡುತ್ತಿದ್ದಾಗ, ಅವನಿಗೆ ಅಗತ್ಯವಾಗಿ ಕೊಡಬೇಕಾಗಿದ್ದ ಒಂದೆರಡು ಚುಚ್ಚುಮದ್ದುಗಳನ್ನು ನೀಡದೇ ಇರುವುದನ್ನು ಗಮನಿಸಿದೆ. ನಾನು ತಕ್ಷಣವೇ ಐ. ಸಿ. ಯುನ ದಾದಿಯನ್ನು ಕರೆದು ಚುಚ್ಚುಮದ್ದುಗಳನ್ನು ಏಕೆ ನೀಡಲಿಲ್ಲವೆಂದು ಕೇಳಿದೆ. ಅದಕ್ಕೆ ಆಕೆ, 'ಸರ್, ಈ ರೋಗಿಯ ಸಂಬಂಧಿಗಳಿಗೆ ನಾವು ಈ ಚುಚ್ಚುಮದ್ದುಗಳನ್ನು ಬರೆದು ಕೊಟ್ಟು ತಂದುಕೊಡಲು ಹೇಳಿದ್ದೆವು. ಆದರೆ ಅವರು ಇದುವರೆಗೂ ತಂದು ಕೊಟ್ಟಿಲ್ಲ' ಎಂದು ಹೇಳಿದಳು. ನನಗೆ ಸ್ವಲ್ಪ ಅಸಮಾಧಾನವಾಯಿತು. ಆ ರೋಗಿಯ ಸಂಬಂಧಿಗಳನ್ನು ಕರೆದು, "ನೀವು ಔಷಧಿಗಳನ್ನು ತಂದು ಕೊಡದೇ ಹೋದರೆ ನಾವು ಹೇಗೆ ಉಪಚಾರ ಮಾಡಲು ಸಾಧ್ಯ?" ಎಂದು ತುಸು ಗಡುಸಾಗಿಯೇ ಕೇಳಿದೆ. ಅದಕ್ಕೆ ಆತ, 'ಸರ್, ನಿನ್ನೆಯವರೆಗೂ ಅಲ್ಲಿ ಇಲ್ಲಿ ಸಾಲ ಮಾಡಿ ಔಷಧಿಗಳನ್ನು ತಂದೆವು. ಈಗ ಎಲ್ಲಿಯೂ ಸಾಲ ಹುಟ್ಟುತ್ತಿಲ್ಲ. ಇನ್ನು ನಮ್ಮ ಮನೆ ಅಡ ಇಡುವುದು ಇಲ್ಲವೇ ಮಾರುವುದು ನಮಗೆ ಉಳಿದಿರುವ ಉಪಾಯ. ಅದು ತಕ್ಷಣಕ್ಕೆ ಸಾಧ್ಯವಿಲ್ಲ....' ಎಂದು ಬೇಸರದಿಂದ ನುಡಿದ. ಈ ಒಂದು ಪ್ರಕರಣ ನನ್ನನ್ನು ಆಳವಾಗಿ ಚುಚ್ಚಿತು. ಇಂತಹ ಸಂದರ್ಭಗಳಲ್ಲಿ ವೈದ್ಯರೇನು ಮಾಡಬೇಕು? ಕೇವಲ ಎರಡು ಇಂಜೆಕ್ಷನ್ ನ ವಿಷಯವಾಗಿದ್ದರೆ, ನಾನೇ ನನ್ನ ಹಣ ಕೊಟ್ಟು ಸಹಾಯ ಮಾಡಬಹುದಿತ್ತು. ಆದರೆ, ಅದು ಅಂತಹ ಪ್ರಕರಣವಾಗಿರಲಿಲ್ಲ. ಇನ್ನೂ ಹಲವಾರು ದಿನಗಳವರೆಗೆ ಸ್ವಲ್ಪ ದುಬಾರಿ ಎನ್ನುವಷ್ಟು ಉಪಚಾರದ ಅಗತ್ಯವಿತ್ತು. ಅಲ್ಲದೇ ಆ ವ್ಯಕ್ತಿ ಬದುಕುಳಿಯುವ ಸಾಧ್ಯತೆಯೂ ತುಂಬಾ ಕ್ಷೀಣವಾಗಿತ್ತು. ಯಾವುದೇ ಒಬ್ಬ ವ್ಯಕ್ತಿಯ ಆರೋಗ್ಯದಲ್ಲಿ ಇದ್ದಕ್ಕಿದ್ದಂತೆ ತೀವ್ರ ಅವ್ಯವಸ್ಥೆ ಕಂಡುಬಂದಾಗ ಅವನ ಸಂಬಂಧಿಗಳು ಅವನನ್ನು ತಕ್ಷಣವೇ ಅತಿ ಹತ್ತಿರದ ಆಸ್ಪತ್ರೆಗೆ ಕರೆದೊಯ್ದು ದಾಖಲು ಮಾಡುವುದು ಬಹಳ ಸಾಮಾನ್ಯವಾಗಿದೆ. ಆ ಸಂದರ್ಭದಲ್ಲಿ ಅವರು ಅದು ಎಂತಹ ಆಸ್ಪತ್ರೆ ಎಂಬ ಬಗ್ಗೆ ಯೋಚಿಸಿಯೇ ಇರುವುದಿಲ್ಲ. ಅದೊಂದು ಖಾಸಗಿ ಆಸ್ಪತ್ರೆಯಾಗಿದ್ದು ದಿನದಿನವೂ ಹಣ ವೆಚ್ಚಮಾಡಬೇಕಾಗಿ ಬಂದಾಗ ಮಾತ್ರ ಅವರಿಗೆ ತಮ್ಮ ತಪ್ಪಿನ ಅರಿವಾಗಿರುತ್ತದೆ. ಅವರಿಗೆ ಹಣದ ತೊಂದರೆ ಇದೆಯೆಂದು, ಚಿಕಿತ್ಸೆಯನ್ನು ಅರ್ಧದಲ್ಲಿಯೇ ನಿಲ್ಲಿಸಿ, ರೋಗಿಯನ್ನು ಮನೆಗೆ ಕಳಿಸುವುದು ಅಥವಾ ಸರಕಾರಿ ಆಸ್ಪತ್ರೆಗೆ ಕಳುಹಿಸುವುದು ಸಾಧ್ಯವಾಗುವುದಿಲ್ಲ. ಇಂತಹ ಸಂಕಟ ಪರಿಸ್ಥಿತಿಯನ್ನು ತಡೆಗಟ್ಟುವುದು ಹೇಗೆ ಎಂದು ಬಹಳಷ್ಟು ಬಾರಿ ನಾನು ಯೋಚಿಸಿದ್ದೇನೆ.

ದಯಾಮರಣದ ಪರವಾಗಿ ಇಲ್ಲವೇ ವಿರೋಧವಾಗಿ ಅನೇಕ ದಶಕಗಳಿಂದ ಸಾಕಷ್ಟು ಚರ್ಚೆಗಳಾಗಿವೆ. ಆದರೂ ಇದುವರೆಗೂ ಇದರ ಕುರಿತಾಗಿ ಒಂದು ಖಚಿತ ನಿಲುವನ್ನು ತಳೆಯಲು ಸಾಧ್ಯವಾಗಿಲ್ಲ. ದಯಾಮರಣದ ಅವಶ್ಯಕತೆಯ ಬಗ್ಗೆ ಎರಡು ಪಕ್ಷಗಳಲ್ಲಿಯೂ ಒಮ್ಮತವಿದ್ದರೂ, ಅತಿ ಮುಖ್ಯವಾದ ಆಕ್ಷೇಪವೆಂದರೆ ದಯಾಮರಣದ ದುರ್ಬಳಕೆಯ ಸಾಧ್ಯತೆ. ಬಹಳಷ್ಟು ವಿರೋಧದ ನಡುವೆಯೂ ಕೆನಡಾ ದೇಶದಲ್ಲಿ ದಯಾಮರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ದಯಾಮರಣದ ಅತಿ ಕಟ್ಟಾ ವಿರೋಧಿಗೂ ಅತೀ ದಯನೀಯ ಸ್ಥಿತಿಯಲ್ಲಿರುವ ಒಬ್ಬ ವ್ಯಕ್ತಿಯನ್ನು ಕಂಡಾಗ, "ಓ ದೇವರೆ, ಇವರಿಗೆ ಬೇಗ ಸಾವು ಬರಬಾರದೆ" ಎಂದು ಒಂದು ಬಾರಿಯಾದರೂ ಅನಿಸಿರಬೇಕು. ಮುಂಬಯಿಯ ಆಸ್ಪತ್ರೆಯಲ್ಲಿ ದಾದಿಯಾಗಿ ಕೆಲಸ ಮಾಡುತ್ತಿದ್ದ ಅರುಣಾ ಶಾನುಭಾಗ್ ಅವರ ಮೇಲೆ ಅತ್ಯಾಚಾರ ನಡೆದು ಅವರ ಮಿದುಳಿಗೆ ತೀವ್ರವಾಗಿ ಹಾನಿಯಾಗಿ, ಒಬ್ಬ

ಜೀವಚ್ಛವದಂತೆ ೪೧ ವರ್ಷಗಳ ಕಾಲ ಜೀವಿಸಿದ್ದಳು. ಆಕೆಯ ದಯನೀಯ ಸ್ಥಿತಿಯನ್ನು ನೋಡುತ್ತಿದ್ದ ಯಾರಿಗಾದರೂ ಕರುಳು ಮಿಡಿಯುವಂತಿತ್ತು. ಆಕೆಗೆ ದಯಾಮರಣ ನೀಡಬೇಕೆಂದು ಆಕೆಯ ಪರವಾಗಿ ಟೈಮ್ಸ್ ಆಫ್ ಇಂಡಿಯಾದ ಸಂಪಾದಕಿ ಬಚ್ಚಿ ಕರ್ಕಾರಿಯಾ ಮತ್ತು ಪಿಂಕಿ ವಿರಾನಿ ಎಂಬ ಪತ್ರಕರ್ತೆ ಪರಮೋಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದರು. ಆದರೆ ಅವರ ವಾದವನ್ನು ಸಂಪೂರ್ಣವಾಗಿ ಪುರಸ್ಕರಿಸದೆ, ನಿಷ್ಕ್ರಿಯ ದಯಾಮರಣಕ್ಕೆ Passive euthanasia ಮಾತ್ರ ಒಪ್ಪಿಗೆ ಕೊಟ್ಟಿತು.

ಈ ವಿಚಾರಗಳು ನನ್ನನ್ನು ಕಾಡುತ್ತಿರುವ ಸಂದರ್ಭದಲ್ಲಿಯೇ, ೧೯೯೬ ರಲ್ಲಿ ಅಮೆರಿಕೆಯ ಎಂಒಂ ಎಂಬ ವೈದ್ಯಕೀಯ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನ ನನ್ನ ಗಮನವನ್ನು ಸೆಳೆಯಿತು. ಆ ಲೇಖನದ ಹೆಸರು "My living will". ಇದನ್ನು ಬರೆದವರು ವಿಲಿಯಂ ಹೆನ್ಸೆಲ್ ಎನ್ನುವ ಅಮೆರಿಕೆಯ ವೈದ್ಯರು. ಇದನ್ನು ಮೊದಲು ಅನುಮೋದಿಸಿದವರು, ಅಮೆರಿಕೆಯ ಒಬ್ಬ ವಕೀಲರು, ಲೂಯಿ ಕುಟ್ನರ್. ಈ ಲಿವಿಂಗ್ ವಿಲ್ ಅಥವಾ ಜೀವಂತ ಉಯಿಲು ಎನ್ನುವ ದಾಖಲೆ Advanced Life Directives ಎನ್ನುವ ಸೂಚನೆಗಳಲ್ಲಿ ಒಂದಾಗಿದೆ. ಯಾವುದೇ ರೋಗಿ ಅದೆಂತಹ ಗಂಭೀರ ಸ್ಥಿತಿಯಲ್ಲಿದ್ದರೂ, ಬಹಳಷ್ಟು ಸಲ ಆ ವ್ಯಕ್ತಿ ಬದುಕುಳಿಯಲಾರನೆಂಬ ಅರಿವಿದ್ದರೂ ಅವನನ್ನು ಕಡೆಯವರೆಗೂ ಉಪಚರಿಸುವ ಜವಾಬ್ದಾರಿ ವೈದ್ಯರಿಗಿರುತ್ತದೆ. ಹೀಗಾಗಿ ಒಬ್ಬ ಕ್ಯಾನ್ಸರ್ ನಂತಹ ಕಾಯಿಲೆಯಿಂದ ಸಂಪೂರ್ಣ ಜರ್ಝರಿತನಾಗಿ ಅಂತಿಮಾವಸ್ಥೆಯಲ್ಲಿದ್ದರೂ ಅವನಿಗೆ ಕೃತಕ ಶ್ವಾಸೋಚ್ಛ್ವಾಸ ನೀಡಿ ಬದುಕಿಸಿಟ್ಟಿರುವಂತಹ ಅನಿವಾರ್ಯತೆ ಇರುತ್ತದೆ. ಐ.ಸಿ.ಯು ನಲ್ಲಿ ಈ ರೀತಿ ಕೃತಕ ವಿಧಾನಗಳಿಂದ ಜೀವಂತವಾಗಿಸಿರುವಂತಹ ಅನೇಕ ರೋಗಿಗಳಿರುತ್ತಾರೆ. ಕೆಲವೊಮ್ಮೆ ಇವರು ಈ ಸ್ಥಿತಿಯಲ್ಲಿಯೇ ಹಲವಾರು ವಾರಗಳ ಕಾಲ ಬದುಕಿರುವಂತಹ ಸಾಧ್ಯತೆ ಇರುತ್ತದೆ. ಅಂತಹ ಸಮಯದಲ್ಲಿ ಆ ರೋಗಿಗಳ ಸಂಬಂಧಿಗಳ ಮಾನಸಿಕ ಸ್ಥಿತಿಯನ್ನು ಸುಲಭವಾಗಿ ಊಹಿಸಬಹುದು. ಅದರಲ್ಲಿಯೂ ಇಂತಹ ಉಪಚಾರದ ವೆಚ್ಚ ಅವರ ಯೋಗ್ಯತೆಗೆ ಮೀರಿದ್ದಾಗಿದ್ದರೆ ಅವರ ದುಃಸ್ಥಿತಿ ಇನ್ನೂ ಶೋಚನೀಯವಾದುದು. ಒಂದು ವೇಳೆ, ಮುಂದೊಂದು ದಿನ ನನಗೇ ತೀವ್ರ ಅನಾರೋಗ್ಯ ಉಂಟಾಗಿ, ಐ.ಸಿ.ಯು.ನಲ್ಲಿ ದಾಖಲಾಗಿ ಇಂತಹ ಸ್ಥಿತಿಯಲ್ಲಿದ್ದರೆ, ಅಂತಹ ಸ್ಥಿತಿಯಲ್ಲಿ ನಾನು ಬದುಕುಳಿಯಲು ಬಯಸುತ್ತಿದ್ದೇನೇ ಎಂದು ಹಲವಾರು ಬಾರಿ ನನ್ನನ್ನು ನಾನೇ ಕೇಳಿಕೊಂಡಿದ್ದೇನೆ. ನನ್ನ ಮಟ್ಟಿಗೆ ಹೇಳುವುದಾದರೆ, ನಾನಂತೂ ಅದನ್ನು ಬಯಸುವುದಿಲ್ಲ. ನನ್ನಂತೆಯೇ ಇಂತಹ ಅನೇಕ ರೋಗಿಗಳ ಅವಸ್ಥೆಯೂ ಇರಬಹುದು. ಅವರಿಗೆ ಬದುಕುಳಿಯುವುದು ಬೇಡವಾಗಿದ್ದರೂ ಅದನ್ನು ವ್ಯಕ್ತಪಡಿಸುವ ಸ್ಥಿತಿಯಲ್ಲಿ ಅವರು ಇರುವುದಿಲ್ಲ. ಮುಂದೊಮ್ಮೆ ಇಂತಹ ಪರಿಸ್ಥಿತಿ ನನಗೆದುರಾದರೆ ನನ್ನನ್ನು ಈ ರೀತಿ ಬದುಕಿಸಿಟ್ಟಿರುವುದು ನನಗಿಷ್ಟವಿಲ್ಲ ಎಂಬುದನ್ನು ನಾನು ಆರೋಗ್ಯವಾಗಿರುವಾಗಲೇ ಸೂಚಿಸುವಂತಹ ದಾಖಲೆ "ಲಿವಿಂಗ್ ವಿಲ್" ಅಥವಾ "ಜೀವಂತ ಉಯಿಲು".

ಜೀವಂತ ಉಯಿಲು, ಇದನ್ನು ಯಾವುದೇ ಒಬ್ಬ ವ್ಯಕ್ತಿ ತಾನು ಆರೋಗ್ಯವಾಗಿರುವಾಗಲೇ ದಾಖಲಿಸಬಹುದು. ಈ ದಾಖಲೆಯಲ್ಲಿ ಅವನು, ಮುಂದೆ ಎಂದಾದರೂ ತಾನು ತೀವ್ರವಾಗಿ ಅನಾರೋಗ್ಯ ಪೀಡಿತನಾಗಿ, ಕೃತಕ ಸಾಧನಗಳಿಂದ ತನ್ನನ್ನು ಜೀವಿಸಿಟ್ಟಿರುವಂತಹ ಸಂದರ್ಭ ಬಂದರೆ, ಅದನ್ನು ತಾನು ಬಯಸುವುದಿಲ್ಲವೆಂದೂ, ಮತ್ತು ಅಂತಹ ಸಂದರ್ಭದಲ್ಲಿ ವೈದ್ಯರು ತನ್ನನ್ನು ಬದುಕಿಸಿಡಲು ಅಂತಹ ಕೃತಕ ವಿಧಾನಗಳನ್ನು ಬಳಸದೇ, ತಾನು ಶಾಂತವಾಗಿ ನಿಧನಹೊಂದಲು ಅವಕಾಶ ನೀಡಬೇಕೆಂದು ತಿಳಿಸಿರುತ್ತಾನೆ. ಈ ದಾಖಲೆಯನ್ನು ಒಂದು ಸೂಚಿತ ಮಾದರಿ ಪ್ರಮಾಣ ಪತ್ರದಲ್ಲಿ (Prescribed form) ಬರೆದು, ಕನಿಷ್ಠ ಇಬ್ಬರು ಸಾಕ್ಷಿಗಳೆದುರಲ್ಲಿ ಸಹಿ ಹಾಕಬೇಕು. ಅನೇಕ ಪ್ರಮುಖ ವ್ಯಕ್ತಿಗಳು, ಅಮೇರಿಕದ ಮಾಜಿ ಅಧ್ಯಕ್ಷ ಬರಾಕ್ ಒಬಾಮಾ ಸೇರಿದಂತೆ, ತಮ್ಮ ಲಿವಿಂಗ್ ವಿಲ್ ನ್ನು ಅನುಮೋದಿಸಿದ್ದಾರೆ. ಇಂತಹ ದಾಖಲೆ ಪತ್ರಕ್ಕೆ ಅಮೆರಿಕಾ ಸೇರಿದಂತೆ ಹಲವಾರು ದೇಶಗಳಲ್ಲಿ ಕಾನೂನಿನ ಮಾನ್ಯತೆ ಇದೆ. ಆದರೆ ನಮ್ಮ ದೇಶದಲ್ಲಿ ಇತ್ತೀಚೆಗೆ ಇದಕ್ಕೆ ಕಾನೂನಿನ ಮಾನ್ಯತೆ ದೊರೆಕಿದೆಯಾದರೂ, ಬೇರೆ ದೇಶಗಳಲ್ಲಿ ಈ ಲಿವಿಂಗ್ ವಿಲ್ ನ್ನು ದಾಖಲಿಸುವಷ್ಟು ಸುಲಭವಾಗಿ ನಮ್ಮ ದೇಶದಲ್ಲಿ ಮಾಡುವಂತಿಲ್ಲ. ಲಿವಿಂಗ್ ವಿಲ್




ಮಾಡುವ ಪ್ರಕ್ರಿಯೆ ಅಷ್ಟು ಸರಳವಾಗಿಲ್ಲ. ಹೀಗೆ ಲಿವಿಂಗ್ ವಿಲ್ ನ್ನು ದಾಖಲಿಸಿದ ವ್ಯಕ್ತಿ, ಈ ವಿಷಯವನ್ನು ತನ್ನ ಬಂಧುಮಿತ್ರರಿಗೆ, ಅದರಲ್ಲಿಯೂ ತನ್ನ ಉಪಚಾರದ ಜವಾಬ್ದಾರಿ ಹೊರುವವರಿಗೆ ತಿಳಿಸಿರಬೇಕು. ಮುಂದೊಮ್ಮೆ ಆ ವ್ಯಕ್ತಿಯ ಆರೋಗ್ಯ ಸಂಪೂರ್ಣವಾಗಿ ಹದಗೆಟ್ಟು ಪ್ರಜ್ಞಾಹೀನನಾಗಿ ಯಾವುದೋ ಆಸ್ಪತ್ರೆಯಲ್ಲಿ ದಾಖಲಾದಾಗ, ಅವನ ಬಂಧು ಮಿತ್ರರು ಆ ವಿಷಯವನ್ನು ಅವನನ್ನು ಉಪಚರಿಸುತ್ತಿರುವ ವೈದ್ಯರಿಗೆ ತಿಳಿಸಿ, ಅವನನ್ನು ಕೃತಕ ವಿಧಾನಗಳಿಂದ ಬದುಕಿಸಿಡುವುದನ್ನು ತಡೆಯುತ್ತಾರೆ.

ಇನ್ನೊಂದು ಬಗೆಯ ದಾಖಲೆಯೂ ಇದೆ. ಈ ದಾಖಲೆಯಲ್ಲಿ ಒಬ್ಬ ವ್ಯಕ್ತಿ ತನಗೆ ಯೋಗ್ಯ ಕಂಡ ವ್ಯಕ್ತಿಯೊಬ್ಬರಿಗೆ ತನ್ನ ಆರೋಗ್ಯಕ್ಕೆ ಸಂಬಂಧಿಸಿದಂತೆ ನಿರ್ಣಯ ಕೈಗೊಳ್ಳುವ ಅಧಿಕಾರವನ್ನು ವರ್ಗಾವಣೆ ಮಾಡಬಹುದು. (ಪವರ್ ಆಫ್ ಅಟಾರ್ನಿ). ಮುಂದೊಮ್ಮೆ ಆ ವ್ಯಕ್ತಿಯ ಆರೋಗ್ಯ ತುಂಬಾ ಹದಗೆಟ್ಟಾಗ, ಅವನು ಪವರ್ ಆಫ್ ಅಟಾರ್ನಿ ನೀಡಿದ ವ್ಯಕ್ತಿ ವೈದ್ಯರಿಗೆ ಸೂಕ್ತ ಸೂಚನೆಯನ್ನು ನೀಡಬಹುದು.

ಕೆಲವು ವೇಳೆ ಐ.ಸಿ.ಯು ನಲ್ಲಿ ದಾಖಲಾಗಿ, ಎಚ್ಚರದ ಸ್ಥಿತಿಯಲ್ಲಿರುವಾಗಲೂ ರೋಗಿಯು ಡಿ.ಎನ್.ಆರ್ (ಡು ನಾಟ್ ರಿಸಸಿಟೇಟ್) DNR Do Not Resuscitate ಎಂಬ ಸೂಚನೆ ನೀಡಬಹುದು. ಯಾವುದೇ ರೋಗಿಯ ಹೃದಯ ಕ್ರಿಯೆ ಅಥವಾ ಶ್ವಾಸ ಕ್ರಿಯೆ ನಿಂತು ಹೋದಾಗ, ಐ.ಸಿ.ಯು ನಲ್ಲಿರುವ ವೈದ್ಯರು ತಕ್ಷಣವೇ ಸಿ.ಪಿ.ಆರ್ (CPR) ಮೂಲಕ ಪುನಶ್ಚೇತನಕ್ಕೆ ಯತ್ನಿಸುವುದು ಸಾಮಾನ್ಯವಾಗಿದೆ. ಆದರೆ, ಆ ರೋಗಿ ಡಿ.ಎನ್.ಆರ್ ಸೂಚನೆ ಕೊಟ್ಟಿದ್ದರೆ ಅಂತಹ ರೋಗಿಯ ಹೃದಯ ಕ್ರಿಯೆ ಅಥವಾ ಶ್ವಾಸ ಕ್ರಿಯೆ ನಿಂತು ಹೋದಾಗ ವೈದ್ಯರು ಪುನಶ್ಚೇತನಕ್ಕೆ ಪ್ರಯತ್ನಿಸದೆ ಆ ವ್ಯಕ್ತಿ ಶಾಂತವಾಗಿ ಕೊನೆಯುಸಿರೆಳೆಯಲು ಅವಕಾಶ ನೀಡುತ್ತಾರೆ. ಇಂತಹ ಸೂಚನೆಗೆ ನಮ್ಮ ದೇಶದಲ್ಲಿ ಇನ್ನೂ ಮಾನ್ಯತೆ ದೊರೆತಿಲ್ಲ.

ಸ್ವಿಜರ್ಲೆಂಡ್‌ನಲ್ಲಿ Doctor assisted suicide ಎನ್ನುವ ಒಂದು ದಯಾಮರಣದ ವಿಧಾನ ಮಾನ್ಯತೆ ಪಡೆದಿದೆ. ಒಬ್ಬ ವ್ಯಕ್ತಿ ಅನಾರೋಗ್ಯ ಪೀಡಿತನಾಗಿ ಅಂತಿಮ ಸ್ಥಿತಿಯಲ್ಲಿರುವಾಗ, ಇದನ್ನು ಬಯಸಿದಲ್ಲಿ, ವೈದ್ಯನೊಬ್ಬನ ಉಸ್ತುವಾರಿಯಲ್ಲಿ ಆ ವ್ಯಕ್ತಿ ಬಯಸಿದ ದಿನ ಮತ್ತು ಸಮಯಕ್ಕೆ ಸರಿಯಾಗಿ ವೇದನಾರಹಿತನಾಗಿ ಮರಣ ಹೊಂದಲು ವ್ಯವಸ್ಥೆ ಮಾಡುತ್ತಾರೆ.

ನಾನು ಲಿವಿಂಗ್ ವಿಲ್ ಅನ್ನು ಇಷ್ಟಪಡುವುದು, ಇದು ದಯಾಮರಣಕ್ಕೆ ಸಮನಲ್ಲವಾದರೂ ಹಲವು ಸಂದರ್ಭಗಳಲ್ಲಿ ಇದು ದಯಾಮರಣಕ್ಕೆ ಮೊದಲ ಮೆಟ್ಟಿಲು ಎಂದೆಣಿಸಬಹುದೆಂಬ ಕಾರಣಕ್ಕಾಗಿ. ಇದರ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿಯೇ, ‘ಹಂಸ ಹಾಡುವ ಹೊತ್ತು’ ಎಂಬ ಒಂದು ಕಾದಂಬರಿಯನ್ನು ರಚಿಸಿದೆ. ಅದು ಓದುಗರ ಮತ್ತು ವಿಮರ್ಶಕರ ಮೆಚ್ಚುಗೆ ಗಳಿಸಿದರೂ, ಯಾರೊಬ್ಬರೂ ಲಿವಿಂಗ್ ವಿಲ್ ಬಗ್ಗೆ ನನ್ನನ್ನು ಪ್ರಶ್ನಿಸಲಿಲ್ಲ ಎಂಬುದು ನನಗೆ ಬೇಸರದ ಸಂಗತಿ!?



**ಡಾ. ಸುನಂದ ಕುಲಕರ್ಣಿ**
ನಿವೃತ್ತ ಪ್ರಾಧ್ಯಾಪಕರು
ಸ್ತ್ರೀ ಆರೋಗ್ಯ ಮತ್ತು ಪ್ರಸೂತಿ ತಜ್ಞರು, ಧಾರವಾಡ

ಪ್ರಚಲಿತ

# ವೈದ್ಯಕೀಯ ಕ್ಷೇತ್ರ ಅಂದು... ಇಂದು...



ಡಾ ಶ್ರೀನಿವಾಸ ಹರಪನಹಳ್ಳಿ
ವಿಭಾಗೀಯ ಸಂಪಾದಕರು

ಎಲ್ಲ ಕ್ಷೇತ್ರಗಳಲ್ಲಿ ಕಾಲ ಸರಿದಂತೆ ಬದಲಾವಣೆ ಆಗಿಯೇ ಆಗುತ್ತದೆ. ಹಾಗೆಯೇ ವೈದ್ಯಕೀಯ ಕ್ಷೇತ್ರದಲ್ಲೂ ಕೂಡ ಅನೇಕಾನೇಕ ಬದಲಾವಣೆ ಆಗಿವೆ. ಒಂದು ಕಾಲಕ್ಕೆ ಮಾಡುತ್ತಿದ್ದ ಅನೇಕ ಶಸ್ತ್ರಚಿಕಿತ್ಸೆಗಳನ್ನು ಈಗ ಮಾಡುತ್ತಿಲ್ಲ. ಹೊಸ ಚಿಕಿತ್ಸೆಗಳಾದ ದುರ್ಬೀನಿನಿಂದ ಮಾಡುವ, ರೊಬೊಟ್ ಚಿಕಿತ್ಸೆಗಳು ಬಂದಿವೆ. ಹಾಗೆಯೇ ಒಂದು ಕಾಲಕ್ಕೆ ಬಳಸುತ್ತಿದ್ದ ಔಷಧಿ, ಮಾತ್ರೆಗಳು, ಚುಚ್ಚುಮದ್ದುಗಳು ಹೋಗಿ ಈಗ ಮೂಗಿನ ಮೂಸುವ, ಚರ್ಮದ ಮೇಲೆ ತೇಪೆ ಹಾಕುವ, ಯೋನಿಯಲ್ಲಿಡುವ ಮಾತ್ರೆ, ಬಾಯಲ್ಲಿಯೇ ಕರಗುವ ಪೇಪರಿನಂತಹ ಹೊಸಹೊಸ ಮದ್ದುಗಳು ಬಂದಿವೆ.

ಇದೆಲ್ಲದರ ಜೊತೆಗೆ ಡಾಕ್ಟರರ ಮತ್ತು ರೋಗಿಗಳ ಬಾಂಧ್ಯವ ಕೂಡ ಬದಲಾಗಿದೆ. ಒಂದು ಕಾಲಕ್ಕೆ ಡಾಕ್ಟರರನ್ನು "ವೈದ್ಯೋ ನಾರಾಯಣೋ ಹರಿ" ಅಂದರೆ ವೈದ್ಯರೇ ನಾರಾಯಣ ದೇವರ ಸ್ವರೂಪವೆಂತಲೂ", "ಔಷಧಂ ಜ್ಞಾಹ್ನವೀತೋಯಂ" ಅಂದರೆ ದೇವರು (ನಾರಾಯಣ ವೈದ್ಯ) ಕೊಟ್ಟ ಔಷಧಿ ಗಂಗೆಯ ನೀರು ಎಂತಲೂ ಅನ್ನುತ್ತಿದ್ದರು. ಈಗ ಡಾಕ್ಟರರ "Doctor is god when the patient is ill, Doctor is man when patient is well, and lastly Doctor is devil when he gives his bill" ಅನ್ನುವ ಕಾಲ ಬಂದಿದೆ.

ಡಾಕ್ಟರರು ಯಾವುದೇ ವೈದ್ಯಕೀಯ ಶಾಖೆಯಲ್ಲಿ ಕೆಲಸ ಮಾಡಲಿ, ಈ ತರಹದ ಅನುಭವ ಎಲ್ಲರಿಗೂ ಬಂದೇ ಬಂದಿರುತ್ತದೆ. ನಾನು ಇಲ್ಲಿ ಪ್ರಾಮುಖವಾಗಿ ಸ್ತ್ರೀರೋಗ ಮತ್ತು ಪ್ರಸೂತಿ ವಿಭಾಗದಲ್ಲಿ ಬರುವ ಅನುಭವಗಳ ಬಗ್ಗೆ ಹೇಳುತ್ತಿದ್ದೇನೆ.

ಈಗೀಗ ಎಲ್ಲೆಡೆ ಡಾಕ್ಟರರು ಹಣದ ಆಸೆಗಾಗಿ ಸಿಝೇರಿಯನ್ ಹೆರಿಗೆ ಮಾಡುತ್ತಾರೆ ಎಂಬ ಕೂಗು ಕೇಳಿಸುತ್ತಿದೆ. ಇದನ್ನೇ ನಾವು ವಿಶ್ಲೇಷಿಸಿ ನೋಡೋಣ. ಸಿಝೇರಿಯನ್ ಹೆರಿಗೆಗಳು ಮೊದಲಿಗಿಂತ ಹೆಚ್ಚಾದದ್ದು ಮಾತ್ರ ನಿಜವಿದೆ. ಈಗ ದೊಡ್ಡ ದೊಡ್ಡ ಊರಿನಲ್ಲಿ ವೈದ್ಯಕೀಯ ಕಾಲೇಜುಗಳಾಗಿವೆ. ಅವರಿಗೆ ಬೇರೆಬೇರೆ ಕಡೆಯಿಂದ ಕೇಸುಗಳನ್ನು ದೊಡ್ಡ ಆಸ್ಪತ್ರೆಗೆ ಕಳಿಸುತ್ತಾರೆ. ಅವರು ಬರುವಾಗ ತಡವಾಗಿ ಬಿಡುತ್ತದೆ. ತಾಯಿಯ ಮತ್ತು ಶಿಶುವಿನ ಜೀವ ಉಳಿಸುವ ಸಲುವಾಗಿ ಸಿಝೇರಿಯನನ್ನು ಮಾಡಲಾಗುತ್ತದೆ. ಇದರಿಂದ ಜಿಲ್ಲಾ ಆಸ್ಪತ್ರೆಗಳಲ್ಲಿ ವೈದ್ಯಕೀಯ ವಿದ್ಯಾಲಯದಲ್ಲಿ ಹೆಚ್ಚು ಸಿಝೇರಿಯನ್ ಮಾಡುವ ಸಂದರ್ಭಗಳು ಹೆಚ್ಚು.

ಈ ೨೧ನೇಯ ಶತಮಾನದಲ್ಲಿ ಹೊಸಹೊಸ ಯಂತ್ರಗಳು ಬಂದಿವೆ. ಮೊದಲಿನ ಹಾಗೆ ಶಿಶುವಿನ ಹೃದಯದ ಬಡಿತ ನೋಡಿ ಶಿಶುವು ಚೆನ್ನಾಗಿದೆಯೋ ಇಲ್ಲವೋ ಎಂದು ಹೇಳುವ ಕಾಲ ಹೋಗಿದೆ. ಈಗ NST, CST ಮಾಡಲು ಬರುತ್ತದೆ. ಶಿಶುವು ಯೋನಿ ದ್ವಾರದಿಂದ ಹೆರಿಗೆಯಾದರೆ ತಡೆದುಕೊಳ್ಳುತ್ತದೆಯೋ ಇಲ್ಲವೋ ಎಂಬುದನ್ನು ಮೊದಲೇ ತಿಳಿದುಕೊಳ್ಳಬಹುದು. ಇಷ್ಟೇ ಅಲ್ಲ ಶಿಶುವಿನ ಹೃದಯವನ್ನು ಕೂಡ ನೋಡಿ ಅದಕ್ಕೆ

ತೊಂದರೆಯಿದೆಯೇ ಎಂಬುದನ್ನು ನೋಡಬಹುದು.

ಮೊದಲು ಯೋನಿದ್ವಾರದಿಂದ ಹೆರಿಗೆಯಾದರೆ ಸಾಕು ಎನ್ನುತ್ತಿದ್ದರು. ಈಗ ಹುಟ್ಟುವ ಶಿಶುವಿನ ಬರಿ ದೇಹವಲ್ಲ ಅದರ ಬುದ್ಧಿಮತ್ತೆ ಕೂಡ ಚೆನ್ನಾಗಿರಬೇಕು ಎಂದು ಎಲ್ಲರೂ ಬಯಸುವುದು ಸಹಜ. ಎಷ್ಟೋ ಸಲ ಸಾಮಾನ್ಯ, ನೈಸರ್ಗಿಕ ಹೆರಿಗೆಯಾದರೂ ತದನಂತರ ಶಿಶುಗಳಿಗೆ ಮಲ ರೋಗಬರಬಹುದು. ಹುಟ್ಟುವಾಗ ತಲೆಗೆ ಪೆಟ್ಟಾಗಬಹುದು, ಒಳಗಡೆ ರಕ್ತಸ್ರಾವವಾಗಬಹುದು. ಸಿಝೇರಿಯನ್ ಹೆರಿಗೆ ಮಾಡುವದರಿಂದ ಈ ತೊಂದರೆಯನ್ನು ತಪ್ಪಿಸಬಹುದು.




ಮೊದಲು ಹುಡುಗಿಯರು ೨೦-೨೫ರ ಒಳಗಡೆ ಮದುವೆಯಾಗಿ, ತಾಯಿ ಕೂಡ ಆಗುತ್ತಿದ್ದರು. ಈಗ ಹಾಗಲ್ಲ ಪ್ರತಿಯೊಂದು ಹುಡುಗಿ ಸ್ನಾತಕೋತ್ತರ ಪದವಿ ಗಳಿಸಿ, ನೌಕರಿ ಮಾಡಿ, ತನ್ನ ಕಾಲ ಮೇಲೆ ತಾನು ನಿಂತ ಮೇಲೆಯೇ ಮದುವೆಯ ವಿಚಾರ ಮಾಡುತ್ತಾಳೆ. ಅಷ್ಟು ಹೊತ್ತಿಗೆ ಅವಳಿಗೆ ೩೦ ದಾಟಿ ಹೋಗಿರುತ್ತದೆ. ವಯಸ್ಸು ಹೆಚ್ಚಾದಂತೆ ನೈಸರ್ಗಿಕ ಹೆರಿಗೆಯ ಸಂಭವನೀಯತೆ ಕೂಡ ಕಡಿಮೆಯಾಗುತ್ತದೆ. ಅದರಿಂದ ಈ ಕಾರಣಕ್ಕಾಗಿ ಸಿಝೇರಿಯನ್ ಹೆರಿಗೆ ಹೆಚ್ಚಾಗುತ್ತಿದೆ.

ವಯಸ್ಸು ಹೆಚ್ಚಾದಂತೆ ಹೃದ್ರೋಗ, ಗರ್ಭಾಶಯದಲ್ಲಿ ಫೈಬ್ರಾಯ್ಡ್ ಗಡ್ಡೆಗಳು ಬರಬಹುದು. ಮಧುಮೇಹ, ರಕ್ತದೊತ್ತಡ ಬರಬಹುದು. ಇಂತಹವರಲ್ಲಿ ಸ್ವಾಭಾವಿಕವಾಗಿಯೇ ತಾಯಿಯ ತೊಂದರೆಯನ್ನು ಕಡಿಮೆಮಾಡಲು ಸಿಝೇರಿಯನ್ ಹೆರಿಗೆ ಮಾಡಲಾಗುವುದು.

ಮೊದಲಿನ ಕಾಲದಲ್ಲಿ ೮-೧೦ ಮಕ್ಕಳನ್ನು ಹಡೆಯುತ್ತಿದ್ದರು. ಆಗ ರೋಗಗಳಿಗೆ ಈಗಿನಂತೆ ಲಸಿಕೆಗಳು ಇರಲಿಲ್ಲ. ಆ ೧೦ ಮಕ್ಕಳಲ್ಲಿ ಎಷ್ಟೋ ಕಾಯಿಲೆಯಿಂದ ಸಾಯುತ್ತಿದ್ದರು. ಈಗ ಕಾಲ ಬದಲಾಗಿದೆ. ಹಲವಾರು ರೋಗಗಳಿಗೆ ಲಸಿಕೆಗಳು ಬಂದಿರುವದರಿಂದ ಶಿಶುಗಳಿಗೆ ಮರಣದ ಪ್ರಮಾಣ ಕಡಿಮೆಯಾಗಿದೆ. ಇದು ಅಲ್ಲದೆ ಈಗಿನವರು' ನಾವಿಬ್ಬರು ಮತ್ತು ನಮಗಿಬ್ಬರು ಕೂಡ ಹೋಗಿ "ನಾವಿಬ್ಬರು ನಮಗೆ ಒಂದು" ಎಂಬ ಹಂತಕ್ಕೆ ಬಂದಿದ್ದಾರೆ. ಇದರಿಂದ ಪ್ರತಿಯೊಂದು ಶಿಶು ಸದೃಢವಾಗಿರಬೇಕು, ಯಾವುದೇ ಕಾರಣಕ್ಕೂ ಅದಕ್ಕೆ ಧಕ್ಕೆಯಾಗಬಾರದು. ಅದು ದೈಹಿಕವಾಗಿ, ಮಾನಸಿಕವಾಗಿ ಆರೋಗ್ಯದಿಂದ್ದು, ದೇಶದ ಸತ್ವಜೆಯಾಗಬೇಕು.

ಹೀಗಾಗಿ ಆ ಒಂದೇ ಒಂದು ಮಗುವನ್ನು ಹಡೆಯಲು ಅವರು ಏನು ಬೇಕಾದರೂ ಮಾಡಲು ತಯಾರಾಗುತ್ತಾರೆ. ನೈಸರ್ಗಿಕ ಹೆರಿಗೆಯಲ್ಲಿ ಕೆಲವೊಂದು ಸಲ ಅಪಾಯವಿರಬಹುದು. ಅದನ್ನು ಅವರು ಸಹಿಸುವುದಿಲ್ಲ. ಈ ಕಾರಣಕ್ಕಾಗಿಯೂ ಸಿಝೇರಿಯನ್ ಹೆರಿಗೆಗಳು ಜಾಸ್ತಿಯಾಗುತ್ತವೆ. ಮೊದಲಿನ ಕಾಲದಲ್ಲಿ ಹುಡುಗಿಯರು ಎಳೆ ವಯಸ್ಸಿನಲ್ಲಿ ಗರ್ಭವತಿಯಾಗಿ ಹಡೆಯುತ್ತಿದ್ದರು. ಅವರದೇ ಹದ ಸ್ನಾಯುಗಳು ನೈಸರ್ಗಿಕ ಹೆರಿಗೆಗೆ ಹೀಚುತ್ತಿದ್ದವು. ಮಾನಸಿಕವಾಗಿ ಅವರು ಹೆರಿಗೆ ನೈಸರ್ಗಿಕವಾಗಿ ಆಗಲೆಂದು ತಯಾರಿರುತ್ತಿದ್ದರು. ಆದರೆ ಈಗ ಹಾಗಲ್ಲ "ನಮಗೆ ಹೆರಿಗೆಯ ನೋವು ಬೇಡವೇ ಬೇಡ, ಸಿಝೇರಿಯನ್ ಹೆರಿಗೆಯನ್ನೇ ಮಾಡಿ"



ಅಂತ ದುಂಬಾಲು ಬೀಳುವದರಿಂದ ಈ ತರಹದ ಹೆರಿಗೆಗಳು ಹೆಚ್ಚಾಗುತ್ತಲಿವೆ. ಇದಕ್ಕೆ "ವಿನಂತಿಯ ಮೇರೆಗೆ ಸಿಝೇರಿಯನ್ ಹೆರಿಗೆ" ಅನ್ನುತ್ತಾರೆ.

ಇನ್ನೊಂದು ಮಾತೆಂದರೆ ಈಗ ಹುಡುಗಿಯರು ಕಲಿತು ಕೆಲಸ ಮಾಡಿ ಹಣಗಳಿಸುತ್ತಿದ್ದಾರೆ. ಒಂದು ಹೆರಿಗೆಯಿಂದ ಎಷ್ಟೊಂದು ದಿನ ರಜೆ, ಗರ್ಭವತಿ ಆದಾಗ ಬರದಿರುವ ಆದಾಯ ಎಲ್ಲ ಲೆಕ್ಕ ಹಾಕುತ್ತಾರೆ. ಹೆರಿಗೆಯಲ್ಲಿ ಶಿಶುವಿಗೆ ಏನಾದರೂ ಆಗಿಬಿಟ್ಟರೆ, ಅವರಿಗೆ ಭಯವೂ, ಆತಂಕವೂ ಆಗುತ್ತದೆಯಲ್ಲದೇ, ಆ ಶಿಶುವಿಗೆ ಮತ್ತೆ ಹಣ ಖರ್ಚು ಮಾಡಬೇಕಾಗುತ್ತದೆ. ಈ ಗೊಂದಲವೇ ಬೇಡವೆಂದು, ಸಿಝೇರಿಯನ್ ಹೆರಿಗೆಯೇ ಬೇಕೆನ್ನುತ್ತಾರೆ.

ನೈಸರ್ಗಿಕ ಹೆರಿಗೆ ಸ್ವಾಭಾವಿಕವಿದ್ದರೂ ಕೆಲವು ಸಲ, ಅದರಲ್ಲೂ ಡಾಕ್ಟರರಿಗೂ ಗೊತ್ತಾಗದ, ಯಂತ್ರಗಳಿಗೂ ತೋರಿಸಲಾಗದ ತೊಂದರೆ ಶಿಶುವಿಗೆ ಇರಬಹುದು. ಕೆಲವು ಸಲ ಶಿಶುವೂ ಸಾಯಬಹುದು. ಈಗ "ನಮ್ಮ ಮಗುವಿಗೆ ಹೀಗೇಕಾಯಿತು? "ಎಂದು ಅವರು ಡಾಕ್ಟರರನ್ನು ಪ್ರಶ್ನಿಸುತ್ತಾರೆ. ಗೂಗಲ್‌ನಲ್ಲಿ ಓದಿಕೊಂಡು ಬಂದಿರುತ್ತಾರೆ. ಪ್ರತಿಯೊಂದು ಕೇಸ್‌ನಲ್ಲಿ ಕಾರಣ ಗೊತ್ತಾಗಲಿಕ್ಕಿಲ್ಲ. ಇದರಿಂದ ಡಾಕ್ಟರರು ಫಜೀತಿ ಅನುಭೋಗಿಸುವದರ ಬದಲು ಸಿಝೇರಿಯನ ಮಾಡಿಬಿಡಬಹುದು. ಹೆರಿಗೆಯಲ್ಲಿ ಗಂಡಾಂತರ ಕೆಲವು ಸಲ ಇರುತ್ತವೆ. ಹೀಗೆ ಇರುವಾಗ ಅದರ ರಿಸ್ಕ್ (ಒತ್ತಡ)ವನ್ನು ಯಾರು ತೆಗೆದುಕೊಳ್ಳಬೇಕು. ಇಬ್ಬರೂ ತೆಗೆದುಕೊಂಡಾಗ ಮಾತ್ರ ನೈಸರ್ಗಿಕ ಹೆರಿಗೆ ಸಾಧ್ಯ.

ಒಂದು ಕಾಲಕ್ಕೆ "ಡಾಕ್ಟರರೇ ನಿಮ್ಮ ಕೈಯಲ್ಲಿ ಇದ್ದದ್ದು, ನೀವು ಮಾಡಿದಿರಿ. ಆದರೆ ನಮ್ಮ ಹಣೆಯ ಬರಹ ಸರಿಯಿರಲಿಲ್ಲ" ಎನ್ನುವ ಕಾಲ ಹೋಗಿದೆ. ಈಗ ಡಾಕ್ಟರರಿಗೆ ರೋಗಿಗಳ ಮೇಲೆ ವಿಶ್ವಾಸವಿಲ್ಲ. ರೋಗಿಗಳಿಗೆ ಡಾಕ್ಟರರ ಮೇಲೆ ವಿಶ್ವಾಸವಿಲ್ಲ. ಇಬ್ಬರಿಗೂ ಈಗ ಕೋರ್ಟು - ಕಚೇರಿ, ವಕೀಲರ ಮೇಲೆ ವಿಶ್ವಾಸವಾಗುತ್ತಲಿದೆ.

ಈ ಎಲ್ಲ ಕಾರಣಕ್ಕೆ ಸಿಝೇರಿಯನ್ ಹೆರಿಗೆ ಜಾಸ್ತಿಯಾಗಿ ಈಗಿನ ಕಾಲದಲ್ಲಿ ಡಾಕ್ಟರರಿಗೆ ಅಪವಾದ ಬರುತ್ತಲಿದೆ ಇದರಲ್ಲಿ ಎಷ್ಟು ಸತ್ಯ ಎಷ್ಟು ಮಿಥ್ಯವಿದೇ ಎಂಬುದನ್ನು ನೀವು ಆಲೋಚಿಸಿ ನೋಡಿ.



**ಡಾ. ಅರುಣಾ ಯಡಿಯಾಳ್**
ಮಾನಸಿಕ ತಜ್ಞರು

ಕಥೆ

# ಜಾಂಡೀಸ್ ಇಲ್ವಾ?!?



ಡಾ. ದಿವ್ಯ ಕೆ. ಎನ್.
ವಿಭಾಗೀಯ ಸಂಪಾದಕರು

ಎತ್ತು ಏರಿಗೆ ಎಳೆದರೆ, ಎಮ್ಮೆ ನೀರಿಗೆ ಎಳೆಯಿತಂತೆ. ಹಾಗೇ, ಮೆದುಳು, ಕಿವಿ ಒಂದು ಸ್ತರದಲ್ಲಿ ಯೋಚಿಸುತ್ತಿರುವಾಗ, ಬೇರೆಯೇ ಸ್ತರದಲ್ಲಿರುವ ಶಬ್ದಗಳನ್ನು ಆಲಿಸಿದ್ದಲ್ಲಿ, ಅರ್ಥ ಹೋಗಿ ಅಪಾರ್ಥವಾಗಿ, ಪೇಚಿಗೆ ಸಿಕ್ಕಿಕೊಳ್ಳುವ ಸಂದರ್ಭ ಬರುವುದುಂಟು. ಇದಕ್ಕೆ ನಿದರ್ಶನವಾಗಿದೆ ಈ ಘಟನೆ!

ಅಂದು ಭಾನುವಾರ. ಸರಕಾರಿ ಆಸ್ಪತ್ರೆಯಲ್ಲಿ ಆಗ ಕಿರಿಯ ವೈದ್ಯೆ ನಾನು. ಮಧ್ಯಾಹ್ನವಾಗುತ್ತಲೂ ಹೊಟ್ಟೆ ಚುರ್ರ್ ಅನ್ನುತ್ತಿತ್ತು. ರೋಗಿಗಳ ದಂಡು ಇನ್ನೂ ಇತ್ತು. ಯಾರ ಮೇಲೂ ಸಿಡಿಮಿಡಿಗೊಳ್ಳದೆ ಕೆಲಸ ಮಾಡಬೇಕು ಅಂತ ಅಂದುಕೊಂಡರೂ, ಅವತ್ತು ಆ ರೋಗಿ ನನ್ನ ಹತ್ರ ಬೈಸಿಕೊಂಡೇ ಬಿಟ್ಟ. ಅದೂ ಅವನದಲ್ಲದ ತಪ್ಪಿಗೆ! ಹೇಗೆ ಅಂತ ನೀವೇ ನೋಡಿ...

ನಾನು : "ಹೆಸರೇನಪ್ಪಾ?"
ಅವನು : "ಜಾಂಡೀಸ್ ಇಲ್ವಾ ಸಾರು"
ಅರ್ರೆ.. ಊಟ ಆಯ್ತಾ ಅಂದ್ರೆ ಮುಂಡಾಸು ಮೂವತ್ತು ಮೊಳ ಅಂತಾನಲ್ಲ, ಅಂದುಕೊಂಡು, ಮೈಕೈ ಮುಟ್ಟಿ, ಕಣ್ಣು ನಾಲಿಗೆ ಪರೀಕ್ಷಿಸಿ ಹೇಳಿದೆ –"ಇಲ್ಲಪ್ಪಾ! ಕಾಮಾಲೆ ಖಾಯಿಲೆ ಇದ್ದಹಾಗೆ ಇಲ್ಲ... ನಿಮ್ಮ ಹೆಸರು ಹೇಳಿ ಈಗ"
ಅವ ಮತ್ತೆ. "ಜಾಂಡೀಸ್ ಇಲ್ವಾ.."ಅಂತ ಅನ್ನಬೇಕೆ??!?

ನನಗೆ ಸ್ವಲ್ಪ ಸಿಟ್ಟು ಬಂತು. "ನೋಡಿ, ನಿಮಗೆ ನಂಬಿಕೆ ಇಲ್ಲಾಂದ್ರೆ ರಕ್ತ ಪರೀಕ್ಷೆಗೆ ಬರೆದುಕೊಡುತ್ತೇನೆ... ಜಾಂಡೀಸ್ ಇದ್ಯೋ ಇಲ್ವೋ ಅಂತ ಖಾತರಿ ಮಾಡಿಕೊಳ್ಳಿ". ಅದಕ್ಕವನು – "ಬಿಡಿ ಸೋಮಿ, ನೀವು ಇಲ್ಲಾ ಅಂದ್ಮೇಲೆ ಮುಗೀತು..." ಅಂದ! ನಾನು ಅವನನ್ನೇ ಒಂಥರಾ ನೋಡುತ್ತಾ... "ಆಯಿತು.. ಹಾಗಾದ್ರೆ ಈಗ ಹೆಸರು ಹೇಳಿ" ಅಂದೆ. ನಂಬಿದರೆ ನಂಬಿ.. ಬಿಟ್ಟರೆ ಬಿಡಿ!.. ಆ ಆಸಾಮಿ ಮತ್ತದೇ ಅನ್ನುವುದೇ?!?.. "ಜಾಂಡೀಸ್ ಇಲ್ವಾ"!!
ಇವನೇನು ಹುಚ್ಚನೋ?!?.. ಪೆದ್ದನೋ?!?.. ಅಥವಾ ಬೇಕಂತಲೇ ಛೇಡಿಸಲು ಬಂದ ಘಟಿಂಗನೋ?!? ಅಂತೂ ಕೋಪದ ಪ್ರವಾಹ ತಾಳ್ಮೆಯ ಅಣೆಕಟ್ಟನ್ನು ಒಡೆದು ಮುನ್ನುಗ್ಗಿ ಬೈಗಳದ ರೂಪದಲ್ಲಿ ಹೊರಬಂತು."ಏನ್ನಯ್ಯ?!?.. ಕೇಳಿದ್ದನ್ನೇ ಕೇಳ್ತೀಯಲ್ಲಾ, ಆಟ ಆಡ್ತಿದ್ದೀಯ ಇಲ್ಲಿ?!? ಹೆಸರು ಕೇಳಿದ್ರೆ ಪದೇ ಪದೇ ಜಾಂಡೀಸ್ ಇಲ್ವಾ ಹೇಳ್ತೀಯಲ್ಲಾ..?!? ಎಷ್ಟು ಸಲ ಹೇಳೋದು.. ಇಲ್ಲ ಅಂತ? "ಆಗವನು ತನ್ನ ಹೆಸರಿದ್ದ ಪಡಿತರ ಚೀಟಿ ತೋರಿಸಿದ. ಅದರಲ್ಲಿ "ಜಾನ್ ಡಿ ಸಿಲ್ವಾ" ಅಂತ ಬರೆದಿತ್ತು. ಅವನ ಕತ್ತಿನಿಂದ ಇಳಿಬಿದ್ದ ಕಪ್ಪುದಾರದ ತುದಿಯಲ್ಲಿಯ ಶಿಲುಬೆಯೇರಿದ ಕ್ರಿಸ್ತ ನನ್ನನ್ನೇ ನೋಡಿ ಕಿಸಕ್ಕನೆ ನಕ್ಕಂತಾಗಿ, ಸ್ವಲ್ಪ ಮುಜುಗರ ಗೊಂದಲದಿಂದಲೇ, ಪೆಚ್ಚು ಪೆಚ್ಚಾಗಿ ಸ್ಸಾರೀ ಅಂದೆ! ಅಷ್ಟೇ!





**ಡಾ. ವಿನಯಾ ಶ್ರೀನಿವಾಸ**
ಶಿವಮೊಗ್ಗ

ಕಥೆ


# ಹೀಗೊಂದು ಹುಟ್ಟುಹಬ್ಬ



ಡಾ. ದಿವ್ಯ ಕೆ. ಎನ್.
ವಿಭಾಗೀಯ ಸಂಪಾದಕರು

ಡಿಪಾರ್ಟ್‌ಮೆಂಟ್ ಲೈಬ್ರರಿಯಲ್ಲಿ ಕುಳಿತು ಮರುದಿನದ ತರಗತಿಗೆ ತಯಾರಿ ನಡೆಸಿದ್ದೆ. ಕೈಯಲ್ಲಿ ರಜಾ ಚೀಟಿ ಹಿಡಿದ ಸಹೋದ್ಯೋಗಿ ಡಾ. ಆತ್ಮೀಯ ತುಸು ಮುಜುಗರದಲ್ಲಿಯೇ ಒಳಗೆ ಬಂದರು. ಅವರ ಮುಖ ಭಾವವನ್ನು ಓದಲು ನನಗೆ ಹೆಚ್ಚು ಸಮಯ ಬೇಕಾಗಲಿಲ್ಲ. ರಜಾ ಚೀಟಿಯನ್ನು ಅವರಿಂದ ಕಸಿದುಕೊಂಡು' ಎಷ್ಟು ದಿನ ಇರೋದಿಲ್ಲ ಆತ್ಮೀಯ... ನಾನು ಮ್ಯಾನೇಜ್ ಮಾಡ್ತೀನಿ ಬಿಡಿ' ಎನ್ನುತ್ತಾ ಅದರ ಮೇಲೆ ಸಹಿ ಹಾಕಿದೆ. 'ನಾಳೆ ನಿಮ್ಮ ಕ್ಲಾಸ್ ಜೊತೆ ಫೋರ್ತ್ ಟರ್ಮಿನ ನನ್ನ ಕ್ಲಾಸ್ ತಗೋಬೇಕಲ್ಲ, ನಿಮಗೆ ತೊಂದರೆ ಕೊಡ್ತಾ ಇದ್ದಿನಿ ಅನ್ಸುತ್ತೆ... ನಾಳೆ ಮಗಳದ್ದು ಹದಿನೆಂಟನೆಯ ಹುಟ್ಟು ಹಬ್ಬ, ಹಾಗಾಗಿ ಅವಳ ಜೊತೆಯಲ್ಲಿ ಇರೋಣ ಅಂತ. ಅವಳಿಗೂ ಪರೀಕ್ಷೆಗೆ ಓದಲಿಕ್ಕೆ ಅಂತ ರಜೆ ಕೊಟ್ಟಿದಾರೆ' ಸಂಕೋಚ ಪಡುತ್ತಲೇ ಹೇಳಿದ್ದರು.

ಮಾರನೆ ದಿನ ಒಂದರ ನಂತರ ಇನ್ನೊಂದು ಕ್ಲಾಸ್ ಮುಗಿಸುವಾಗ ಗಂಟಲು ಒಣಗಿದಂತಾಗಿತ್ತು. ಬ್ಲಡ್ ಬ್ಯಾಂಕ್ ಇನ್ಸ್ಪೆಕ್ಷನ್ ಯಾವಾಗ ಬೇಕಾದ್ರೂ ಇರಬಹುದು ಎಂದು ಎಚ್.ಓ.ಡಿ ಹೇಳಿದ್ದರು. ಇನ್ನು ಕ್ಯಾಂಟೀನ್‌ಗೆ ಹೋದರೆ ಮತ್ತೆ ಸಮಯ ಸಿಗೋಲ್ಲ ಅಂತ ಅಟೆಂಡರ್‌ಗೆ ಬ್ಲಡ್ ಬ್ಯಾಂಕಿಗೇ ಕಾಫಿ ತರಲು ಹೇಳಿದ್ದೆ. ಆತ ತಂದ ಕಾಫಿ ಹೀರುತ್ತಾ ಇನ್ಸ್ಪೆಕ್ಷನ್‌ಗೆ ಬರುವ ಅಧಿಕಾರಿಗಳು ಕೇಳಬಹುದಾದ ಒಂದಿಷ್ಟು ದಾಖಲೆಗಳನ್ನು ಪರಿಶೀಲಿಸುತ್ತಾ ಕುಳಿತಿದ್ದೆ. ಅಲ್ಲಿನ



ಎಲ್ಲ ರಿಜಿಸ್ಟರ್‌ಗಳನ್ನು ತರಿಸಿಕೊಂಡು ಕಣ್ಣಾಯಿಸುತ್ತಿದ್ದೆ. ಆಗಲೇ ಅಲ್ಲಿಗೆ ಆತ್ಮೀಯ ಅವರ ಮಗಳು ಈಶಾನಿಯ ಜೊತೆ ಹಾಜರಾಗಿದ್ದರು.

ಈಶಾನಿಗೆ ಹುಟ್ಟು ಹಬ್ಬದ ಶುಭಾಶಯಗಳನ್ನು ಹೇಳುತ್ತಾ, ಇದೇನಿದು, ಹುಟ್ಟುಹಬ್ಬ ಆಚರಿಸಿಕೊಳ್ಳೋದು ಬಿಟ್ಟು ಇಲ್ಲಿಗೆ ಬಂದಿದ್ದೀಯಲ್ಲ ಈಶಾನಿ! ಎಂದು ಆಶ್ಚರ್ಯವನ್ನು ವ್ಯಕ್ತಪಡಿಸಿದೆ. 'ಅದನ್ನೇ ಇಲ್ಲಿ ಆಚರಿಸಲಿಕ್ಕೆ ಬಂದಿದ್ದಾಳೆ ಶುಭ, ಎಷ್ಟು ಹೇಳಿದ್ರೂ ಕೇಳ್ತಿಲ್ಲ, ಇವತ್ತು ಅವಳು ರಕ್ತದಾನ ಮಾಡಬೇಕಂತೆ. ಅವರ ಬಯಾಲಜಿ ಲೆಕ್ಚರರ್ ಕ್ಲಾಸಿನಲ್ಲಿ ಹೇಳಿದ್ರಂತೆ, ನಾವು ದಾನ ಮಾಡುವ ರಕ್ತ ಎಷ್ಟೋ ಜನರ ಜೀವ ಉಳಿಸುತ್ತೆ, ಹದಿನೆಂಟು ವರ್ಷ ಆದ ಮೇಲೆ ಯಾರು ಬೇಕಾದರೂ ರಕ್ತದಾನ ಮಾಡಬಹುದು ಅಂತ. ನನಗೆ ಮನೇಲಿ ಕೂರ್ಲಿಕ್ಕೆ ಬಿಡದೆ ಕರೆದುಕೊಂಡು ಬಂದಿದ್ದಾಳೆ ನೋಡಿ' ಎಂದು ಆತ್ಮೀಯ ಹೇಳುತ್ತಿದ್ದರೆ ನಾನು ಈಶಾನಿಯನ್ನೇ ಅಚ್ಚರಿಯಿಂದ ನೋಡುತ್ತಿದ್ದೆ. ಬರ್ತಡೇಗೆ ಮೊಬೈಲ್ ಫೋನು, ಲ್ಯಾಪ್‌ಟಾಪು, ಪಾರ್ಟಿ ಎಂದೆಲ್ಲಾ ಆಸೆ ಪಡುವ ಈಗಿನ ಕಾಲದ ಮಕ್ಕಳ ಮುಂದೆ ಈಶಾನಿ ಎಷ್ಟು ಪ್ರಬುದ್ಧೆ ಎನ್ನಿಸಿತು.



ಆರೋಗ್ಯ ದಿನಾಚರಣೆ

# ನೇತ್ರದಾನ

**ಡಾ. ಇಂದಿರಾ ದೊಡ್ಡಬಳ್ಳಾಪುರ**
ಲೇಖಕರು ಮತ್ತು ವಿಭಾಗೀಯ ಸಂಪಾದಕರು

**ರಾಷ್ಟ್ರೀಯ ನೇತ್ರದಾನ – ಪಾಕ್ಷಿಕ ಆಗಸ್ಟ್ ೨೫ರಿಂದ ಸೆಪ್ಟೆಂಬರ್ ೮ ರವರೆಗೆ**

ನಾನು ಜಗವ ಕಾಣಬಲ್ಲೆ
ಸ್ಪಷ್ಟ ಸುಂದರ ನೋಟವ
ಗಾಢ ತಿಮಿರದ ನೋವು ಕೊಡವಿದೆ
ನೇತ್ರದಾನದ ಭಿಕ್ಷೆ ಬೆಳಕು
ಜೀವ ನೀಡಿದೆ ಜೀವಕೆ
ಬದುಕು ನೀಡಿದೆ ಬದುಕಿಗೆ.



ಕಣ್ಣು ಕಾಣುವ ಪುಣ್ಯವಂತರಿಗೆ ಕತ್ತಲೆಯ ನೋವು ತಿಳಿಯುವದು ಕಷ್ಟ, ಊಹಿಸಲೂ ಸಾಧ್ಯವಿಲ್ಲ. ಗಂಡ ಕುರುಡನೆಂದು ಕಣ್ಣಿಗೆ ಪಟ್ಟಿ ಕಟ್ಟಿಕೊಂಡ ಗಾಂಧಾರಿಯ ಅಂಧ ಜೀವನದ ಅನುಭವಕ್ಕೆ ದನಿಯಾದ ಕವಿಗಳು ಇಲ್ಲ. ಆದರೆ ಅಂಧರು ಅನುಭವಿಸುವ ಸಂಕಷ್ಟಗಳು ಒಂದೆರೆಡಲ್ಲ, ಅದನ್ನು ಮೀರಿ ಬದುಕು ಕಟ್ಟಿಕೊಂಡಂವರು ತೀರಾ ಕೆಲವೇ ಮಂದಿ. ಜಗತ್ತಿನೆಲ್ಲಡೆಯೂ ಕುರುಡುತನ ವ್ಯಾಪಕವಾಗಿದೆ. ಖೇದದ ಸಂಗತಿಯೆಂದರೆ ಚಿಕಿತ್ಸೆ ಪೂರ್ಣ ದೊರಕುವ, ಕತ್ತಲಲ್ಲಿ ಬದುಕುವ ಅನಿವಾರ್ಯತೆ ಇರದೆಯೂ ದೃಷ್ಟಿ ಕಳೆದುಕೊಳ್ಳುವವರ ಸಂಖ್ಯೆ ದೊಡ್ಡದಿದೆ. ಕಾರ್ನಿಯಾ ಕುರುಡುತನ ಈ ರೀತಿಯದು. ನೇತ್ರದಾನದ ಅಕ್ಷಿಪಟಲ ಜೋಡಣೆಯ ಮೂಲಕ ಈ ರೀತಿಯ ಕುರುಡುತನ ನಿವಾರಣೆ ಮಾಡಬಹುದು. ನೇತ್ರದಾನ ಇತರ ಅಂಗಾಂಗ ದಾನದ ಜೊತೆ ಅದೇ ಕಾನೂನಿಗೆ ಒಳಪಟ್ಟರೂ ಸ್ವಲ್ಪ ಭಿನ್ನತೆಯಿದೆ. ಕಣ್ಣಿನ ಅಂಗಾಂಶಗಳು ಯಾವ ರೀತಿಯ ರಕ್ತ ಪರಿಚಲನೆಗೆ ಒಳಪಡುವುದಿಲ್ಲ, ಅಲ್ಲದೆ ಅಂಗಾಂಶ ನಿರಾಕರಣೆ ಆಗುವುದು ಕಡಿಮೆ. ಹಾಗಾಗಿ ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ನಡೆಯುವ ಅಂಗಾಂಶ ಕಸಿ ಕಣ್ಣಿನ ಅಕ್ಷಿಪಟಲ ಕಸಿ.

ಇಲ್ಲಿ ಕಣ್ಣುಗಳ ದಾನ ಪಡೆಯಲು ಮೃತ ವ್ಯಕ್ತಿಯಿಂದ ಮಾತ್ರ ಸಾಧ್ಯ. ಸಾವು ಸಂಭವಿಸಿದ ನಾಲ್ಕರಿಂದ ಆರು ಗಂಟೆಗಳ ಒಳಗೆ ಮೃತ ವ್ಯಕ್ತಿಯಿಂದ ಇಡಿ ಕಣ್ಣುಗುಡ್ಡೆಯನ್ನು ನಾಜೂಕಾಗಿ ಹೊರತೆಗೆಯಲಾಗುತ್ತದೆ. ದೃಷ್ಟಿನರದ ಬಳಿಯಲ್ಲಿ ಕಣ್ಣನ್ನು ಬೇರ್ಪಡಿಸಲಾಗುತ್ತದೆ. ಸೂಕ್ತವಾದ ಸಂಗ್ರಹ ಬಟ್ಟಲಿನಲ್ಲಿ ಕಣ್ಣುಗಳನ್ನು ವಿಶಿಷ್ಟ ಲೋಹ ತಲ್ಪದಲ್ಲಿ ಜಾಗರೂಕವಾಗಿರಿಸಿ ಸಲೈನ್ ದ್ರಾವಣದಲ್ಲಿ ಮುಳುಗಿಸಿ ಕಣ್ಣು ಸಂಗ್ರಹಾಲಯಕ್ಕೆ ಒಯ್ಯಲಾಗುವುದು. ಆ ಕಣ್ಣುಗಳನ್ನು ಮತ್ತೆ ಸಾಕಷ್ಟು ವೈಜ್ಞಾನಿಕವಾಗಿ ಪದರಗಳನ್ನು ವಿಂಗಡಿಸಿ ಅಕ್ಷಿಪಟಲವನ್ನು ಬೇರ್ಪಡಿಸಲಾಗುವುದು. ಕನ್ನಡ ನಾಡಿನ ಕಣ್ಮಣಿ ಪುನೀತ್ ರಾಜ್ ಕುಮಾರ್ ಅವರ ಕಣ್ಣುಗಳನ್ನು ನಾಲ್ಕು ಅಂಧರಿಗೆ ದೃಷ್ಟಿ ಕೊಡಲು ಬಳಸಲಾಗಿದೆ.

ಹಾಗಾಗಿ ಕುಟುಂಬದ ಸದಸ್ಯರು ಒಮ್ಮತದಿಂದ ನೇತ್ರದಾನಕ್ಕೆ ಒಪ್ಪಿಗೆ ನೀಡಬೇಕಾಗುತ್ತದೆ.




ಮೃತ ವ್ಯಕ್ತಿಯು ಈ ಮೊದಲೇ ನೇತ್ರದಾನಕ್ಕೆ ನೋಂದಣಿ ಮಾಡಿಸಿರಬೇಕಿಲ್ಲ, ನಾವು ಸತ್ತರೂ ನಮ್ಮ ಕಣ್ಣುಗಳಿಗೆ ಸಾವಿಲ್ಲ ಅಲ್ಲದೇ ಇನ್ನೂ ನಾಲ್ಕು ಅಂಧರ ಬದುಕಿನಲ್ಲಿ ಬೆಳಕಾಗಬಹುದಾದ ಅವಕಾಶ ಸತ್ತಮೇಲೆ ಸಮಾಜಸೇವೆ ಆಗುವ ಸುಲಲಿತ ಸಂದರ್ಭ. ಡಾ॥ ಆಗಿ ಈ ಪ್ರಕ್ರಿಯೆಯ ಭಾಗವಾಗಿ ನಾನು ಕಂಡ ನೂರಾರು ಕಣ್ಣೀರಿನ ಕಥೆಗಳು ಲೈಫು ಇಷ್ಟೇನೇ ಅನಿಸಿದ ಘಟನೆಗಳು ತುಂಬಾ, ಅವನೊಬ್ಬ ಮೇಧಾವಿ ಇಂಜಿನಿಯರ್ – ವೃತ್ತಿಯಲ್ಲಿ ಆಗಷ್ಟೇ ಅಡಿಯಿಟ್ಟು, ತನ್ನ ಮೇಧಾವಿತನದಿಂದ ಜರ್ಮನಿಯಲ್ಲಿ ಅತಿ ದೊಡ್ಡ ಹುದ್ದೆಗೆ ಸೇರಿದ್ದ. ಎರಡು ವರ್ಷಗಳು ಹೇಗೆ ಕಳೆಯಿತು, ತಿಳಿಯಲಿಲ್ಲ. ಯಾರೂ ಊಹಿಸಿರಲಿಲ್ಲ – ಇಂತ ಅದ್ಭುತ ಹುಡುಗ ಈ ರೀತಿ ವಾಪಸಾಗುವನೆಂದು. ಯಾಕೋ ತಲೆನೋವೆಂದು ವೈದ್ಯಕೀಯ ಪರೀಕ್ಷೆಗೆ ಒಳಪಟ್ಟಾಗ ತಿಳಿಯಿತು ಘೋರ ಸುದ್ದಿ, ಮೆನಿಂಜಿಯೋಮಾ ಎನ್ನುವ ಕ್ಯಾನ್ಸರ್ ತುಂಬಾ ಹರಡಿದೆ ಉಳಿದ ಜೀವನ ತಿಂಗಳ ಲೆಕ್ಕದಲ್ಲಿ, ಎಂದು ಮರಳಿ ಊರಿಗೆ ಬಂದ ಹುಡುಗನ ಕೋರಿಕೆ ಕಣ್ಣು ದಾನ ಮಾಡಿ ನನ್ನ ಉಳಿಸಿಕೊಳ್ಳಿ. ಸಾವನ್ನು ಗೆಲ್ಲಲಿಲ್ಲ. ಅವನ ಸಾವು ಊರಿಗೆಲ್ಲಾ ನೋವು ತಂದಿತ್ತು. ಆಗರ್ಭ ಶ್ರೀಮಂತ ತಂದೆ ಅಸಹಾಯಕರಾಗಿ ಕೈಚೆಲ್ಲಿ ನಿಸ್ತೇಜರಾಗಿ ಕುಳಿತಿದ್ದರು. ಹಣ ವಿದ್ಯೆ ಒಳ್ಳೆಯತನ ಯಾವುದೂ ಕಾಯಲಿಲ್ಲ. ಆದರೆ ಅವನ ಕಣ್ಣು ಇಂದಿಗೂ ಜಗತ್ತು ನೋಡುತ್ತಿದೆ.

ಅವರೊಬ್ಬ ಮುಖಂಡರು, ಸಿವಿಲ್ ಇಂಜನಿಯರ್, ಎಲ್ಲರ ಬದುಕಿನ ಕನಸಿನಗೂಡು ಕೈಗೂಡಿಸುವಲ್ಲಿ ಖುಷಿ ಕಂಡವರು. ಪ್ರೀತಿಯ ಪತ್ನಿ ಬುದ್ಧಿವಂತ ಮಗಳ ಚಿಕ್ಕ ಸಂಸಾರ. ಆದರೆ ವಯಸ್ಸಾದ ತಾಯಿ ತಂದೆ ಅಕ್ಕತಂಗಿಯರ ಬಹು ದೊಡ್ಡ ಕುಟುಂಬ. ಎಲ್ಲರ ಪ್ರೀತಿಯ ಆಧಾರ, ಎಲ್ಲ ಅಕ್ಕತಂಗಿಯರ ತವರು, ತಾಯಿ ತಂದೆಯರ ಜವಾಬ್ದಾರಿಯುತ ಮಗ. ತನ್ನ ಮಗಳನ್ನು ಶಾಲೆಗೆ ಕರೆದೊಯ್ಯುವಾಗ ಆದ ಅಪಘಾತ, ತಲೆಗೆ ಬಲವಾದ ಏಟು ಬಿದ್ದ ಕಾರಣ ಸ್ಥಳದಲ್ಲೇ ಆ ಕ್ಷಣ ಮರಣ. ಈಗಲೂ ಅವರ ಕಣ್ಣ ನೋಟದಲ್ಲಿ ನಾಲ್ಕು ಜನರು ದೃಷ್ಟಿ ಪಡೆದಿದ್ದಾರೆ.

ತಾಯಿಯು ಗ್ರಾಮ ಪಂಚಾಯಿತಿಯ ಸದಸ್ಯೆ. ಆರನೇಕ್ಲಾಸಿನ ಮಗಳ ಹುಟ್ಟಿದ ಹಬ್ಬ ಮೂರು ದಿನವಿತ್ತು. ಒಳ್ಳೆಯ ಉಡುಪು ತೆಗೆಸಿದ್ದಾಗಿತ್ತು. ಮಗಳು ನೀಲಿ ಬಣ್ಣಕ್ಕೆ ಬದಲಾಗಿ ಪಿಂಕ್ ಬಣ್ಣದ ಉಡುಪು ತೆಗೆದು ಕೊಡಲು ಒತ್ತಾಯ ಮಾಡಿ ಹಠ ಮಾಡುತ್ತಿದ್ದಳು, ಪಂಚಾಯಿತಿಯ ಕೆಲಸ ಮುಗಿಸಿ ಹೋಗೋಣವೆಂದು ರಮಿಸಿ ತನ್ನ ಕೆಲಸ ಮುಗಿಸಿ ಬರಲು ಲಗುಬಗೆಯಿಂದ ತಾಯಿ ಆಕಡೆ ಹೊರಟಿದ್ದೇ ಬಂತು, ಮಗಳು ಸಿಕ್ಕ ದಾವಣಿಯನ್ನು ಕೊರಳಿಗೆ ಬಿಗಿದುಕೊಂಡಳು. ಆಟವಾಡುವ ಹಠಮಾಡುವ ವಿಧಾನವೆಂದು ಬಗೆದಳೇನೋ, ಜೀವವಂತೂ ಹಾರಿಹೋಯಿತು. ಆಘಾತದ ನೋವಲ್ಲಿ ಕಣ್ಣು ದಾನ ನೀಡಿ ಮಗಳು ತನ್ನನ್ನು ಎಲ್ಲಿಂದಲಾದರೂ ನೋಡುತ್ತಿರಲಿ ಎಂದು ಪ್ರಾರ್ಥನೆ ಮಾಡುವ ತಾಯಿ, ಅವಳ ಆ ಕ್ಷಣದ ನಿರ್ಧಾರಕ್ಕೆ ಇನ್ನು ನಾಲ್ಕು ಮಕ್ಕಳು ಬೆಳಕು ಕಂಡರು.


ತುಂಬಾ ಪ್ರೀತಿಸುವ ಪತಿ ಅಕಾಲ ಮರಣಕ್ಕೆ ಶರಣಾದರೆ ಮಗುವಿಗೆ ವಿಷ ಕೊಟ್ಟು ತಾನೂ ಮರಣಕ್ಕೆ ಶರಣಾಗಿ ಪತಿಯನ್ನು ಮೇಲಿನ ಲೋಕದಲ್ಲಿ ಸೇರುವ ಮೂಢ ನಂಬಿಕೆಯಿಂದ ಜೀವಕ್ಕೆ ಗುಡ್ ಬೈ ಎಂದ ಇಪ್ಪತ್ತೆರಡೇ ವರ್ಷದ ಸುಕೋಮಲ ಕಣ್ಣುಗಳನ್ನು ಆ ಆಘಾತದ ಸಮಯದಲ್ಲಿ ಕೊಡಿಸಿದ ಕುಟುಂಬ

ವರ್ಗದವರ ಸುಸ್ಥಿರ ಮನಸ್ಥಿತಿ ಅಪರೂಪ.

ಅನಾರೋಗ್ಯದಿಂದ ತಾನು ಸಾಯುವುದು ನಿಶ್ಚಿತ ಎಂದು ತಿಳಿದುಕೊಂಡ ಹದಿಹರೆಯದ ಹುಡುಗಿ ಪುನೀತ್ ರಾಜ್ ಕುಮಾರ್ ನ ಅಭಿಮಾನಿ. ಪುನೀತ್ ಕೊಟ್ಟ ಹಾಗೆ ನನ್ನ ಕಣ್ಣು ದಾನ ಮಾಡಲೇಬೇಕು ಎಂದು ತಾಯಿ ತಂದೆಯರ ಬಳಿ ಮಾತು ತೆಗೆದುಕೊಂಡ ಬಳಿಕ ಪುನೀತ್ ಫೋಟೋ ಮುಂದೆ ತಾನೂ ನಿಂತು ಮೊಬೈಲ್ ಫೋಟೋ ತೆಗೆದು ಕೊಂಡಿದ್ದಳು. ಎದುರಿಲ್ಲದ ಸಾವಿಗೆ ಬಲಿಯಾದ ಮಗಳ ಕೊನೆಯಾಸೆ ತೀರಿಸಿದ ಋಣವೋ ಮಡುಗಟ್ಟಿದ ದುಃಖವೋ ಬೇರೆ ಮಾಡುವ ಗೆರೆಯಾವುದು?

ಹೇಗೆ ಈ ರೀತಿಯ ಅರಿವು? ದುಃಖವನ್ನು ಮೀರಿ ಸಾಮಾಜಿಕ ಜವಾಬ್ದಾರಿ ಮುನ್ನೆಡೆಗೆ ಹೇಗೆ ಬರುತ್ತಿದೆ?

**ಕಾರ್ನಿಯಲ್ ಬ್ಲೈಂಡ್ ನೆಸ್**



ಅಕ್ಷಿಪಟಲ ಕುರುಡುತನ ಅಂಧತ್ವದ ಮೂರನೇ ಕಾರಣ. ಕಣ್ಣಿನ ಪೊರೆ ಹಾಗೂ ಗ್ಲಾಕೋಮಾ ಮೊದಲೆರಡು ಕಾರಣಗಳು. ಆದರೆ ಭಾರತದಲ್ಲಿ ಇತ್ತೀಚಿನಲ್ಲಿ ನಡೆದ ಸಮೀಕ್ಷೆಯ ಪ್ರಕಾರ (೨೦೧೫–೨೦೧೯) ಕಾರ್ನಿಯಾ ಅಂಧತ್ವ ಎರಡನೇ ಮುಖ್ಯ ಕಾರಣವಾಗಿ ಹೊಮ್ಮಿದೆ. ಐವತ್ತು ವರ್ಷ ಮೇಲ್ಪಟ್ಟವರಲ್ಲಿ ಶೇ ೮.೨% ಆದರೆ ಐವತ್ತರ ಒಳಗಿನ ವ್ಯಕ್ತಿಗಳಲ್ಲಿ ಶೇ ೩೫.೫% ರಷ್ಟು ಹೆಚ್ಚು ಇದೆ, ಹಾಗೆಯೇ ಇಪ್ಪತ್ತೈದು ಸಾವಿರದಿಂದ ಮೂವತ್ತು ಸಾವಿರ ಹೊಸ ಅಂಧ ರೋಗಿಗಳು ಪ್ರತಿವರ್ಷ ಹೆಚ್ಚಾಗುತ್ತಿದ್ದಾರೆ. ಈ ಅಂಧತ್ವಕ್ಕೆ ಕಾರ್ನಿಯಾ ಕಸಿಯೇ ಪರಿಹಾರ. ನೇತ್ರದಾನದಿಂದ ಮಾತ್ರ ಸಾಧ್ಯವಾಗಬಲ್ಲ ಈ ಚಿಕಿತ್ಸೆಗೆ ಅರಿವಿನ ಕೊರತೆಯೇ ಮೊದಲ ಅಡ್ಡಿ. ಮೃತರ ಕಣ್ಣು ತೆಗೆದು ಬಿಟ್ಟರೆ ಮುಂದಿನ ಜನ್ಮದಲ್ಲಿ ಕುರುಡರಾಗಿ ಹುಟ್ಟುತ್ತಾರೆ, ಕಣ್ಣು ಇಲ್ಲದೇ ಮೇಲಿನ ಲೋಕಕ್ಕೆ ಹೋಗುವುದು ಹೇಗೆ, ಕಣ್ಣು ದಾನ ತೆಗೆದುಕೊಂಡು ಮಾರಿಕೊಳ್ಳುತ್ತಾರಾ, ಕಣ್ಣು ಸಮೇತ ಅಂತ್ಯಕ್ರಿಯೆ ಮಾಡದೇ ಇದ್ದರೆ ಶಾಪ ಕೊಡುತ್ತಾರೆ, ಮುಂದಿನ ಪೀಳಿಗೆಯವರಿಗೆ ಕುರುಡು ಭಾದಿಸುತ್ತದೆ... ಹೀಗೇ ನೂರಾರು ಅರ್ಥವಿಲ್ಲದ ಮೂಢ ನಂಬಿಕೆಗಳು ನೇತ್ರದಾನಕ್ಕೆ ಜನರ ಹಿಂಜರಿಕೆಗೆ ಕಾರಣವಾಗಿದೆ. ಈ ಎಲ್ಲ ಮೌಢ್ಯತೆ ಬಿಟ್ಟು ನೇತ್ರದಾನ ಮಾಡಿ ಅಂಧರ ಬದುಕಿಗೆ ಬೆಳಕು ನೀಡಬೇಕಾದ ಅವಶ್ಯಕತೆ ತುಂಬ ಇದೆ. ಭಾರತದ ಇಂದಿನ ಅಂಕಿ ಅಂಶಗಳನ್ನು ಗಣಿಸಿದರೆ ಒಂದು ಲಕ್ಷ ಜನರಿಗೆ ಕಸಿಯ ಅಗತ್ಯವಿದೆ (ವಾಸ್ತವದಲ್ಲಿ ಸಂಖ್ಯೆಯು ೪೨೦೦೦೦ ಆಗಬಹುದೆಂಬ ಅಂದಾಜಿದೆ.) ಆದರೆ ನಲವತ್ತು ಸಾವಿರ ಕಣ್ಣು ಕಸಿ ಮಾತ್ರ ಸಾಧ್ಯವಾಗುತ್ತಿದೆ. ಕಸಿ ಚಿಕಿತ್ಸೆಗೆ ಕಾಯುತ್ತಿರುವವರಲ್ಲಿ ಚಿಕ್ಕವಯೋಮಾನದವರೇ ಅಧಿಕ. ಈ ಕೊರತೆಯನ್ನು ಸರಿಮಾಡುವ ಅಗತ್ಯ ಇಂದಿನ ದಿನಮಾನದಲ್ಲಿ ಹೆಚ್ಚಾಗಿದೆ.

ಬೇಡರ ಕಣ್ಣಪ್ಪನನ್ನು ಮೊದಲ ನೇತ್ರದಾನಿಯಾಗಿ ಪರಿಗಣಿಸಿದರೆ ನೇತ್ರ ಪಡೆದವನು ಆ ಮಹಾಶಿವನೇ!! ವಾಸ್ತವದಲ್ಲಿ ಮೊದಲ ಕಣ್ಣ ಕಸಿ ನಡೆದದ್ದು ಪ್ರೇಗ್ ನಲ್ಲಿ ೧೯೦೫ ಎಡ್ವೆರ್ಡ್ ಝಿರ್ಮ್ (೧೮೮೭–೧೯೪೮) ಅಲೊಯಿಸ್ ಗ್ಲೋಗೆರ್ ಎನ್ನುವ ರೈತನಿಗೆ ಎರಡೂ ಕಣ್ಣುಗಳಿಗೆ ರಾಸಾಯನಿಕಗಳಿಂದ ಆಘಾತವಾಗಿ ಅಂಧತ್ವ ಕಾಡಿತ್ತು. ದುರಂತವೆಂದರೆ ಹನ್ನೊಂದು ವರ್ಷದ ಹುಡುಗನಿಗೆ ಸ್ಕ್ಲೀರಾ (ಕಣ್ಣಿನ ಬಿಳಿಯ ಭಾಗ) ಮೇಲೆ ಇರಿತದ ಗಾಯದಿಂದ ಕುರುಡಾಗಿದ್ದನು. ಆ ಕಣ್ಣು ತೆಗೆದು ಅದರ ಅಕ್ಷಿಪಟಲವನ್ನು ರೈತನಿಗೆ ಕಸಿಮಾಡಲು ಬಳಸಲಾಗಿತ್ತು. ಆ ಕಣ್ಣಿನ ಅಕ್ಷಿಪಟಲದಿಂದ ೫ ಎಂ ಎಂ ಗಾತ್ರದ ಎರಡು ಕಸಿ ಅಂಗಾಂಶವನ್ನು ಸಿದ್ಧಪಡಿಸಲಾಗಿತ್ತು. ರೈತನ ಬಲಗಣ್ಣು ಉದ್ದೇಶಿತ ಫಲಿತಾಂಶ ನೀಡಲಿಲ್ಲ: ಎಡಗಣ್ಣು ಚೆನ್ನಾಗಿ ಆಗಿ ದೃಷ್ಟಿ ಮರಳಿ ಸಿಕ್ಕಿತು. ರಶಿಯಾದ ನೇತ್ರತಜ್ಞ ವ್ಲಾಡಿಮಿರ್‌ಫಿಲಟೋವ್ ಮೃತರ ಕಣ್ಣಿನಿಂದ ಕಣ್ಣುಗಳ ಕಸಿ ಸಾಧ್ಯವೆಂದು ನಿರೂಪಿಸಿದರು. ಅಮೇರಿಕಾದಲ್ಲಿ ಫಿಲಟೋವ್‌ರ ಸಿದ್ಧಾಂತದ ವೈಜ್ಞಾನಿಕ



ಎಡ್ವೆರ್ಡ್ ಝಿರ್ಮ್

ಮುಂದುವರಿಕೆಯಾಗಿ ೧೯೪೪ರಲ್ಲಿ ಪ್ರಪಂಚದ ಮೊದಲ ನೇತ್ರಭಂಡಾರ ರೂಪುಗೊಂಡಿತು. ಭಾರತದಲ್ಲಿ ೧೯೪೫ರಲ್ಲಿ ಮೊದಲ ನೇತ್ರಭಂಡಾರವು ಚೆನ್ನೈ ನಲ್ಲಿ ಆರಂಭವಾಯಿತು.

೧೯೪೮ರಲ್ಲಿಯೇ ಡಾ. ಆರ್. ಇ. ಎಸ್. ಮುತ್ತಯ್ಯ ಅವರು ಪ್ರಥಮ ಕಸಿ ನಡೆಸಿದರೂ, ಮೊದಲ ಯಶಸ್ವಿ ಶಸ್ತ್ರಚಿಕಿತ್ಸೆಯ ಗರಿಮೆಯು ಫೆಬ್ರವರಿ ೧೯೬೦ ರಲ್ಲಿ ಡಾ. ಧಂಡಾ ಅವರು ಇಂದೋರಿನಲ್ಲಿ ಎಂ. ವೈ. ಆಸ್ಪತ್ರೆಯಲ್ಲಿ ನಡೆಸಿದ ಕಸಿಗೆ ಸಲ್ಲುತ್ತದೆ. ೧೯೬೦ ರಿಂದ ೧೯೭೦ರ ವರೆವಿಗೂ ಗುಜರಾತಿನ ಡಾ, ಧಂಡಾ ಹಾಗೂ ಡಾ. ವಸುಂಧರಾ ಕಾಳೇಶ್ವರ್ ಅಹಮದಾಬಾದಿನಲ್ಲೂ ಕಸಿ ಶಸ್ತ್ರ ಚಿಕಿತ್ಸೆಗಳನ್ನು ನಡೆಸುತ್ತಿದ್ದರು. ಇಲ್ಲಿ ಮಾತ್ರ ನಡೆಯುತ್ತಿದ್ದ ಚಿಕಿತ್ಸೆಗಳನ್ನು ದೇಶವ್ಯಾಪಿ ಮಾಡಲು ಸರ್ಕಾರದ ಅಕ್ಷಿಪಟಲ ಅಂಧತ್ವ ಯೋಜನೆಯು ೧೯೭೬ರಲ್ಲಿ ಆರಂಭವಾಯಿತು. ೧೯೮೩ರಲ್ಲಿ ಕಸಿಯ ಕುರಿತು ಕಾನೂನು ಅಸ್ತಿತ್ವಕ್ಕೆ ಬಂದಿತು. ೧೯೮೫ ರಲ್ಲಿ ನೇತ್ರದಾನ ಪಾಕ್ಷಿಕದ ಆಚರಣೆಯನ್ನು ಆರಂಭಿಸಲಾಯಿತು. ಹಾಗೆಯೇ ನೇತ್ರದಾನಿಗಳ ರಕ್ತ ಸಂಗ್ರಹಿಸಿ ಏಡ್ಸ್‌ಗಾಗಿ ಪರೀಕ್ಷಿಸುವುದನ್ನು ೧೯೮೬ರಿಂದ ಪ್ರಾರಂಭಿಸಲಾಯಿತು.

**ಯಾರೆಲ್ಲ ನೇತ್ರದಾನಿಗಳಾಗಬಹುದು?**

ಸತ್ತಮೇಲೂ ನಮ್ಮ ಕಣ್ಣು ಸೌಂದರ್ಯ ಕಾಣುತ್ತಾ ಇರಬೇಕೆಂದರೆ ನಾವು ನೇತ್ರದಾನ ಮಾಡೋಣ. ಯಾರು ಬೇಕಾದರೂ ನೇತ್ರದಾನಿಗಳಾಗಬಹುದು. ಕಣ್ಣಿನದೇ ಕ್ಯಾನ್ಸರ್, ಎಚ್. ಐ. ವಿ. ಪಾಸಿಟೀವ್, ಇರುವಂತಹ ಸಂದರ್ಭದಲ್ಲಿ ಮಾತ್ರ ದಾನ ಸ್ವೀಕರಿಸುವುದಿಲ್ಲ. ದೃಷ್ಟಿದೋಷ ಇದ್ದವರು, ಕನ್ನಡಕ ಬಳಕೆ ಮಾಡುವವರು, ಕಣ್ಣಿಗೆ ಗಾಯವಾದವರು, ಕ್ಯಾಟರಾಕ್ಟ್ ಚಿಕಿತ್ಸೆ ತೆಗೆದುಕೊಂಡವರು – ಯಾರು ಬೇಕಾದರೂ ದಾನಿಗಳಾಗಬಹುದು.

ದಾನಮಾಡಲು ತೀರ್ಮಾನಿಸಿದ ಸಂದರ್ಭದಲ್ಲಿ ಮೃತರ ಕಣ್ಣನ್ನು ರೆಪ್ಪೆಗಳಿಂದ ಜಾಗರೂಕವಾಗಿ ಮುಚ್ಚಿಡಬೇಕು. ಫ್ಯಾನ್ ಆರಿಸಬೇಕು. ರೆಪ್ಪೆಯ ಮೇಲೆ ಬಟ್ಟೆಯೊಂದನ್ನು ಮುಚ್ಚಿ ಹಿಮಗೆಡ್ಡೆಗಳನ್ನು ಇಡಬೇಕು. ಹೀಗಿಟ್ಟಾಗ ಆರರಿಂದ ಎಂಟು ಗಂಟೆಗಳ ತನಕ ನೇತ್ರಗಳ ಗುಣಮಟ್ಟ ಹಾಳಾಗುವುದಿಲ್ಲ. ದಾನ ಪಡೆದುಕೊಳ್ಳಲು ಅನುಕೂಲವಾಗಿರುತ್ತದೆ.

ನೇತ್ರ ಬ್ಯಾಂಕಿನವರು ಮೃತರ ಮನೆಗೆ / ಆಸ್ಪತ್ರೆಗೆ ಬಂದು ವಿಶಿಷ್ಟ ಪದ್ಧತಿಯಿಂದ ನೇತ್ರಗಳನ್ನು ಬೇರ್ಪಡಿಸಿ, ಸಂಗ್ರಹಿಸಿ ತೆಗೆದುಕೊಂಡು ಜೊತೆಗೆ ಒಯ್ಯುತ್ತಾರೆ.

ಈ ಬಾರಿಯ ವಿಶ್ವ ನೇತ್ರದಾನದ ದಿನಾಚರಣೆ ಜೂನ್ ೧೦ರ ಘೋಷವಾಕ್ಯ "ನನ್ನ ದೃಷ್ಟಿ ನಿಚ್ಚಳ".

ನಾವೂ ನಮ್ಮ ನಮ್ಮ ಪಾತ್ರವನ್ನು ನಿಶ್ಚಿತವಾಗಿ ಮಾಡೋಣ.



ವೈದ್ಯೇತರ

# ಜೈ ಗುರುದೇವ

**ಡಾ. ಸುಲೋಚನಾ ಚಿನಿವಾಲರ**
ಕುಟುಂಬ ವೈದ್ಯರು, ಗಂಗಾವತಿ



ಡಾ ಶಿವಾನಂದ ಕುಬಸದ
ವಿಭಾಗೀಯ ಸಂಪಾದಕರು

ನಾನು ಸಮಯ ಸಿಕ್ಕಾಗ ಸಿದ್ದೇಶ್ವರ ಶ್ರೀಗಳ ಪ್ರವಚನವನ್ನು ಆಲಿಸುತ್ತಿರುತ್ತೇನೆ. ಅವರು ಒಂದು ಪ್ರವಚನದ ವಿಷಯ ತುಳಿದಾಗ ಮೇಲೇಳುವುದು ಹೇಗೆ? ಎಂದಾಗಿತ್ತು. ಅದರಲ್ಲಿ ಅವರು ಜೀವನವನ್ನು ಹುಲ್ಲಿಗೆ ಹೋಲಿಸಿದ್ದಾರೆ. ಹುಲ್ಲು ನಾವು ಕಸವೆಂದು ಕೀಳಿ ತೆಗೆಯುತ್ತೇವೆ. ಇನ್ನು ಹೂದೋಟದಲ್ಲಿ ಲಾನ್ ಬೆಳೆಸಿದವರು ಕೂಡಾ ಅದನ್ನು ಎತ್ತರಕ್ಕೆ ಬೆಳೆದಾಗ ಆಗಾಗ ಕತ್ತರಿಸುವುದುಂಟು. ಆದರೂ ಅದು ಬೆಳೆಯುವುದನ್ನು ನಿಲ್ಲಿಸುವುದಿಲ್ಲ. ಹಾಗೇ ಇದು ಮಾನವ ಜೀವನಕ್ಕೂ ಅನ್ವಯಿಸುವಂತಹದ್ದು. ಇದು ನಮ್ಮ ಜೀವನದಲ್ಲಿ ನಡೆದ ಒಂದು ಘಟನೆಗೆ ಸಮೀಕರಿಸಬಹುದೆಂದು ಅನಿಸಿರುವುದರಿಂದ ಅದನ್ನು ಇಲ್ಲಿ ಪ್ರಸ್ತುತಪಡಿಸುತ್ತಿದ್ದೇನೆ.

ನಾವು ಪ್ರತಿ ವರ್ಷದಂತೆ ನಮ್ಮ ಪತಿ ಡಾ। ವಿ. ವಿ. ಚಿನಿವಾಲರವರು ಶಸ್ತ್ರಚಿಕಿತ್ಸಕರು ಇರುವುದರಿಂದ ರಾಷ್ಟ್ರೀಯ ಶಸ್ತ್ರಚಿಕಿತ್ಸಾ ಸಮ್ಮೇಳನದಲ್ಲಿ ಪಾಲ್ಗೊಳ್ಳುವುದು, ಪ್ರತಿವರ್ಷ ಡಿಸೆಂಬರ್ ಅಂತ್ಯದಲ್ಲಿ ಹೋಗುವುದು ರೂಢಿಯಲ್ಲಿತ್ತು. ಆಸ್ಪತ್ರೆಗೆ ಬರುವ ರೋಗಿಗಳಿಗೆ ಅನಾನುಕೂಲ ಆಗಬಾರದೆಂದು ಹೊರ ರೋಗಿಗಳ ನಿರೀಕ್ಷಣಾ ವಿಭಾಗದಲ್ಲಿ ಒಂದು ಸೂಚನಾ ಫಲಕದಲ್ಲಿ ನಾವು ಸಮ್ಮೇಳನಕ್ಕೆ ತೆರಳುವ ಮತ್ತು ಮರಳಿ ಬರುವ ದಿನಾಂಕವನ್ನು ನಮೂದಿಸಿ ಸೇವೆಗೆ ಲಭ್ಯವಿರುವುದಿಲ್ಲವೆಂದು, ಅವರ ಸಹಕಾರ ಕೋರುತ್ತಿದ್ದೆವು.

ಇದೇ ರೀತಿಯಾಗಿ ನಾವು ಡಿಸೆಂಬರ್ ೧೯೯೮ರಲ್ಲಿ ಅಹಮದಾಬಾದನಲ್ಲಿ ಜರುಗುವ ಸಮ್ಮೇಳನದ ಮಾಹಿತಿಯ ಸೂಚನಾ ಫಲಕ ಲಗತ್ತಿಸಿ ಹಾಗೆಯೇ ಗಾಂಧಿನಗರ ಮತ್ತು ಅಹಮದಾಬಾದ ಸುತ್ತಮುತ್ತ ಇರುವ ಪ್ರೇಕ್ಷಣಾ ಸ್ಥಳಗಳ ವೀಕ್ಷಣೆಗೆ ಮಿತ್ರರೊಂದಿಗೆ ತೆರಳಿದೆವು.

ಈ ಒಂದು ಅವಕಾಶವನ್ನು ಬಳಸಿಕೊಂಡು ನಮ್ಮ ಯಶಸ್ಸು ಸಹಿಸದ ಕೆಲ ದುಷ್ಟ ಶಕ್ತಿಗಳು ಹೊಂಚು ಹಾಕಿ ನಮ್ಮ ವೃತ್ತಿಯ ಬಗ್ಗೆ ಕಳಂಕ ಸೃಷ್ಟಿಸುವ ದೃಷ್ಟಿಯಿಂದ ಒಂದು ಲೋಕಲ್ ಪೇಪರ್ ವರದಿಗಾರನ ಸಹಾಯ ಪಡೆದು ನಾವು ರೋಗಿಗಳ ಮೂತ್ರಪಿಂಡಗಳನ್ನು ತೆಗೆಯುತ್ತೇವೆಂದು ಪೇಪರ್‌ಗಳಲ್ಲಿ ಪ್ರಕಟಿಸಿ ಇನ್ನು ಕೆಲವು ಕಟ್ಟು ಕಥೆಗಳನ್ನು ಕಟ್ಟಿ ಪೇಪರ್‌ನಲ್ಲಿ ನಾವು ವಂಚಕರು ಎಂದು ಬಿಂಬಿಸಿ, ಪ್ರಕಟಿಸಿ ಹಳ್ಳಿ-ಹಳ್ಳಿಗಳಲ್ಲಿ ಜನ ಸಮೂಹ ಇರುವ ಹೋಟೆಲ್ ಸಂತೆಗಳಲ್ಲಿ ಪುಕ್ಕಟ್ಟೆಯಾಗಿ ವಿತರಣೆ ಮಾಡಿರುವುದು ನಾವು ಊರು ಬಿಟ್ಟ ಮರುದಿನವೇ ಮಾಡಿದ್ದರು. ನಾವು ೧೦-೧೨ ದಿನ ತೆರಳಿದ ಪ್ರಯುಕ್ತ ಜನರಲ್ಲಿ ನಮ್ಮನ್ನು ಪೋಲಿಸರು ಬಂಧಿಸಿಕೊಂಡು ಹೋಗಿದ್ದಾರೆ. ಬೇಕಾದರೆ ನೋಡಿ ಬನ್ನಿ ಎಂದೆಲ್ಲಾ ಸುದ್ದಿ ಹಬ್ಬಿಸಿದ್ದರು. ಜನ ಆಸ್ಪತ್ರೆಗೆ

ಬಂದು ನೋಡಲಾಗಿ ನಾವಿಲ್ಲದಿರುವುದನ್ನು ಕಂಡು ನಿಜವೆನಿಸಿ ಎಷ್ಟರ ಮಟ್ಟಿಗೆ ಪ್ರಭಾವ ಬೀರಿತೆಂದರೆ ಸ್ಕ್ಯಾನಿಂಗ್ ಸೌಲಭ್ಯವಿರುವ ಆಸ್ಪತ್ರೆಗೆ ತೆರಳಿ ನಮ್ಮ ಆಸ್ಪತ್ರೆಯಲ್ಲಿ ಆಪರೇಷನ್ ಆದವರು ತಮ್ಮ ಮೂತ್ರಪಿಂಡಗಳು ಇವೆಯೋ ಇಲ್ಲವೋ ಎನ್ನುವುದನ್ನು ಖಚಿತಪಡಿಸಿಕೊಳ್ಳುವಂತಾಯಿತು. ನಾವು ೧೦-೧೨ ದಿವಸ ಊರಲ್ಲಿ ಇಲ್ಲದಿದ್ದು ಇಲ್ಲಿಯೇ ವಿದ್ಯಮಾನಗಳು ಸತ್ಯಕ್ಕೆ ದೂರವಾದವುಗಳು ಏಕೆ ತಲೆ ಕೆಡಿಸಿಕೊಳ್ಳುವುದು ಎಂದು ನಮ್ಮ ಮಿತ್ರರು ಹಾಗೂ ಹಿತೈಷಿಗಳು ವಿಷಯವನ್ನು ನಮ್ಮ ಗಮನಕ್ಕೆ ತರಲೇ ಇಲ್ಲ. ಈಗಿನಂತೆ ಮೊಬೈಲ್ ಇರಲಿಲ್ಲ. ಟ್ರಂಕಾಲ್ ಮಾಡಿ ವಿಷಯ ತಿಳಿಸಿದರೆ ಅವರು ಹಾಕಿಕೊಂಡ ಪ್ರವಾಸಕ್ಕೆ ತೊಂದರೆಯಾಗುವುದೆಂದು ಯಾರೂ ತಿಳಿಸಲೇ ಇಲ್ಲ.

ನಾವು ಯಥಾ ಪ್ರಕಾರ ನಮ್ಮ ಪ್ರವಾಸ ಮುಗಿಸಿ ಮರಳಿ ಹಿಂದಿರುಗಿದಾಗ ನಮಗೆ ಅಚ್ಚರಿ ಮತ್ತು ಆತಂಕ ಕಾದಿತ್ತು. ಎಲ್ಲರೂ ಹಿಂಡು, ಹಿಂಡಾಗಿ ನಮಗೆ ಮಾತನಾಡಿಸಲು ಬರಲು ಪ್ರಾರಂಭಿಸಿದರು. ಬಂದವರು ಪೇಪರ್ ವಿಷಯದ ಬಗ್ಗೆಯೇ ಪ್ರಸ್ತಾಪ ಮತ್ತು ನಮ್ಮನ್ನು ಪೋಲಿಸರು ಹೊಡೆಯುತ್ತ ಪೋಲಿಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿದ್ದಾರೆ ಎಂಬ ಸುದ್ದಿಯನ್ನು ಹಬ್ಬಿಸಿ ನಂಬುವಂತೆ ಮಾಡಿದ್ದನ್ನು ನಮ್ಮ ಮುಂದೆ ಪ್ರಸ್ತುತಪಡಿಸುತ್ತಿದ್ದರು. ನಾವು ದಾರಿಯಲ್ಲಿ ಹೋಗುತ್ತಿದ್ದಾಗ ಅಂಗಡಿಯ ಜನ ರೋಡ್ ಕೆಲಸ ಮಾಡುವ ಕಾರ್ಮಿಕರು ನಮ್ಮ ಕಡೆ ಬೆರಳು ತೋರಿಸಿ ಇವನೆಯಂತೆ ಚಿನಿವಾಲ ಡಾಕ್ಟರ್ ಎಂದು ಬೆರಳು ಮಾಡಿತೋರಿಸುತ್ತಿದ್ದರು. ಆಗ ನಾನು ಸಾಕಷ್ಟು ಕುಗ್ಗಿದ ಅನುಭವ ಪಟ್ಟೆ ಹೇಗೋ ನಾವು ಏನೂ ತಪ್ಪು ಮಾಡಿಲ್ಲ ಏಕೆ ಹೆದರುವುದು ಎಂದು ಇದಕ್ಕೆ ಸ್ಪಷ್ಟೀಕರಣ ನೀಡಲು ಯಾವ ರೀತಿ ಮಾಡಬೇಕು ಎಂಬ ವಿಚಾರಕ್ಕೆ ತೊಡಗಿದೆವು.

ಇಲ್ಲಿಯ ಲೋಕಲ್ ಚಾನಲ್ ಟಿವಿಯೊಂದಿಗೆ ಸಂದರ್ಶನ ನಡೆಸಿದೆವು ವಿಷಯದ ಸ್ಪಷ್ಟೀಕರಣ ನೀಡಿ ಸತ್ಯಕ್ಕೆ ದೂರವಾದ ಸಂಗತಿಯೆಂದು ಸಾರ್ವಜನಿಕರಲ್ಲಿ ಮನವರಿಕೆ ಮಾಡುವ ಪ್ರಯತ್ನ ಮಾಡಿದೆವು. ಇನ್ನು ಕರಪತ್ರಗಳನ್ನು ಮುದ್ರಿಸಿ ಸಂತೆಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ನಮ್ಮ ಸಿಬ್ಬಂದಿಯ ಮುಖಾಂತರ ಬಿತ್ತರಿಸಲಾಯಿತು. ಈ ಒಂದು ಪ್ರಕ್ರಿಯೆ ಕೊಂಚ ಮಟ್ಟಿಗೆ ಕೆಲಸ ಮಾಡಿತು ಎಂದುಕೊಳ್ಳಬಹುದು. ಆದರೂ ಪರಸ್ಪರ ಮಾತಾಡುವಾಗ ಸಾರ್ವಜನಿಕರು ಎಷ್ಟೋ ದಿನಗಳ ನಂತರವೂ ಕೂಡಾ ಈ ವಿಷಯದ ಮಾತನಾಡುತ್ತಿರುತ್ತಾರೆಂದು ನಮಗೆ ಕೆಲವರಿಂದ ತಿಳಿದುಬಂದರು ನಾವು ಕುಗ್ಗಲಿಲ್ಲ.

ಮೊದಲು ಹಗಲು ರಾತ್ರಿ ಅವಿರತ ಕೆಲಸದಲ್ಲಿ ಹೆಚ್ಚಿನ ಸೌಲಭ್ಯ ನೀಡುವ ದೃಷ್ಟಿ ಇದ್ದರೂ ಸಾಧ್ಯವಾಗಿರಲಿಲ್ಲ. ಆದರೆ ಈಗ ಈ ಒಂದು ಸಮಯವನ್ನು ಬಳಸಿಕೊಂಡು ಡಾ। ಚಿನಿವಾಲರವರು Endoscopy Training ನ್ನು ಹುಬ್ಬಳ್ಳಿಯಲ್ಲಿ ಪಡೆದುಕೊಂಡು ಬಂದ ನಂತರ ಮೊಟ್ಟ ಮೊದಲು ಆ ಸೌಲಭ್ಯವನ್ನು ನೀಡುವ ಆಸ್ಪತ್ರೆ ನಮ್ಮದಾಯಿತು. ಮುಂದೆ ಸಮಯ ನೋಡಿಕೊಂಡು ಇವರು ಬೆಂಗಳೂರಿನಲ್ಲಿ Laparoscopic ತರಬೇತಿ ಪಡೆದು ಮೊದಲ ಬಾರಿಗೆ ನಮ್ಮ ಜಿಲ್ಲೆಯಲ್ಲೇ ಪ್ರಥಮ Laparoscopic Surgeon ಎಂದು ಗುರುತಿಸಿಕೊಂಡರು. ನಾನು ಮಹಿಳಾ ವೈದ್ಯಳಾಗಿ ಇವರೊಂದಿಗೆ ನನ್ನ ಕೆಲಸವನ್ನು ಮುಂದುವರೆಸಿ PCPNDTಯ ಆರು ತಿಂಗಳ ತರಬೇತಿ ಪೂರೈಸಿ ಪರೀಕ್ಷೆಯನ್ನು ನನ್ನ ೬೫ನೇ ವಯಸ್ಸಿನಲ್ಲಿ ಬರೆದು ಪಾಸಾಗಿ ಈಗಲೂ ಸೊನೊಲಾಜಿಸ್ಟ ಆಗಿ ಸೇವೆ ಮುಂದುವರಿಸಿದ ಹೆಮ್ಮೆ ನನ್ನದು. ನನ್ನ ಸಮಕಾಲೀನರು ಈಗ ತಮ್ಮ ನಿವೃತ್ತಿಯಲ್ಲಿದ್ದಾರೆ. ಆದರೂ ಕೈಲಾದ ಸೇವೆಯನ್ನು ಬದುಕಿರುವವರೆಗೆ ಪೂರೈಸುವ ಗುರಿಯೊಂದಿಗೆ ಕಾರ್ಯತತ್ಪರರಾಗಿದ್ದೇವೆ. ಇದು

ನಮ್ಮ ಬಸವಣ್ಣನವರ ಕಾಯಕವೇ ಕೈಲಾಸವೆಂಬ ಮಾತಿಗೆ ಅರ್ಥತರುವಂತದ್ದು ಎಂಬ ಭಾವನೆ ನಮ್ಮದು.

ಈ ಕಥೆಯು ನಮ್ಮನ್ನು ತುಳಿಯಲು ದುಷ್ಟ ಶಕ್ತಿಗಳು ಎಷ್ಟೇ ಪ್ರಯತ್ನ ಮಾಡಿದರು. ನಾವು ಚೆಂಡಿನಂತೆ ಪುಟಿದೇಳುವ ಸಾಮರ್ಥ್ಯ ಪಡೆದುಕೊಳ್ಳಬೇಕು ಜೀವನದಲ್ಲಿ ಕುಗ್ಗದೇ ಹಿಗ್ಗಿನಡೆ ಮುಂದೆ ಎನ್ನುವಂತಿರಬೇಕು. ಸುಖ ದುಃಖ ಸಮನಾಗಿ ಸ್ವೀಕರಿಸುವ ಮನೋಭಾವ ನಮ್ಮದಾಗಬೇಕು. ಈ ಸಮಚಿತ್ತಕ್ಕೆ ಪೂರಕ ನಮ್ಮ ಗುರು-ಹಿರಿಯರ ಜ್ಞಾನಾಮೃತ, ನಮ್ಮ ಅಂತಃಶಕ್ತಿಯ ಜಾಗೃತಿಗೆ ಯೋಗ, ಧ್ಯಾನ, ಪ್ರಾಣಾಯಾಮ ನಮ್ಮ ವೃತ್ತಿಯಲ್ಲಿ ಇಂತಹ ಸಮಸ್ಯೆಗಳು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮೊದಲಿಗಿನಿಂತಲೂ ಹೆಚ್ಚು ಕಾಣಸಿಗುತ್ತವೆ. ಅದಕ್ಕಾಗಿ ನಮ್ಮ ಕಿರಿಯ ವೈದ್ಯರಿಗೆ ಇದೊಂದು ಕಿವಿಮಾತು ಎಂದು ಈ ಮೂಲಕ ಸಾದರಪಡಿಸುತ್ತಿದ್ದೇವೆ.

ಈ ಘಟನೆಯ ನಂತರ ನಾವಿಬ್ಬರೂ ಬಹಳ ಗಟ್ಟಿಯಾಗಿ ಸಮಾಜದೊಂದಿಗೆ ನಮ್ಮ ವೈದ್ಯಕೀಯ ಸಂಘದೊಂದಿಗೆ ಬೆರೆತು ನಮ್ಮ ಕೈಲಾದ ಸೇವೆ ಮಾಡಲು ಕಣ್ಣು ತೆರೆಸಿದೆ ಎಂದೇ ಹೇಳಬಹುದು ಅದಕ್ಕೆ ಹೇಳುವುದು ನಿಂದಕರು ಇರಬೇಕು ಹಂದಿಯಾಂಗ. ಹೇಗೆ ನಮ್ಮ ಸುತ್ತಲಿರುವ ಪರಿಸರ ಸ್ವಚ್ಚಗೊಳಿಸುತ್ತವೋ ಹಾಗೆ ನಿಂದಕರು ನಮ್ಮಲ್ಲಿರುವ ಅಹಂನ್ನು ಅಳಿಸಿ ಜಾಗೃತಗೊಳಿಸುತ್ತಾರೆ. ಇದೆಲ್ಲದರ ಸಹಕಾರದಿಂದ ಯಾರು ನಮ್ಮನ್ನು ತುಳಿಯಲು ನೋಡಿದರೋ ಅವರ ಮುಂದೆ ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷರಾಗಿ ಮುಂಬರುವ ಭಾರತೀಯ ವೈದ್ಯಕೀಯ ಸಂಘದ ಸಮಾವೇಶದಲ್ಲಿ ಕಾರ್ಯನಿರ್ವಹಿಸಲು ಅಣಿಯಾಗಿದ್ದಾರೆ. ಇದಕ್ಕೆಲ್ಲ ನಮ್ಮ ಭಾರತೀಯ ವೈದ್ಯಕೀಯ ಸಂಘದ ಸರ್ವ ಸದಸ್ಯರ ಸಹಕಾರವೇ ಕಾರಣ.

ಅಕ್ಕಮಹಾದೇವಿಯು ತನ್ನ ಏರುಯೌವನದಲ್ಲಿ ಕೌಶಿಕ ರಾಜನ ಅರಮನೆಯ ಭೋಗ ವಿಲಾಸವನ್ನು ತೊರೆದು ಒಬ್ಬಂಟಿಯಾಗಿ ಚನ್ನಮಲ್ಲಿಕಾರ್ಜುನೇ ನನ್ನ ಗಂಡ ಎಂದು ನಿರ್ಜನವಾದ ಕಾಡಿನಲ್ಲಿ ಒಬ್ಬಂಟಿಗಳಾಗಿ ತೆರಳಿದಾಗ ಅವಳಿಗೂ ಇದೇ ತರಹದ ಅನುಭವವಾಗಿ ಈ ಒಂದು ವಚನ ನಮಗಾಗಿ ಬರೆದಿದ್ದು ಎನ್ನಬಹುದು.

ಬೆಟ್ಟದ ಮೇಲೊಂದು ಮನೆ ಮಾಡಿ



ಮೃಗಗಳಿಗೆ ಅಂಜಿದೊಡೆಂತಯ್ಯ
ಸಮುದ್ರದ ತಡದಲ್ಲಿ ಮನೆ ಮಾಡಿ
ನೆರೆ-ತೊರೆಗಳಿಗಂಜಿದೊಡೆಂತಯ್ಯ
ಸಂತೆಯೊಳಗೊಂದು ಮನೆ ಮಾಡಿ
ಶಬ್ದಕ್ಕೆ ನಾಚಿದೊಡೆಂತಯ್ಯ
ಚನ್ನಮಲ್ಲಿಕಾರ್ಜುನ ದೇವಾ
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ ನಿಂದೆಗಳು ಬಂದೊಡೆ
ಮನದಲ್ಲಿ ಕೋಪವ ತಾಳದೇ
ಸಮಾಧಾನಿಯಾಗಿರಬೇಕು
ಚನ್ನಮಲ್ಲಿಕಾರ್ಜುನ ದೇವಾ ಕೇಳ.



ಕಾಯಿಲೆ / ಚಿಕಿತ್ಸೆ

# ತಾಯಿಯಿಂದ ಮಗುವಿಗೆ ಹೆಚ್ ಐ ವಿ & ಸಿಫಿಲಿಸ್ ಸೋಂಕು

**ಡಾ. ದಿನೇಶ ಗುಡಿ**
ಹಿರಿಯ ವೈದ್ಯಾಧಿಕಾರಿಗಳು,
ಎ ಆರ್ ಟಿ ಪ್ಲಸ್ ಕೇಂದ್ರ, ವಿಮ್ಸ್ ಬಳ್ಳಾರಿ.



ಡಾ. ಗಡ್ಡಿ ದಿವಾಕರ
ವಿಭಾಗೀಯ ಸಂಪಾದಕರು

ತಾಯಿಯಿಂದ ಮಗುವಿಗೆ ಹೆಚ್ ಐ ವಿ & ಸಿಫಿಲಿಸ್ ಸೋಂಕು ಪ್ರಸರಣ ನಿರ್ಮೂಲನಾ ಕಾರ್ಯಕ್ರಮ ಭಾರತವು ಯು ಎನ್ ಏಡ್ಸ್ ನ ಗುರಿಯಾದ ೨೦೨೫–೨೬ ರವೇಳೆಗೆ ತಾಯಿಯಿಂದ ಮಗುವಿಗೆ ಹೆಚ್ ಐ ವಿ & ಸಿಫಿಲಿಸ್ ಸೋಂಕು ಪ್ರಸರಣ ನಿರ್ಮೂಲನೆ ಮತ್ತು ೨೦೩೦ ಕ್ಕೆ ಏಡ್ಸ್ ಸಾಂಕ್ರಾಮಿಕ ವನ್ನು ನಿರ್ಮೂಲನೆ ಮಾಡುವ ಒಡಂಬಡಿಕೆಗೆ ಸಹಿ ಮಾಡಿದೆ.

ಭಾರತದಲ್ಲಿ ತಾಯಿಯಿಂದ ಮಗುವಿಗೆ ಹೆಚ್ ಐ ವಿ ಸೋಂಕು ನಿಯಂತ್ರಣಕ್ಕಾಗಿ ಎನ್ ಎ ಸಿ ಪಿ ಕಾರ್ಯಕ್ರಮದ ಮೊದಲ ಹಂತವನ್ನು ೨೦೦೧–೨೦೦೨ ರಲ್ಲಿ ಹಮ್ಮಿಕೊಳ್ಳಲಾಯಿತು. ಆಗ ಗರ್ಭಿಣಿಗೆ ಸೋಂಕು ಪರೀಕ್ಷೆ ನಡೆಸಿ ಸೋಂಕು ಖಚಿತ ಪಟ್ಟಲ್ಲಿ ಒಂದು ಸಲ ನೆವರಾಪಿನ್ ಔಷಧಿ ನೀಡಲಾಗುತ್ತಿತ್ತು. ೨೦೧೨ ರಿಂದ ಬಹು ಔಷಧಿ ಚಿಕಿತ್ಸೆ ಆರಂಭವಾಯಿತು, ೨೦೧೩ ರಿಂದ ಸಿಡಿ೪ ಗಣನೆಗೆ ತೆಗೆದುಕೊಳ್ಳದೆ ಅಜೀವ ಚಿಕಿತ್ಸೆ ಪ್ರಾರಂಭವಾಯಿತು. ಈಗ ಎನ್ ಎ ಸಿ ಪಿ ೫ ನೇ ಹಂತದ ಕಾರ್ಯಕ್ರಮದಲ್ಲಿ ಇವಿಟಿಹೆಚ್ ಎಸ್ ಅನ್ನು ಅಳವಡಿಸಿಕೊಳ್ಳಲಾಗಿದೆ.

ಇದನ್ನು ನಾಲ್ಕು ಕವಲುಗಳಲ್ಲಿ ವಿಭಾಗಿಸಲಾಗಿದೆ.
ಇ. ವಿ. ಟಿ. ಹೆಚ. ಎಸ್‌ನ್ನು ವಿವಿಧ ಹಂತಗಳಲ್ಲಿ ಸಾಧಿಸಬೇಕು.

**ಹಂತ – ೧ ಮೂಲದಲ್ಲೇ ಸೋಂಕು ತಗಲದಂತೆ ನಿಯಂತ್ರಣ.**

ಹೆಚ್ ಐ ವಿ ಮತ್ತು ಲೈಂಗಿಕ ಸೋಂಕುಗಳ ಪತ್ತೆಗೆ ಪರೀಕ್ಷೆಗಳನ್ನು ನಡೆಸಬೇಕು. ಸೋಂಕು ತಗಲುವ ಸಾಧ್ಯತೆ ಇರುವ ಮಹಿಳೆಯರನ್ನು ಗುರುತಿಸಿ

<table>
<tr><th>ಕವಲುಗಳು</th><th>ಕವಲು–೧</th><th>ಕವಲು–೨</th><th>ಕವಲು–೩</th><th>ಕವಲು–೪</th></tr>
<tr><td>ಹೆಚ್ ಐ ವಿ</td><td>ಗರ್ಭಧಾರಣೆಯ ವಯಸ್ಸಿನ ಎಲ್ಲಾ ಮಹಿಳೆಯರಲ್ಲಿ ಸೋಂಕಿನ ನಿಯಂತ್ರಣ</td><td>ಅನಪೇಕ್ಷಿತ ಗರ್ಭಗಳನ್ನು ನಿಯಂತ್ರಿಸುವುದು</td><td rowspan="2">ಗರ್ಭಿಣಿಯಿಂದ ಮಗುವಿಗೆ ಹೆಚ್ ಐ ವಿ ಮತ್ತು ಸಿಫಿಲಿಸ್ ಸೋಂಕು ತಗಲುವುದನ್ನು ನಿಯಂತ್ರಿಸುವುದು</td><td rowspan="2">ಸೋಂಕಿತ ಗರ್ಭಿಣಿಯರಿಗೆ ಚಿಕಿತ್ಸೆ ಮತ್ತು ಪಾಲನೆ, ಸೋಂಕಿಗೆ ತೆರೆದುಕೊಂಡ ಮಗುವಿಗೆ ಚಿಕಿತ್ಸೆ.</td></tr>
<tr><td>ಸಿಫಿಲಿಸ್</td><td colspan="2">ಗರ್ಭಧಾರಣೆಯ ವಯಸ್ಸಿನ ಎಲ್ಲಾ ಮಹಿಳೆಯರಲ್ಲಿ ಸೋಂಕಿನ ನಿಯಂತ್ರಣ</td></tr>
</table>



ಅವರಿಗೆ ಹೆಚ್ಚಿನ ಮಾಹಿತಿ ನೀಡಿ ಸೋಂಕಿನಿಂದ ಹೇಗೆ ದೂರವಿರಬಹುದು ಎಂಬ ಜಾಗೃತಿ ಮೂಡಿಸಬೇಕು. ಸೋಂಕಿನಿಂದ ಆಗುವ ಪರಿಣಾಮಗಳ ಬಗ್ಗೆ ತಿಳುವಳಿಕೆ ನೀಡಬೇಕು.

**ಹಂತ – ೨ ಕುಟುಂಬ ನಿಯಂತ್ರಣ ಮತ್ತು ಗರ್ಭಧಾರಣೆಯ ಮುಂಚಿನ ಕಾಳಜಿ.**

ಸೋಂಕಿತರಿಗೆ ಯಾವುದೇ ತಾರತಮ್ಯವಿಲ್ಲದೇ ಕಳಂಕ ರಹಿತವಾಗಿ ಕುಟುಂಬ ನಿಯಂತ್ರಣ ವಿಧಾನಗಳ ಸೇವೆ ನೀಡಬೇಕು. ಇದರಿಂದ ಅನಪೇಕ್ಷಿತ ಗರ್ಭವನ್ನು ತಡೆಯಬಹುದು. ಅರ್ಹ ದಂಪತಿಗಳನ್ನು ಗುರುತಿಸಿ ಪಟ್ಟಿ ತಯಾರಿಸಬೇಕು, ಸಂಗಾತಿಯ ಪರೀಕ್ಷೆ ಮಾಡಿಸಬೇಕು. ಗರ್ಭಧಾರಣೆಗೆ ಮುಂಚೆ ಚಿಕಿತ್ಸೆಗೆ ಬದ್ಧತೆಯನ್ನು ಹೆಚ್ಚಿಸಿ ವೈರಲ್ ಲೋಡ್ ನಿಯಂತ್ರಣಕ್ಕೆ ಬಂದ ನಂತರ ಗರ್ಭ ಧರಿಸಲು ಸಲಹೆ ನೀಡಬೇಕು. ಸಿಫಿಲಿಸ್ ಸೋಂಕು ಪತ್ತೆಯಾಗಿದ್ದಲ್ಲಿ ಅದಕ್ಕೂ ಚಿಕಿತ್ಸೆ ಪಡೆದ ನಂತರ ಮಕ್ಕಳನ್ನು ಪಡೆಯಲು ಮನವೊಲಿಸಬೇಕು.

**ಹಂತ–೩** ಗರ್ಭ ಧರಿಸಿದ ಮೊದಲ ಮೂರು ತಿಂಗಳಲ್ಲಿ ಮತ್ತು ಹೆರಿಗೆ ಸಮಯದಲ್ಲಿ ಎಲ್ಲ ಗರ್ಭಿಣಿಯರಿಗೆ ಹೆ.ಚ್.ಐ.ವಿ. ಮತ್ತು ಸಿಫಿಲಿಸ್ ಪರೀಕ್ಷೆ ಮಾಡಬೇಕು, ಸೋಂಕು ಕಂಡುಬಂದಲ್ಲಿ ಚಿಕಿತ್ಸೆ ನೀಡಬೇಕು, ಗೌಪ್ಯತೆಯನ್ನು ಕಾಪಾಡಬೇಕು, ಸಂಗಾತಿ ಪರೀಕ್ಷೆ ಮಾಡಿಸಬೇಕು.

**ಹಂತ–೪ ಹೆಚ್ ಐ ವಿ ಸೋಂಕಿತ ಗರ್ಭಿಣಿ ಮತ್ತು ಹಾಲೂಡಿಸುವ ತಾಯಂದಿರ ಪಾಲನೆ.**

ಹೆಚ್ ಐ ವಿ ಸೋಂಕಿತರನ್ನು ಕಳಂಕಿತರಂತೆ ನೋಡದೆ ಗರ್ಭವನ್ನು ಮತ್ತು ಹೆರಿಗೆಯನ್ನು ಸೂಕ್ತವಾಗಿ ನಿರ್ವಹಿಸಿ ತಾಯಿಗೆ ಆರು ತಿಂಗಳು ಕೇವಲ ಎದೆ ಹಾಲು ಮಾತ್ರ ನೀಡಲು ಆಪ್ತ ಸಮಾಲೋಚನೆ ನೀಡಬೇಕು.

ಗರ್ಭಿಣಿ ಇರುವಾಗ ಸೋಂಕು ಪತ್ತೆಯಾದಲ್ಲಿ ತಕ್ಷಣ ಚಿಕಿತ್ಸೆ ಆರಂಭಿಸಬೇಕು, ಚಿಕಿತ್ಸೆಗೆ ಬದ್ಧತೆ ಕಾಪಾಡಿಕೊಳ್ಳಬೇಕು, ಚಿಕಿತ್ಸೆಗೆ ಬದ್ಧತೆ ಇರಲಿ ಇಲ್ಲದಿರಲಿ ೩೨–೩೬ ವಾರಗಳಲ್ಲಿ ವೈರಲ್ ಲೋಡ್ ಪರೀಕ್ಷೆ ನಡೆಸಿ ಮಗುವಿಗೆ ನೀಡಬೇಕಾಗುವ ಔಷಧಿಗಳನ್ನು ನಿರ್ಧರಿಸಬೇಕು. ಕುಟುಂಬ ಯೋಜನೆ ಅಳವಡಿಸಿಕೊಳ್ಳಲು ಮತ್ತು ಎದೆ ಹಾಲು ನೀಡಲು ಆಪ್ತ ಸಮಾಲೋಚನೆ ಮಾಡಬೇಕು.

ಹೆರಿಗೆ ನಂತರ ಕುಟುಂಬ ಯೋಜನೆಯ

ಯಾವುದಾದರೂ ಒಂದು ಪದ್ಧತಿಯನ್ನು ಅಳವಡಿಸಿಕೊಂಡು ಮಕ್ಕಳ ನಡುವೆ ಅಂತರವನ್ನು ಹೆಚ್ಚಿಸಿ ಮಕ್ಕಳ ಆರೋಗ್ಯವರ್ಧನೆಗೆ ಒತ್ತು ನೀಡಬೇಕು.

**ಹಂತ – ೫ ಸಿಫಿಲಿಸ್ ಸೋಂಕಿತ ಗರ್ಭಿಣಿಯರ ಪಾಲನೆ.**

ಕಳಂಕರಹಿತವಾಗಿ ಗರ್ಭಾವಸ್ಥೆಯನ್ನು ಮತ್ತು ಹೆರಿಗೆಯನ್ನು ನಿರ್ವಹಿಸಬೇಕು. ಸೋಂಕು ಧೃಡಪಟ್ಟಕೂಡಲೇ ಮೊದಲ ಬೆಂಜಥೀನ್ ಪೆನ್ಸಲಿನ್ ಚುಚ್ಚುಮದ್ದು ನೀಡಬೇಕು ನಂತರ ಸಂಪೂರ್ಣ ಚಿಕಿತ್ಸೆ ನೀಡಬೇಕು. ಚಿಕಿತ್ಸೆ ಪೂರ್ಣಗೊಂಡ ನಂತರ ಸೋಕು ನಿವಾರಣೆ ಆಗಿದೆಯೇ ಎಂದು ಪರೀಕ್ಷಿಸಬೇಕು. ಕುಟುಂಬ ಯೋಜನೆಯ ಬಗ್ಗೆ ಸಲಹೆ ನೀಡಿ, ಸೋಂಕಿಗೆ ತೆರೆದುಕೊಂಡ ಶಿಶುವಿಗೆ ಚಿಕಿತ್ಸೆ ನೀಡಬೇಕು.

**ಹಂತ – ೬ ಹೆಚ್ ಐ ವಿ ಸೋಂಕಿಗೆ ತೆರೆದುಕೊಂಡ ಶಿಶು ಮತ್ತು ಮಕ್ಕಳ ಪಾಲನೆ.**

ಸೋಂಕಿಗೆ ತೆರೆದುಕೊಂಡ ಶಿಶು ಮತ್ತು ಮಗುವಿಗೆ ಸೋಂಕು ಇಲ್ಲ ಎಂದು ಧೃಡಪಡುವವರೆಗೆ ಮಾಡಬೇಕಾದ ಪರೀಕ್ಷೆಗಳ ಬಗ್ಗೆ ತಾಯಿಗೆ ಮಾಹಿತಿ ನೀಡಿ ಮಾನಸಿಕವಾಗಿ ಸಿದ್ಧಪಡಿಸಬೇಕು. ಸೋಂಕಿತ ಗರ್ಭಿಣಿಗೆ ಹೆರಿಗೆ ಮಾಡಿಸುವಾಗ ಸಾಧ್ಯವಾದಷ್ಟು ಶಿಶು ಸೋಂಕಿಗೆ ತೆರೆದುಕೊಳ್ಳದಂತೆ ಮುನ್ನೆಚ್ಚರಿಕೆ ವಹಿಸಬೇಕು. ಮಗು ಜನಿಸಿದ ಒಂದು ಗಂಟೆಯೊಳಗೆ ಹೆಚ್ ಐ ವಿ ಸೋಂಕು ನಿರೋಧಕ ಚಿಕಿತ್ಸೆ ಆರಂಭಿಸಬೇಕು. ಗರ್ಭಿಣಿಯ ವೈರಲ್ ಲೋಡ್ ಸಾವಿರಕ್ಕಿಂತ ಕಡಿಮೆ ಇದ್ದರೆ ನೆವಿರಾಪಿನ್ ಔಷಧಿಯನ್ನು, ವೈರಲ್ ಲೋಡ್ ಸಾವಿರಕ್ಕಿಂತ ಹೆಚ್ಚಿದ್ದರೆ ನೆವಿರಾಪಿನ್ ಮತ್ತು ಜಿಡೋವಿಡಿನ್ ಎಂಬ ಎರಡು ಔಷಧಿಗಳನ್ನು ನೀಡಬೇಕು. ವೈರಲ್ ಲೋಡ್ ಮತ್ತು ಎದೆ ಹಾಲು ನೀಡುವ ಆಧಾರದ ಮೇಲೆ ೬–೧೨ ವಾರಗಳವರೆಗೆ ಚಿಕಿತ್ಸೆ ನೀಡಲಾಗುವುದು. ನಂತರ ಕೊಟ್ರಾಮ್ಯಾಕ್ಸೊಜೋಲ್ ಔಷಧಿಯನ್ನು ೧೮ ತಿಂಗಳವರೆಗೆ ನೀಡಬೇಕು. ೬ ವಾರಕ್ಕೆ ಒಮ್ಮೆ, ೬–೧೨–೧೮ ತಿಂಗಳಲ್ಲಿ ಮಗುವಿಗೆ ಹೆಚ್ ಐ ವಿ ಸೋಂಕಿನ ಪರೀಕ್ಷೆಯನ್ನು ಮಾಡಿಸಬೇಕು. ೧೮ ತಿಂಗಳವರೆಗೆ ಮಗುವಿಗೆ ಸೋಂಕು ಧೃಡಪಡದಿದ್ದರೆ ಮಗುವನ್ನು ಸೋಂಕುರಹಿತ ಎಂದು ಘೋಷಿಸಲಾಗುವುದು. ಸೋಂಕು ಪತ್ತೆಯಾದಲ್ಲಿ ಚಿಕಿತ್ಸೆ ಆರಂಭಿಸಬೇಕು. ಒಮ್ಮೆ ಸೋಂಕು ಧೃಡಪಟ್ಟಲ್ಲಿ ಆಜೀವ ಚಿಕಿತ್ಸೆ ನೀಡಬೇಕು.

**ಹಂತ–೭ ಸಿಫಿಲಿಸ್ ಗೆ ತೆರೆದುಕೊಂಡ ಶಿಶು ಮತ್ತು ಮಗುವಿನ ಪಾಲನೆ.**

ಸಿಫಿಲಿಸ್ ಸೋಂಕಿತ ತಾಯಿಗೆ ಜನಿಸಿದ ಮಗುವಿಗೆ ಜನನದಿಂದ ಬರುವ ಸಿಫಿಲಿಸ್ ಕಾಯಿಲೆ ಇದೆಯೇ ಅಥವಾ ಇಲ್ಲವೇ ಎಂದು ಧೃಡಪಡಿಸಲು ಮಗುವನ್ನು ಮಕ್ಕಳ ತಜ್ಞರಿಂದ ಪರೀಕ್ಷೆ ಮಾಡಿಸಿ, ನಂತರ ರಕ್ತ ಪರೀಕ್ಷೆಯನ್ನು ಮಾಡಿಸಿಬೇಕು. ಆಮೇಲೆ ೧೪ ವಾರಗಳಿಗೆ ಮತ್ತು ೬ ತಿಂಗಳಿಗೆ ಪರೀಕ್ಷೆ ಮಾಡಿಸಬೇಕು. ಒಂದು ವೇಳೆ ಚಿಕಿತ್ಸೆ ಫಲಿಸದಿದ್ದಲ್ಲಿ ೬ ತಿಂಗಳ ನಂತರವೂ ಚಿಕಿತ್ಸೆ ಮುಂದುವರೆಸಬೇಕು.

**ಇ ವಿ ಟಿ ಹೆಚ್ ಎಸ್ ನ ಗುರಿ:–**

**ನ್ಯಾಕೋದ ಗುರಿಗಳು:–**

೧) ೨೦೨೫ ರೊಳಗೆ ತಾಯಿಯಿಂದ ಮಗುವಿಗೆ ಈ ಎರಡೂ ಸೋಂಕುಗಳು ಹರಡುವುದನ್ನು ನಿಯಂತ್ರಿಸುವುದು.

೨) ಸೋಂಕಿನ ಅಪಾಯಕ್ಕೆ ಸಿಲುಕಬಹುದಾದ ಸಮುದಾಯಗಳಿಗೆ ಎಲ್ಲಾ ರೀತಿಯ ಗುಣಮಟ್ಟದ ಎಸ್ ಟಿ ಐ / ಆರ್ ಟಿ ಐ ಚಿಕಿತ್ಸೆಯು ಕಳಂಕರಹಿತವಾಗಿ ದೊರಕಬೇಕು.

**ಕರ್ನಾಟಕದ ಗುರಿಗಳು:–**

೧) ತಾಯಿಯಿಂದ ಮಗುವಿಗೆ ಮೂರು ಸೋಂಕುಗಳನ್ನು (ಹೆಚ್ ಐ ವಿ, ಸಿಫಿಲಿಸ್, ಮತ್ತು ಹೆಪಟೈಟಿಸ್–ಬಿ) ನಿವಾರಿಸುವುದು.

೨) ಸೋಂಕಿನ ಅಪಾಯಕ್ಕೆ ಸಿಲುಕಬಹುದಾದ ಸಮುದಾಯಗಳಿಗೆ ಮೂರು ರೀತಿಯ

**ಇ ವಿಟಿ ಹೆಚ್ ಎಸ್ ನ ಸೇವಾ ವಿತರಣಾ ಮಾದರಿ**

| ಪ್ರಾಥಮಿಕ ತಡೆಗಟ್ಟುವಿಕೆ | ಕುಟುಂಬ ನಿಯಂತ್ರಣ ಮತ್ತು ಗರ್ಭಧಾರಣೆಗೆ ಮುಂಚೆ ಸೋಂಕಿತ ಮಹಿಳೆಯ ಪಾಲನೆ | ಹೆಚ್ ಐ ವಿ ಮತ್ತು ಸಿಫಿಲಿಸ್ ಸೋಂಕಿತ ಗರ್ಭಿಣಿ ಹಾಲೂಡಿಸುವ ತಾಯಿ, ಪತಿ/ಪತ್ನಿ/ ಸಂಗಾತಿ ಮತ್ತು ಕುಟುಂಬಕ್ಕೆ ಸಹಕಾರ | ಹೆಚ್ ಐ ವಿ ಮತ್ತು ಸಿಫಿಲಿಸ್ ಸೋಂಕಿಗೆ ತೆರೆದುಕೊಂಡ ಶಿಶು ಮತ್ತು ಮಕ್ಕಳ ಪಾಲನೆ |
|---|---|---|---|
| 1)ಹದಿಹರೆಯದವರಿಗೆ ಆರೋಗ್ಯ ಮಾಹಿತಿ ಮತ್ತು ಸೇವೆ 2)ಸೋಂಕಿನ ಅಪಾಯದಲ್ಲಿರುವ ಗುಂಪಿನ ಮಹಿಳೆಯರಿಗೆ, ಸೋಂಕು ರಹಿತ ಪತ್ನಿ/ ಸಂಗಾತಿಗೆ ಆರೋಗ್ಯ ಮಾಹಿತಿ ಮತ್ತು ಸೇವೆಗಳನ್ನು ನೀಡಿ ಸೋಂಕಿನಿಂದ ರಕ್ಷಿಸುವುದು. | 1)ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಕುಟುಂಬ ಯೋಜನೆಯ ಬಗ್ಗೆ ಆಪ್ತ ಸಮಾಲೋಚನೆ ಲಭ್ಯತೆ. 2) ಕುಟುಂಬ ನಿಯಂತ್ರಣ ವಿಧಾನಗಳ ಲಭ್ಯತೆ. | 1)ಎಲ್ಲಾ ಆರೋಗ್ಯ ಕೇಂದ್ರಗಳಲ್ಲಿ ಹೆಚ್ ಐ ವಿ ಲೈಂಗಿಕ ಸೋಂಕುಗಳ ಪರೀಕ್ಷೆ 2)ಸೋಂಕಿ ಅನುಮಾನ ಇರುವವರನ್ನು ಸೋಂಕು ಧೃಡಪಡಿಸಲು ಮತ್ತು ಚಿಕಿತ್ಸೆ ನೀಡಲು ಸೂಕ್ತ ಕೇಂದ್ರಗಳಿಗೆ ಕಳುಹಿಸುವುದು. | 1) ಹೆಚ್ ಐ ವಿ ಸೋಂಕಿಗೆ ತೆರೆದುಕೊಂಡ ಶಿಶುಗಳಿಗೆ ಹೆಚ್ ಐ ವಿ ಚಿಕಿತ್ಸಾ ಕೇಂದ್ರಗಳಲ್ಲಿ ಪಾಲನೆ ಮಾಡುವುದು. 2) ಸಿಫಿಲಿಸ್ ಸೋಂಕಿಗೆ ತೆರೆದುಕೊಂಡ ಶಿಶುಗಳನ್ನು ಮಕ್ಕಳ ತಜ್ಞರಿರುವ ಕೇಂದ್ರಗಳಲ್ಲಿ ಪಾಲನೆ ಮಾಡುವುದು. |

ಸೋಂಕುಗಳಿಗೆ ಚಿಕಿತ್ಸೆಯು ಕಳಂಕರಹಿತವಾಗಿ ದೊರಕಬೇಕು.

೩) ತಾಯಿಯಿಂದ ಮಗುವಿಗೆ ಸೋಂಕು ಹರಡುವ ಅಪಾಯದ ಸನ್ನಿವೇಶಗಳು.

**ಗರ್ಭಿಣಿ ಇರುವಾಗ**

೧) ಹೆಚ್ಚಾದ ವೈರಲ್ ಲೋಡ್

ಅ) ಇತ್ತೀಚಿನ ಸೋಂಕು

ಆ) ಗರ್ಭಿಣಿ ಅಗಿರುವಾಗ ಸೋಂಕಿನ ಪತ್ತೆ.

ಇ) ಮುಂದುವರೆದ ಹೆಚ್ ಐ ವಿ ಕಾಯಿಲೆ.

ಈ) ಮಾಸಿನ ಸೋಂಕು.

ಉ) ಇತರೆ ಲೈಂಗಿಕ ಸೋಂಕುಗಳು.

೨) ಅಪೌಷ್ಟಿಕತೆ

೩) ಅಪಧಮನಿಗಳಿಂದ ಮಾದಕ ವಸ್ತು ಸೇವನೆಯ ವ್ಯಸನ.

೪)ಗರ್ಭದ ಪದರಗಳ ಸೋಂಕು.

**ಹೆರಿಗೆಯ ಸಂದರ್ಭದಲ್ಲಿ**

೧) ಹೆಚ್ಚಾದ ವೈರಲ್ ಲೋಡ್

೨) ನಾಲ್ಕು ಗಂಟೆಗೂ ಹೆಚ್ಚು ಕಾಲ ಗರ್ಭ ಪೊರೆ ಹರಿದಿರುವುದು.

೩) ಹೆರಿಗೆ ಸಮಯದ ಹೆಚ್ಚಿನ ರಕ್ತಸ್ರಾವ.

೪) ಹೆರಿಗೆ ಶೀಘ್ರ ಗೊಳಿಸುವ ವಿಧಾನಗಳು.

ಅ) ಅಂತರ್ ಗರ್ಭದ ಹೆಚ್ಚಿನ ನಿಗಾವಹಿಸುವಿಕೆ

ಆ) ಕೃತಕವಾಗಿ ಗರ್ಭ ಪೊರೆ ಹರಿಯುವಿಕೆ.

ಇ) ಯೋನಿ ಗೋಡೆ ಛೇದನ (ಎಪಿಸಿಯಾಟಮಿ).

ಈ) ಲೋಹದ ನಿರ್ವಾತ ಬಟ್ಟಲಿನ ಬಳಕೆ (ವ್ಯಾಕ್ಯೂಮ್ ಮೆಟಲ್ ಕಪ್ಸ್)

ಉ) ಇಕ್ಕಳ ಹೆರಿಗೆ (ಫೋರ್ ಸೆಪ್ಸ್)

**ಹಾಲೂಡಿಸುವಾಗ**

೧) ಹೆಚ್ಚಾದ ವೈರಲ್ ಲೋಡ್

೨) ಮೊಲೆಯ ಕಾಯಿಲೆಗಳು.

   ಅ) ಬಿರುಕುಬಿಟ್ಟ ಮೊಲೆತೊಟ್ಟು.

   ಆ) ಮೊಲೆಯೂತ.

   ಇ) ಕೀವುಗಡ್ಡೆ

೩) ತಾಯಿಯ ಅಪೌಷ್ಟಿಕತೆ

**ಇ ವಿ ಟಿ ಹೆಚ್ ಎಸ್ ಸಾಧ್ಯವಾಗಬೇಕಾದರೆ**

೧) ಎಲ್ಲಾ ಗರ್ಭಿಣಿಯರನ್ನು ಮೊದಲ ೩ ತಿಂಗಳಲ್ಲಿ ಹೆಚ್ ಐ ವಿ ಮತ್ತು ಸಿಫಿಲಿಸ್ ಪರೀಕ್ಷೆಗೆ ಒಳಪಡಿಸಬೇಕು.

೨) ಸೋಂಕನ್ನು ದೃಡಪಡಿಸಲು ಐ ಸಿ ಟಿ ಸಿ ಮತ್ತು ಡಿ ಎಸ್ ಆರ್ ಸಿ ಕೇಂದ್ರಗಳಿಗೆ ಕಳಿಸಬೇಕು.

೩) ಹೆಚ್ ಐ ವಿ ಸೋಂಕು ದೃಡಪಟ್ಟ ಗರ್ಭಿಣಿಯರಿಗೆ ತಕ್ಷಣ ಎ ಆರ್ ಟಿ ಚಿಕಿತ್ಸೆ ಆರಂಭಿಸಬೇಕು, ಸಿಫಿಲಿಸ್ ಇದ್ದರೆ ಬಿ ಪಿ ಜಿ ಚುಚ್ಚು ಮದ್ದನ್ನು ನೀಡಬೇಕು.

೪) ಎ ಆರ್ ಟಿ ಚಿಕಿತ್ಸೆಯನ್ನು ಮುಂದುವರಸಿ ೩೨–೩೬ ವಾರಗಳಲ್ಲಿ ವೈರಲ್ ಲೋಡ್ ಪರೀಕ್ಷೆ ಮಾಡಿಸಬೇಕು, ಡಿ ಎಸ್ ಆರ್ ಸಿ ಯಲ್ಲಿ ಸಿಫಿಲಿಸ್ ಟೈಟರ್ ಪರೀಕ್ಷಿಸಬೇಕು.

೫) ನಿಯೋಜಿತ ಕೇಂದ್ರಗಳಲ್ಲಿ ಮಾತ್ರ ಹೆರಿಗೆ ಮಾಡಿಸಬೇಕು.

೬) ಹೆಚ್ ಐ ವಿ ಸೋಂಕಿಗೆ ತೆರೆದುಕೊಂಡ ಶಿಶುವಿಗೆ ಮುಂಜಾಗ್ರತಾ ಚಿಕಿತ್ಸೆ, ಸಿಫಿಲಿಸ್ ಗೆ ತೆರೆದುಕೊಂಡ ಶಿಶುವಿಗೆ ಪೆನ್ಸಿಲಿನ್ ಚಿಕಿತ್ಸೆ ನೀಡಬೇಕು.

೭) ಎದೆ ಹಾಲು ಮಾತ್ರ ನೀಡಲು ಪ್ರೋತ್ಸಾಹಿಸಬೇಕು.

೮) ಶಿಶುವಿಗೆ ೬ ವಾರ, ೬ ತಿಂಗಳು, ೧೨ ತಿಂಗಳು, ೧೮ ತಿಂಗಳಿಗೆ ಹೆಚ್ ಐ ವಿ ಪರೀಕ್ಷೆ ಮಾಡಿಸಬೇಕು, ೧೪ ವಾರ ಮತ್ತು ೬ ತಿಂಗಳಿಗೆ ಸಿಫಿಲಿಸ್ ಪರೀಕ್ಷೆ ಮಾಡಿಸಬೇಕು.

೯) ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಎಲ್ಲಾ ಲಸಿಕೆಗಳನ್ನು ಶಿಶುವಿಗೆ ನೀಡಬೇಕು.



**ಸಮಾರೋಪಣೆ**

೧) ಎನ್ ಎ ಸಿ ಪಿ ಯ ೫ ಉನ್ನತ ಗುರಿಗಳಲ್ಲಿ ಇ ವಿ ಟಿ ಹೆಚ್ ಎಸ್ ನ್ನು ಸೇರಿಸಿರುವುದರಿಂದ ಆರೋಗ್ಯ ರಕ್ಷಣಾ ಕಾರ್ಯಕ್ರಮದಲ್ಲಿ ಇದು ಮುನ್ನೆಲೆಗೆ ಬಂದಿದೆ.

೨) ಕಳೆದ ಕೆಲ ವರ್ಷಗಳಿಂದ ಗರ್ಭಿಣಿಯರನ್ನು ಹೆಚ್ ಐ ವಿ ಪರೀಕ್ಷೆಗೆ ಒಳಪಡಿಸಿರುವದರಿಂದ ಇ ವಿ ಟಿ ಹೆಚ್ ಎಸ್ ಬರೀ ಮಾತಿಗಲ್ಲ, ಸಾಧಿಸಬಹುದು ಎಂದು ಮನವರಿಕೆಯಾಗಿದೆ.

೩) ಎಲ್ಲಾ ಆರೋಗ್ಯ ವಿಭಾಗಗಳನ್ನು ಒಳಗೊಂಡಂತೆ ಕಾರ್ಯಕ್ರಮ ರೂಪಿಸಿರುವದರಿಂದ ಉತ್ತಮ ಫಲಿತಾಂಶ ದೊರೆಯುತ್ತಿದೆ.

೪) ಹೆಚ್ಚಿದ ಪರೀಕ್ಷೆಗಳು ಪುನರ್ ರಚಿತ ಕಾರ್ಯಕ್ರಮ ಅನುಷ್ಠಾನ, ಉನ್ನತ ತಂತ್ರ ವಿಧಾನಗಳ ಬಳಕೆಯಿಂದ ಫಲಾನುಭವಿ ಕೇಂದ್ರಿತ ಸೇವೆಗಳನ್ನು ಹೆಚ್ ಐ ವಿ ಮತ್ತು ಸಿಫಿಲಿಸ್ ಸೋಂಕಿತ ಗರ್ಭಿಣಿ, ಹಾಲೂಡಿಸುವ ತಾಯಂದಿರು ಮತ್ತು ಶಿಶುಗಳ ಪಾಲನೆಯು ಈ ಸೋಂಕುಗಳನ್ನು ನಿರ್ಮೂಲನೆ ಮಾಡಲು ಬಹು ಉಪಯುಕ್ತ ಪರಿಕರಗಳಾಗಿವೆ.

ಸಂಪೂರ್ಣವಾಗಿ ಹೆಚ್.ಐ.ವಿ. ಮತ್ತು ಸಿಫಿಲಿಸ್‌ನ್ನು ತಾಯಿಯಿಂದ ಮಗುವಿಗೆ ಬರದಂತೆ ತಡೆಯಲು ಸಾಧ್ಯವೇ? ಇದನ್ನು ಕೇವಲ ಭಾರತದಲ್ಲಿ ಮಾತ್ರ ಪ್ರಯತ್ನಿಸುತ್ತಿದ್ದಾರೆಯೇ? ಬೇರೆ ಯಾವುದಾದರೂ ದೇಶಗಳು ಇದನ್ನು ಸಾಧಿಸಿವೆಯೇ ಎಂಬ ಅನುಮಾನಗಳು ಮೂಡುವುದು ಸಹಜ. ಇದಕ್ಕೆ ಉತ್ತರ ಇದು ಸಾಧ್ಯ. ಹೆಚ್ಚು ಜನಸಂಖ್ಯೆ ಮತ್ತು ಸೋಂಕಿತರು ಇರುವ ಕಾರಣ ಇದು ನಮಗೆ ಹೊಸದು.

ತಾಯಿಯಿಂದ ಮಗುವಿಗೆ ಹೆಚ್.ಐ.ವಿ. ಸೋಂಕು ಪ್ರಸರಣವನ್ನು ನಿರ್ಮೂಲನೆ ಮಾಡಿದ ದೇಶಗಳ ವಿವರ.

೧) ಕ್ಯೂಬಾ ದೇಶವು ೨೦೧೫ ರಲ್ಲಿ ಮೊತ್ತ ಮೊದಲ ಬಾರಿಗೆ ಇದನ್ನು ಸಾಧಿಸಿತು.

೨) ಥೈಲಾಂಡ್, ಬೆಲಾರಸ್, ಅರ್ಮೇನಿಯಾ, ಆಂಗ್ವಿಲಾ, ಕೇಮಾನ್ ಐಲ್ಯಾಂಡ್, ಬರ್ಮುಡಾ, ಆಂಟಿಗುವಾ, ಸೇಂಟ್ ಕೀಟ್ಸ್, ಮಲೇಷಿಯಾ, ಮಾಲ್ಡೀವ್ಸ್, ಶ್ರೀಲಂಕಾ ಮತ್ತು ಡೊಮೆನಿಕ್ ಗಣರಾಜ್ಯಗಳು ಸಾಧಿಸಿವೆ.

೩) ಬೊಟ್ಸ್ವಾನಾದಲ್ಲಿ ಮಕ್ಕಳು ಹೆರುವ ವಯಸ್ಸಿನ ಹೆಂಗಸರಲ್ಲಿ ಅತೀ ಹೆಚ್ಚು ಹೆಚ್.ಐ.ವಿ. ಸೋಂಕಿತರು ಇದ್ದರೂ ತಾಯಿಯಿಂದ ಮಗುವಿಗೆ ಹರಡುವ ಸೋಂಕು ನಿವಾರಣಾ ಪ್ರಯತ್ನಕ್ಕಾಗಿ ಬೆಳ್ಳಿ ಪದರದ ಸ್ಥಾನವನ್ನು ನೀಡಲಾಗಿದೆ. ೨೦೨೦ ರಲ್ಲಿ ಎಲ್ಲಾ ಸೋಂಕಿತ ಗರ್ಭಿಣಿಯರು ಏ ಆರ್ ಟಿ ಚಿಕಿತ್ಸೆ ಪಡೆಯುತ್ತಿದ್ದರು. ತಾಯಿಯಿಂದ ಮಗುವಿಗೆ ಹರಡುವ ಸೋಂಕು ಶೇಕಡ ೯.೨ರಿಂದ ಶೇಕಡ ೧.೬ಕ್ಕೆ ಕುಸಿಯಿತು.

೪) ಬೇರೆ ಬೇರೆ ದೇಶಗಳು ಸೋಂಕು ನಿವಾರಣೆಯ ವಿವಿಧ ಹಂತಗಳಲ್ಲಿದ್ದು ಅದನ್ನು ಗುರುತಿಸಲು ಅರ್ಜಿ ಗುಜರಾಯಿಸುತ್ತಿವೆ.

೫) ಮಾಲವಿ ಮತ್ತು ಮೊಜಾಂಬಿಕ್ ದೇಶಗಳು ಎಲ್ಲಿ ಗರ್ಭಿಣಿಯವರಿಗೆ ಏ ಆರ್ ಟಿ ಚಿಕಿತ್ಸೆ ದೊರೆಯುವಂತೆ ಮಾಡಿದ್ದು ತಾಯಿಯಿಂದ ಮಗುವಿಗೆ ಹರಡುವ ಸೋಂಕು ಕಡಿಮೆಯಾಗಿದೆ.

| ವರ್ಷ | ಸೋಂಕಿತ ಗರ್ಭಿಣಿಯರ ಸಂಖ್ಯೆ |
|---|---|
| ೨೦೧೭-೧೮ | ೧೪,೩೪೨ |
| ೨೦೧೮-೧೯ | ೧೫,೧೦೬ |
| ೨೦೧೯-೨೦ | ೧೫,೧೧೨ |
| ೨೦೨೦-೨೧ | ೧೧,೭೪೪ |
| ೨೦೨೧-೨೨ | ೧೩,೭೯೯ |
| ೨೦೨೨-೨೩ | ೧೬,೯೨೭ |

ಭಾರತದಲ್ಲಿ ಸೋಂಕಿತ ಗರ್ಭಿಣಿಯರ ಸಂಖ್ಯೆ ಕಡಿಮೆಯಾಗುತ್ತಿಲ್ಲ. ಪ್ರತಿ ಗರ್ಭ ಧಾರಣೆಯಲ್ಲೂ ೩ ತಿಂಗಳಿಗೆ ಹೆಚ್.ಐ.ವಿ. ಪರೀಕ್ಷೆಯನ್ನು ಐ ಸಿ ಟಿ ಸಿ ಯಲ್ಲೇ ಮಾಡಿಸಬೇಕು. ಸೋಂಕು ಇದ್ದಲ್ಲಿ ತಕ್ಷಣ ಚಿಕಿತ್ಸೆ ಆರಂಭಿಸಿ ಮಗುವಿಗೆ ಸೋಂಕು ತಗಲದಂತೆ ನೋಡಿಕೊಳ್ಳಬೇಕು.

೨೦೧೬ ರಲ್ಲಿ ಭಾರತದಲ್ಲಿ ೧,೬೦,೦೦೦ ಸೋಂಕಿತ ಮಕ್ಕಳಿದ್ದರು, ೨೦೨೧ ರ ಹೊತ್ತಿಗೆ ಅವರ ಸಂಖ್ಯೆಯು ೬೮,೦೦೦ ಕ್ಕೆ ಇಳಿದಿದೆ. ಕರ್ನಾಟಕ ದಲ್ಲಿ ಸದ್ಯಕ್ಕೆ ೧,೭೦೭ ಸೋಂಕಿತ ಮಕ್ಕಳಿದ್ದಾರೆ.

ಬಡತನ, ಅನಕ್ಷರತೆ, ಕುಪೌಷ್ಟಿಕತೆ ಮೂಢನಂಬಿಕೆಗಳು, ಅಜ್ಞಾನ, ಔದ್ಯೋಗಿಕರಣ ಮತ್ತು ಇತರ ಸಾಮಾಜಿಕ ಕಾರಣಗಳಿಂದಾಗಿ ಸೋಂಕು ಇನ್ನೂ ಹರಡುತ್ತಲೇ ಇದೆ. ಚಿಕಿತ್ಸೆಗೆ ಒಳಪಡದವರ ಸಂಖ್ಯೆಯೂ ಹೆಚ್ಚಾಗಿದೆ.

ಸೋಂಕು ರಹಿತ ಆರೋಗ್ಯವಂತ ಸಮಾಜವನ್ನು ಕಟ್ಟುವುದು ನಮ್ಮೆಲ್ಲರ ಹೊಣೆ. ಇದು ಅಸಾಧ್ಯವೇನಲ್ಲ. ಶ್ರಮವಹಿಸಿದಲ್ಲಿ ಇದನ್ನು ಸಾಧಿಸಬಹುದು. ಬನ್ನಿ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿರುವವರೊಂದಿಗೆ ನಾವೂ ಕೈ ಜೋಡಿಸೋಣ ಆರೋಗ್ಯವಂತ ಸಮಾಜ ನಿರ್ಮಾಣ ಮಾಡೋಣ.



**ಡಾ. ವೀಣಾ ಎಸ್ ಭಟ್**
ವಿಭಾಗೀಯ ಸಂಪಾದಕರು ಮತ್ತು ಲೇಖಕರು

## ಅಧ್ಯಾತ್ಮ ಆರೋಗ್ಯ

# ಯೌಗಿಕ ಜೀವನ ಶೈಲಿ

ಎಲ್ಲರಿಗೂ ನಮಸ್ಕಾರ. ಮತ್ತೊಮ್ಮೆ ಯೋಗ ದಿನಾಚರಣೆಯ ಸಂಭ್ರಮದ ಗುಂಗಿನಲ್ಲಿದ್ದೇವೆ. ಎಲ್ಲೆಡೆ ಯೋಗ ಶಿಬಿರಗಳು ಕೆಲವು ಆನ್‌ಲೈನ್, ಕೆಲವು ಆಫ್‌ಲೈನ್, ಹಲವಾರು ಪ್ರಾತ್ಯಕ್ಷಿಕೆಗಳು, ಭಾಷಣ, ಘೋಷಣೆಗಳು ಒಂದೇ ಎರಡೇ ನೂರಾರು ಕಾರ್ಯಕ್ರಮಗಳ ಸುರಿಮಳೆ. ಆದರೆ ಯೋಗ ಪ್ರದರ್ಶನಕ್ಕಲ್ಲ, ನಿದರ್ಶನಕ್ಕಾಗಿ. ಉಪದೇಶಕ್ಕಲ್ಲ, ಅನುಷ್ಠಾನಕ್ಕಾಗಿ. ಬಹಿರಂಗಕ್ಕಷ್ಟೇ ಅಲ್ಲ, ಅಂತರಂಗಕ್ಕಾಗಿ ಎಂಬುದು ನಿತ್ಯ ಸತ್ಯ. ಯೋಗ ಎಂದರೆ ಅನುಭವಿಸುವಿಕೆ.


ಆರೋಗ್ಯ ಕ್ಷೇತ್ರದಲ್ಲಿ ನಮಗೆ ಇಂದಿನ ಅಗತ್ಯತೆ ಏನು? ನಾವಿಂದು ವೈದ್ಯಕೀಯವಾಗಿ, ವೈಜ್ಞಾನಿಕವಾಗಿ ಸಾಕಷ್ಟು ಸಾಧನೆ ಮಾಡಿ, ಸಾಂಕ್ರಾಮಿಕಗಳನ್ನು ಜಯಿಸುತ್ತ ಜೀವಿತಾವಧಿಯನ್ನು ಹೆಚ್ಚಿಸಿಕೊಳ್ಳುತ್ತಿದ್ದೇವೆ ಎಂದು ಹೆಮ್ಮೆಯಿಂದ ಬೀಗುತ್ತಿರುವಾಗಲೇ ಧುತ್ತೆಂದು ವಕ್ಕರಿಸಿದ ಕೋವಿಡ್‌ನಂತಹ ಸಾಂಕ್ರಾಮಿಕ ನಮ್ಮೆಲ್ಲರ ಜಂಘಾಬಲವನ್ನೇ ಉಡುಗಿಸಿದ್ದು ಇನ್ನೂ ಜನಮನದಲ್ಲಿ ಹಸಿರಾಗಿಯೇ ಇದೆ. ನಮ್ಮ ತಪ್ಪು ಜೀವನಶೈಲಿಯಿಂದ ಇಂದು ಮಧುಮೇಹ, ಹೃದ್ರೋಗ, ಏರುರಕ್ತದೊತ್ತಡ, ಬೊಜ್ಜು, ಕ್ಯಾನ್ಸರ್‌ನಂತಹ ದೀರ್ಘಾವಧಿ ಆರೋಗ್ಯ ಸಮಸ್ಯೆಗಳು ದಿನೇ ದಿನೇ ಹೆಚ್ಚುತ್ತಿದೆ. ಇವುಗಳಿಗೆ ಬದಲಿಸಲು ಸಾಧ್ಯವಾಗದ ಅನುವಂಶೀಯತೆ ಮತ್ತು ಬದಲಾಯಿಸಬಲ್ಲ ಜೀವನಶೈಲಿ ಎರಡೂ ಕಾರಣಗಳಿವೆ. ಜೀವನಶೈಲಿ ಎಂದರೆ ನಮ್ಮ ಆಹಾರ ಕ್ರಮ, ತೊಡಗಿಕೊಳ್ಳುವ ವ್ಯಾಯಾಮ, ನಮ್ಮ ಕೆಟ್ಟ ಒಳ್ಳೆಯ ನಡತೆಗಳು, ಭಾವೋದ್ವೇಗಗಳ ನಿರ್ವಹಣೆ ಎಲ್ಲವನ್ನೂ ಒಳಗೊಂಡಿರುತ್ತದೆ.

ಉತ್ತಮ ಜೀವನ ಶೈಲಿಯನ್ನು ಅನುಸರಿಸಲು ಮನಸ್ಸಿನ ಮೇಲೆ ಪ್ರಭುತ್ವ ಸಾಧಿಸುವುದೇ ಬಹಳ ಮುಖ್ಯ. ಇದಕ್ಕಾಗಿ ಒತ್ತಡಗಳು, ಭಾವೋದ್ವೇಗಗಳ ನಿರ್ವಹಣೆಗೆ ಯೋಗಿಕ ಜೀವನ ಶೈಲಿ ಅನುಸರಿಸಿದರೆ ಸಾಧ್ಯವಾಗುತ್ತದೆ. ಅದಕ್ಕೂ ಮೊದಲು ಯೋಗಿಕ ರೀತಿಯಲ್ಲಿ ನಮ್ಮ ಶರೀರವನ್ನು ಏನೆಂದು ನಾವು ಅರ್ಥೈಸಿಕೊಳ್ಳಬೇಕು.

ನಮ್ಮದು ಕೇವಲ ಹೊರಗೆ ಕಾಣುವ ಭೌತಿಕ ಶರೀರವಷ್ಟೇ ಅಲ್ಲ. ಅದು ಐದು ಅಂಶಗಳನ್ನು ಒಳಗೊಂಡಿದೆ. ಅನ್ನಮಯ ಕೋಶ, ಪ್ರಾಣಮಯ ಕೋಶ, ಮನೋಮಯಕೋಶ, ವಿಜ್ಞಾನಮಯ ಕೋಶ ಹಾಗೂ ಆನಂದಮಯ ಕೋಶಗಳೆಂಬ ಪಂಚಕೋಶಗಳಿಂದ ಈ ಶರೀರ ಉಂಟಾಗಿದೆ.

ಅನ್ನಮಯ ಕೋಶ ಎಂದರೆ ಪಂಚಭೂತಾತ್ಮಕ, ಸಪ್ತಧಾತಾತ್ಮಕ, ತ್ರಿದೋಷಾತ್ಮಕ, ಸ್ಥೂಲದೃಶ್ಯದ ಅಸ್ತಿತ್ವವಿರುವಂತದ್ದು. ಅಂದರೆ ನಮಗೆ ಹೊರಗೆ ಕಾಣುವ ಬಾಹ್ಯಶರೀರ, ಮೂಳೆ-ಮಾಂಸಗಳ ಆಕೃತಿ, ಜೀವಕಣಗಳು, ಮಾಂಸ ಖಂಡಗಳು, ಸ್ನಾಯು ಅಂಗಾಂಶಗಳು, ಶಾರೀರಿಕ ರಾಸಾಯನಿಕಗಳು, ಹಾರ್ಮೋನು, ನರವ್ಯೂಹ ವ್ಯವಸ್ಥೆ ಇವೆಲ್ಲವನ್ನೂ ಒಳಗೊಂಡಿರುತ್ತದೆ. ಅನ್ನ ಮಯಕೋಶವನ್ನು ಪೌಷ್ಟಿಕ ಆಹಾರ ವ್ಯಾಯಾಮ ಇತ್ಯಾದಿಗಳಿಂದ ಸುಸ್ಥಿತಿಯಲ್ಲಿಡಬಹುದು.

ಪ್ರಾಣಮಯ ಕೋಶ ಎಂದರೆ, ನಮ್ಮ ಪ್ರಾಣಶಕ್ತಿ. ಪ್ರಾಣ, ಅಪಾನ, ಸಮಾನ, ಉದಾನ, ವ್ಯಾನ ಎಂಬ ಪ್ರಂಚಪ್ರಾಣಗಳನ್ನು ಮತ್ತು ಉಪಪ್ರಾಣಗಳನ್ನು ಒಳಗೊಂಡಿದೆ. ನಮ್ಮ ದೇಹದ ಪ್ರತಿಯೊಂದು ಜೀವ




ಕಣವೂ ಸ್ವಸ್ಥವಾಗಿರಲು ಬೇಕಾದ ಪ್ರಾಣಶಕ್ತಿಯನ್ನು ಒದಗಿಸುತ್ತದೆ. ಶ್ವಾಸಕೋಶದಿಂದಾಗಿ ಎಲ್ಲೆಡೆ ಈ ಪ್ರಾಣ ಶಕ್ತಿಯು ಪ್ರವಹಿಸುತ್ತದೆ. ಇದನ್ನು ಸೂಕ್ತ ಕ್ರಮಬದ್ಧ ಆಸನಗಳಿಂದ, ಉಸಿರಾಟ ಕ್ರಮಗಳಿಂದ ನಿಯಂತ್ರಿಸಬಹುದು.

ಮನೋಮಯ ಕೋಶ ಎಂದರೆ ಮನಸ್ಸು ಅಹಂಕಾರ ಹಾಗೂ ಐದು ಕರ್ಮೇಂದ್ರಿಯಗಳನ್ನು ಸೇರಿ ಏಳು ತತ್ವಗಳನ್ನು ಒಳಗೊಂಡ ಸಮುದಾಯವಾಗಿದೆ. ಮನಸ್ಸು ಸದಾ ಏನನ್ನಾದರೂ ಬಯಸುತ್ತಾ ಇದ್ದು, ಇಂತಹ ಬೇಡಿಕೆಗಳಿಂದಲೇ ನಮ್ಮ ಮನೋಮಯ ಕೋಶ ಬದಲಾಯಿಸುತ್ತಿರುತ್ತದೆ, ಈ ಮನೋಮಯ ಕೋಶವನ್ನು ಭಕ್ತಿ, ಧ್ಯಾನ, ಸ್ವಾಧ್ಯಾಯ, ಸತ್ಸಂಗ ಇತ್ಯಾದಿಗಳಿಂದ ಸುಸ್ಥಿತಿಯಲ್ಲಿ ಇಡಬಹುದು.

ವಿಜ್ಞಾನಮಯ ಕೋಶ ಅಂದರೆ, ನಮ್ಮ ವಿವೇಚನಾ ಶಕ್ತಿ. ಬುದ್ಧಿ, ಚಿತ್ತ ಹಾಗೂ ಐದು ಜ್ಞಾನೇಂದ್ರಿಯಗಳು. ಈ ಏಳು ತತ್ವಗಳ ಸಮುದಾಯವೇ ವಿಜ್ಞಾನಮಯ ಕೋಶ. ಇದು ನಾವು ಸದಾ ಯೋಚಿಸಿ ವಿವೇಕದಿಂದ ನಡೆಯುವ ಹಾಗೆ ಮಾಡುವಂತದ್ದು. ಇದು ಮನೋಮಯ ಕೋಶದ ಜೊತೆಗೆ ತಿಕ್ಕಾಟ ನಡೆಸುತ್ತಿರುತ್ತದೆ. ಅಧ್ಯಯನ, ಅನುಭವ, ಸಕಾರಾತ್ಮಕ ಚಿಂತನೆಗಳು ಮತ್ತು ಸತ್ಸಂಗ ಇತ್ಯಾದಿಗಳಿಂದ ಈ ಕೋಶವನ್ನು ಸುಸ್ಥಿತಿಯಲ್ಲಿಡಬಹುದು.

ಆನಂದಮಯ ಕೋಶ ಅಂದರೆ ಯಾವುದರಲ್ಲಿ ಜ್ಯೋತಿರ್ಮಯ, ತೇಜೋಮಯ, ಶಾಂತಿಮಯ, ಆತ್ಮದ ಅನುಭವವಾಗುವುದು ಇದೆ ಸತ್ವಗುಣಮಯವಾದ ಕಾರಣರೂಪಿ ಪ್ರಕೃತಿ. ಇದೇ ಆನಂದಮಯ ಕೋಶ, ಅಂದರೆ ಯಾವುದೇ ಕ್ಲೇಶವಿಲ್ಲದ, ಶುದ್ಧ ಜ್ಞಾನದ ಅರಿವಿನಲ್ಲಿರುವುದು. ಈ ಸ್ಥಿತಿಯಲ್ಲಿ ಯಾವುದೇ ಕಾಯಿಲೆಯ ಅನುಭವವಾಗುವುದಿಲ್ಲ. ಯಾವುದೇ ನೋವು ಯಾತನೆಗಳಿಲ್ಲದ ಆರೋಗ್ಯದ ಸುಸ್ಥಿತಿ.

ಜೀವನಶೈಲಿ ಸಮಸ್ಯೆಗಳಿಂದ ಅನಾರೋಗ್ಯ ಉಂಟಾಗಲು ಹಾಗೂ ಅದು ಪಂಚಕೋಶಗಳಿಂದಾದ ಈ ಶರೀರವನ್ನು ಅನಾರೋಗ್ಯದ ಸ್ಥಿತಿಗೆ ತಳ್ಳಲು ಕಾರಣವೇನು?

ಎಲ್ಲ ಸಮಸ್ಯೆಗಳಿಗೂ ಮನಸ್ಸೇ ಕಾರಣ ಎನ್ನುವ ಹಾಗೆ ನಮ್ಮ ಬೇಕು, ಬೇಡಗಳೆಲ್ಲ ಮನೋಮಯ ಕೋಶದಲ್ಲಿ ಉದ್ಭವವಾಗುತ್ತದೆ. ಉದಾಹರಣೆಗಾಗಿ ನಮಗೆ ಮಧುಮೇಹ ಬರಬಹುದೆಂಬ ಅನುವಂಶೀಯ ಕೌಟುಂಬಿಕ ಚರಿತ್ರೆ ಇದ್ದರೂ, ಮೊದಲನೇ ದಪ್ಪವಿದ್ದರೂ ಕುರುಕಲು ತಿಂಡಿ ಮತ್ತೆ ಮತ್ತೆ ತಿನ್ನಬೇಕೆನಿಸಬಹುದು. ಏರುರಕ್ತದೊತ್ತಡದ ಆತಂಕವಿದ್ದರೂ ಹೆಚ್ಚು ಉಪ್ಪಿನ ಅಂಶವುಳ್ಳ ತಿಂಡಿಯನ್ನು ತಿನ್ನಬೇಕೆನಿಸುತ್ತದೆ. ದಪ್ಪವಿದ್ದರೂ ಹೆಚ್ಚು ಹೆಚ್ಚು ಜಂಕ್‌ಫುಡ್


ಸೇವಿಸಬೇಕೆನಿಸುತ್ತದೆ. ಆದರೆ ನಮ್ಮ ವಿಜ್ಞಾನಮಯ ಕೋಶ ಅಂದರೆ ನಮ್ಮ ವಿವೇಚನಾ ಶಕ್ತಿ ಇದು ಬೇಡವೆಂದು ಸೂಚಿಸುತ್ತದೆ. ತಿನ್ನಬೇಕೆನ್ನುವ, ತಿನ್ನದೇ ಬಿಡಬೇಕೆನ್ನುವ ಭಾವೋದ್ವೇಗಗಳು ಪದೇ ಪದೇ ಬಂದು ಹೋಗುತ್ತವೆ. ಭಾವೋದ್ವೇಗದ ತೀವ್ರತೆಯಿಂದ ಮನಸ್ಸಿನಲ್ಲಿ ಉಂಟಾಗುವ ಆಸೆ ಬಿಡಲು ಮನಸ್ಸಾಗುವುದಿಲ್ಲ. ಮನಸ್ಸು ಬೇಕು ಅನ್ನೋದು, ವಿವೇಚನೆ ಬೇಡ ಅನ್ನುವುದು ಇದರಿಂದಾಗಿ ನೀವು ನಿಮ್ಮ ಅಪೇಕ್ಷೆಗಳನ್ನು ಒಮ್ಮೆ ಅದು. ಮಿಡುವುದು ಮತ್ತೊಮ್ಮೆ ವ್ಯಕ್ತಪಡಿಸುವುದು ಇಂತಹ ರೂಡಿ ಪ್ರತಿಕ್ರಿಯೆಯಲ್ಲಿ ಸಿಲುಕಿ ಬಿಡುವುದೇ ನಾವು ಮಾಡಿಕೊಳ್ಳುವ ಜೀವನ ಶೈಲಿಯಾಗಿ ಮಾರ್ಪಟ್ಟು ಎಲ್ಲ ಸಮಸ್ಯೆಗಳಿಗೂ ಈ ನಿಯಂತ್ರಣವಿಲ್ಲದ ಮನಸ್ಥಿತಿಯೇ ಕಾರಣವಾಗುತ್ತದೆ.

ಪದೇ ಪದೇ ಹೀಗೆ ಉಂಟಾಗುವ ಭಾವೋದ್ವೇಗಗಳು, ಒತ್ತಡಗಳೆಲ್ಲ ಮನೋಮಯ ಕೋಶದಿಂದ, ಪ್ರಾಣಮಯ ಕೋಶಕ್ಕೆ ಸೇರಿ ನಮ್ಮ ಉಸಿರಾಟದಲ್ಲಿ ಹಾಗೂ ಜೀರ್ಣಕ್ರಿಯೆಗಳಲ್ಲಿ ಸಮಸ್ಯೆಯನ್ನು ಉಂಟುಮಾಡುತ್ತದೆ. ಆರಂಭದಲ್ಲಿ ಆಯಾಸ ರೂಪದಲ್ಲಿ ಕಾಣಿಸಿಕೊಂಡ ಈ ಸಮಸ್ಯೆ ನಿಧಾನವಾಗಿ ಅನ್ನಮಯ ಕೋಶ ಅಂದರೆ ನಮ್ಮ ಭೌತಿಕ ಶರೀರಕ್ಕೆ ವ್ಯಾಪಿಸಿ ಜೀವಕೋಶಗಳ ಮಟ್ಟದಲ್ಲಿ ಉರಿಯೂತವನ್ನುಂಟು ಮಾಡಿ ಇದರಿಂದಾಗಿ ಇನ್ಸುಲಿನ್ ಪ್ರತಿರೋಧ ಇತ್ಯಾದಿಗಳು ಉಂಟಾಗಿ ದೀರ್ಘಾವಧಿ ಆರೋಗ್ಯ ಸಮಸ್ಯೆಗಳಾದ ಮಧುಮೇಹ, ಪಿ. ಸಿ. ಓ. ಎಸ್, ಬೊಜ್ಜು, ಏರು ರಕ್ತದೊತ್ತಡ, ಹೃದ್ರೋಗ ಇತ್ಯಾದಿ ಸಮಸ್ಯೆಗಳು ಉಂಟಾಗುತ್ತವೆ. ಒಟ್ಟಾರೆ ಮೂಲ ಸಮಸ್ಯೆ ಇರುವುದು ಮನೋಮಯ ಕೋಶದಲ್ಲಿಯೇ ಅಂದರೆ ಮನಸ್ಸಿನ ತಿಕ್ಕಾಟ ಭಾವೋದ್ವೇಗಗಳು ಒತ್ತಡವನ್ನುಂಟು ಮಾಡಿ ನಮ್ಮನ್ನು ಅನಾರೋಗ್ಯದ ಕಡೆಗೆ ತಳ್ಳುತ್ತವೆ. ಆದ್ದರಿಂದ ಸಮಸ್ಯೆಯ ಮೂಲವನ್ನು ಅರಿತು ಭಾವೋದ್ವೇಗಗಳನ್ನು ಹಿಡಿದಿಟ್ಟುಕೊಳ್ಳುವುದೇ ಸಮಸ್ಯೆಗೆ ಪರಿಹಾರ. ನಮ್ಮ ಶರೀರದಲ್ಲಿ ಆಗುತ್ತಿರುವ ದೀರ್ಘಾವಧಿ ಉರಿಯೂತವನ್ನು ಕಡಿಮೆ ಮಾಡುವುದಕ್ಕೆ ಜೀವನ ಶೈಲಿ ಸಂಬಂಧ ಕಾಯಿಲೆಗಳನ್ನು ಜಯಿಸಲು ಉತ್ತಮ ತಾಂತ್ರಿಕತೆಯನ್ನು ಯೋಗಿಕ ಜೀವನ ಶೈಲಿ ನಮಗೆ ತಿಳಿಸುತ್ತದೆ.

ಯೋಗಿಕ ಜೀವನ ಶೈಲಿ ಎಂದರೇನು? ನಮ್ಮ ಪಂಚಕೋಶದ ಮೇಲೆ ಪರಿಣಾಮ ಬೀರುವ ವಿಧಿ-ವಿಧಾನಗಳನ್ನು ೨೪ ಗಂಟೆಯಲ್ಲಿ ಅಳವಡಿಸಿಕೊಂಡು, ಇದನ್ನ ನಿರಂತರವಾಗಿ ಮುಂದುವರಿಸುವುದೇ ಯೋಗಿಕ ಜೀವನಶೈಲಿ.

ಮೊದಲನೆಯದಾಗಿ ನಮ್ಮ ಅನ್ನಮಯ ಕೋಶವನ್ನು ಸೂಕ್ತ ಆಹಾರ ಪದ್ಧತಿ ಹಾಗೂ ಪಥ್ಯೋಪಚಾರಗಳಿಂದ ಸರಿಪಡಿಸಿಕೊಳ್ಳುವುದು, ಸಾಧ್ಯವಾದಷ್ಟು ಮನೆಯಲ್ಲಿ ತಯಾರಿಸಿದ ತಾಜಾ ಪ್ರಕೃತಿದತ್ತ ಆಹಾರಗಳನ್ನು ಅಂದರೆ ಹಸಿರು ಸೊಪ್ಪು, ತರಕಾರಿ ಮೊಳಕೆ ಬರಿಸಿದ ಕಾಳುಗಳು, ಹೆಚ್ಚು ಹೆಚ್ಚು ನೀರಿನಾಂಶವುಳ್ಳ ಆಹಾರ ಸೇವನೆ ಇತ್ಯಾದಿಗಳನ್ನು ಮಾಡುವುದು ಶ್ರೇಷ್ಠ. ಇಂತಹ ಪೌಷ್ಟಿಕ ಆಹಾರವೇ ನಮ್ಮಲ್ಲಿ ಗ್ಲುಕೋಸ್ ಮಟ್ಟವನ್ನು ಸದಾ ಕಾಪಾಡಿ ಉತ್ಸಾಹದಿಂದಿರುವ ಹಾಗೆ ನೋಡಿಕೊಳ್ಳುವಂತದ್ದು. ಆಹಾರ, ನಿದ್ರೆ, ಭಯ, ಮೈಥುನಗಳು ಮನುಷ್ಯ ಹಾಗೂ ಪ್ರಾಣಿಗಳಿಬ್ಬರಿಗೂ ಮೂಲ ಅಗತ್ಯ. ಆದರೂ ಬೇಕು ಬೇಡಗಳ ವಿವೇಚನಾ ಶಕ್ತಿಯೇ ಮನುಷ್ಯನನ್ನ ಪ್ರಾಣಿಗಳಿಂದ ಬೇರ್ಪಡಿಸುತ್ತದೆ. ಹಾಗಾಗಿ ಮನುಷ್ಯನ ಆಹಾರ ಸೇವನೆ ಮನಸ್ಸಿನ ಮೇಲೂ ನಿರ್ಧಾರವಾಗಿದೆ. ಯಾಕೆಂದರೆ ಮನುಷ್ಯನಲ್ಲಿ ಮೇಲ್ಮಟ್ಟದ ಸಹಜ ಶಕ್ತಿಗಳಾದ ಅರಿವು ಮತ್ತು ಪ್ರಭುತ್ವ ವೃದ್ಧಿಯಾಗಿರುತ್ತದೆ. ಮನಸ್ಸು ತೃಪ್ತಿ, ಅತೃಪ್ತಿಯನ್ನು ತಿಳಿಯಲು ಮೆದುಳಿನ ಹಸಿವು ಮತ್ತು ತೃಪ್ತಿಯ ಕೇಂದ್ರಗಳನ್ನ ಬಳಸುತ್ತದೆ. ಈ ವ್ಯವಸ್ಥೆ ಆಸೆ, ಆಕಾಂಕ್ಷೆಗಳು, ಮನಸ್ಸಿನ ವ್ಯಾಕುಲತೆಗಳಿಂದ ಅಸ್ಥಿರಗೊಂಡಾಗ ಇದರಿಂದಾಗಿ ಆಹಾರ ಸೇವನೆಯೂ ವ್ಯತಿರಿಕ್ತವಾಗಿ, ಪಚನ ಕ್ರಿಯೆಯಲ್ಲೂ ವ್ಯತ್ಯಾಸಗಳಾಗಿ, ಶರೀರದಲ್ಲಿ ವಿಷ ವಸ್ತುಗಳು ಸಂಗ್ರಹವಾಗಿ, ಉರಿಯೂತಗಳನ್ನು ಉಂಟುಮಾಡುತ್ತದೆ. ಇದರಿಂದಾಗಿ ದೀರ್ಘಾವಧಿ ಆರೋಗ್ಯ ಸಮಸ್ಯೆಗಳು ಉಂಟಾಗುತ್ತವೆ.

ಯೋಗ್ಯ ಆಹಾರವನ್ನೇ ಸೇವಿಸಬೇಕೆಂಬ ವಿವೇಚನೆ ಅಥವಾ ನಿಯಂತ್ರಣ ಬರಲು ಯೋಗದ ಅಂಗಗಳಾದ ಯಮ, ನಿಯಮಗಳನ್ನು ಅನುಸರಿಸಿ ಆಸನಗಳನ್ನ ಪ್ರಾಣಾಯಾಮಗಳನ್ನು ಮಾಡುವುದರಿಂದ ಸಹಾಯವಾಗುತ್ತದೆ.



ಉತ್ತಮ ಶಾರೀರಿಕ ಕ್ರಿಯೆಗಳು ಅಂದರೆ ವ್ಯಾಯಾಮ, ವಾಕಿಂಗ್, ಸ್ವಿಮ್ಮಿಂಗ್ ಯಾವುದಾದರನ್ನು ಕ್ರಮಬದ್ಧವಾಗಿ ಮಾಡಿದಾಗ ಶಕ್ತಿಯು ವ್ಯಯವಾಗಿ ಬೊಜ್ಜು ಬರುವುದಿಲ್ಲ. ಶಿಥಿಲೀಕರಣ ಅಭ್ಯಾಸಗಳು ಅಂದರೆ ಶರೀರವನ್ನು ಸಡಿಲಗೊಳಿಸುವ ಮೂಲಭೂತ ಚಲನೆಗಳು. ಇವು ಶರೀರವನ್ನು ಸಡಿಲಗೊಳಿಸಿ ಉತ್ತಮ ಯೋಗಾಸನಗಳನ್ನು ಮಾಡಲು ನಮ್ಮನ್ನು ಸಜ್ಜುಗೊಳಿಸುತ್ತವೆ. ಸೂರ್ಯ ನಮಸ್ಕಾರದಲ್ಲಿ ಉಸಿರಿನ ಗತಿಯನ್ನು ಅನುಸರಿಸಿ ಆಸನಗಳನ್ನು ಮಾಡುವುದರಿಂದ ಒಂದು ಸುತ್ತು ಪೂರ್ಣ ಮಾಡಿದಾಗ ೧೩ ಕಿಲೋ ಕ್ಯಾಲರಿಯಷ್ಟು ದಹಿಸಲ್ಪಡುತ್ತದೆ. ಸೂರ್ಯದೇವರಿಗೆ ಶರಣಾಗತಿ ಭಾವದಲ್ಲಿ ಮಾಡಿದಾಗ ಮನಸ್ಸು ಮೃದು ಹಾಗೂ ಸೌಮ್ಯವಾಗುತ್ತದೆ. ಶರೀರ ದೃಢವಾಗುತ್ತದೆ. ಸರಿಯಾದ ಗುರುಗಳ ಮಾರ್ಗದರ್ಶನದಲ್ಲಿ ಯೋಗಾಸನಗಳನ್ನು ಕಲಿತು ಮಾಡುತ್ತಾ ಹೋದಾಗ "ಸ್ಥಿರಂ ಸುಖಂ ಆಸನಂ" ಎನ್ನುವ ಹಾಗೆ ಶರೀರಕ್ಕೆ ಆರಾಮದ ಅನುಭವವಾಗುತ್ತದೆ. ಜೀವಕೋಶಗಳ ಮಟ್ಟದಲ್ಲಿ ರಕ್ತ ಸರಬರಾಜು ಹೆಚ್ಚಿ ಅವು ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಮನಸ್ಸು ಪ್ರಸನ್ನವಾಗಿ ದ್ವಂದ್ವಗಳಿಂದ ಮುಕ್ತವಾಗುತ್ತದೆ. ಈ ಹಂತದಲ್ಲಿ ನಮ್ಮ ನರ ವ್ಯವಸ್ಥೆ, ಮಾಂಸ ಮೂಳೆಗಳ ವ್ಯವಸ್ಥೆ, ಅಂತಸ್ರಾವಕ ಗ್ರಂಥಿಗಳೆಲ್ಲ ಜಾಗ್ರತವಾಗಿ, ಪ್ರಜ್ಞಾಪೂರ್ವಕವಾಗಿ ಕಾರ್ಯನಿರ್ವಹಿಸುತ್ತವೆ. ಉರಿಯೂತ ಕಡಿಮೆಯಾಗುತ್ತದೆ. ದೈಹಿಕ ಸ್ವಾಸ್ಥ್ಯ ಹೆಚ್ಚಿ ಅನಾರೋಗ್ಯದಿಂದ ದೂರ ವಿರುತ್ತೇವೆ.

ಪ್ರಾಣಮಯ ಕೋಶ ನಮ್ಮ ಪ್ರಾಣಶಕ್ತಿ ನಮ್ಮ ಶರೀರದ ಎಲ್ಲಾ ಜೀವಕೋಶಗಳು ಉತ್ತಮ ಆಮ್ಲಜನಕ ಅಥವಾ ಪ್ರಾಣವಾಯು ದೊರೆತರೆ ಅತ್ಯುತ್ಕೃಷ್ಟ ರೀತಿಯಲ್ಲಿ ಜೀವ ಕ್ರಿಯೆಗಳು ನಡೆಯುತ್ತವೆ. ಆದರೆ ಒತ್ತಡ ಉದ್ವೇಗಗಳಲ್ಲಿ ಉಸಿರಾಟ ತೀವ್ರವಾಗಿ ಪ್ರಾಣಶಕ್ತಿಯು ಕುಂದುತ್ತದೆ. ಪ್ರಾಣಾಯಾಮ ಎಂದರೆ ಉಸಿರನ್ನು ನಿಧಾನವಾಗಿ ತೆಗೆದುಕೊಂಡು ನಿಧಾನವಾಗಿ ಹೊರ ಹಾಕುವುದು. ಉಸಿರಿನ ಗತಿಯನ್ನ ವಿಸ್ತರಿಸುತ್ತಾ, ಗತಿಯನ್ನ ನಿಧಾನಿಸುವುದರಿಂದ ಮನಸ್ಸನ್ನು ನಿಧಾನಗೊಳಿಸಿ, ಮನಸ್ಸಿನ ಮೇಲೆ ಪ್ರಭುತ್ವವನ್ನು ಸಾಧಿಸಬಹುದು. ತೀವ್ರಗತಿಯ ಉಸಿರಾಟ, ಅಂಗಾಂಗಗಳನ್ನು ಬಿಡಿಬಿಡಿಯಾಗಿ ಉಪಯೋಗಿಸಿ ಮಾಡುವ ಶ್ವಸನಕ್ರಿಯೆ, ಒಂದೇ ಮೂಗಿನ ಹೊಳ್ಳೆಯ ಉಸಿರಾಟ, ಒಂದರ ನಂತರ ಇನ್ನೊಂದು ಮೂಗಿನ ಹೊಳ್ಳೆಗಳನ್ನು ಉಪಯೋಗಿಸಿ ಉಸಿರಾಡುವುದು, ಕುಂಭಕ ಅಥವಾ ಉಸಿರು ಹಿಡಿಯದೆಯೇ ಮಾಡುವ ಕ್ರಿಯೆ ಹೀಗೆ ವಿವಿಧ ರೀತಿಯ ಪ್ರಾಣಾಯಾಮ ಕ್ರಿಯೆಗಳನ್ನು ಪ್ರತಿದಿನ ಅರ್ಧಗಂಟೆ ಮಾಡಿದರು ಸಾಕು. ಮನಸ್ಸಿನ ಮೇಲೆ ಪ್ರಭುತ್ವ ಬಂದು ಆಹಾರ ಸೇವನೆಯೂ ಕೂಡ ನಿಯಂತ್ರಣಕ್ಕೆ ಬರುತ್ತದೆ. ಜೀವಕೋಶಗಳಿಗೆ

ಆಮ್ಲಜನಕ ಸರಬರಾಜು ಉತ್ತಮವಾಗಿ ಅನಾರೋಗ್ಯ ತಪ್ಪುತ್ತದೆ.

ಮನೋಮಯ ಕೋಶವನ್ನು ಅಥವಾ ಮನಸ್ಸನ್ನು ಸುಸ್ಥಿತಿಯಲ್ಲಿಡಲು ಮನಸ್ಸನ್ನೇ ಸಾಧನವನ್ನಾಗಿ ಉಪಯೋಗಿಸಬೇಕು. ಮನಸ್ಸೇ ಮನುಷ್ಯನ ಎಲ್ಲಾ ಸುಖಃ ದುಃಖಗಳಿಗೂ ಕಾರಣ. ಮನಸ್ಸನ್ನು ನಾವು ನೇರವಾಗಿ ನಿಯಂತ್ರಿಸಲು ಸಾಧ್ಯವಿಲ್ಲದಿದ್ದರೂ ಉಸಿರಿನ ಮೂಲಕ ಮನಸ್ಸನ್ನು ನಿಯಂತ್ರಿಸಬಹುದು. ಪ್ರತ್ಯಾಹಾರ ಎಂದರೆ ಇಂದ್ರಿಯಗಳನ್ನು ಅನಗತ್ಯ ಬಯಕೆಗಳಿಗೆ ಈಡಾಗದಂತೆ ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು. ಏಕಾಗ್ರತೆ ಸಾಧಿಸಲಿಕ್ಕಾಗಿ ಪ್ರಯತ್ನ ಪೂರ್ವಕವಾಗಿ ಕೇಂದ್ರೀಕರಿಸಲು ಪ್ರಯತ್ನಿಸುವುದು ಧಾರಣ. ಪ್ರಯತ್ನವಿಲ್ಲದೇ ಅದೇ ಸ್ಥಿತಿಯಲ್ಲಿ ಮುಂದುವರಿಯುವುದೇ ಧ್ಯಾನ. ಒಂದು ನಿರ್ದಿಷ್ಟ ವಸ್ತುವನ್ನು ಗಮನಿಸುತ್ತಾ ಓಂಕಾರ ಪಠಿಸುತ್ತ, ಒಂದೆಡೆ ಗಮನ ಹರಿಸುವುದನ್ನು ರೂಢಿಸಿಕೊಳ್ಳಬೇಕು. ಧಾರಣ ಸ್ಥಿತಿಯಿಂದ ಧ್ಯಾನಕ್ಕೆ ಹೋಗುತ್ತಾ ಹಾಗೆ ಅದಲು ಬದಲು ಮಾಡುತ್ತಾ ಹೋದಾಗ ಅದು ಮನಸ್ಸಿನ ಅಡೆತಡೆಗಳನ್ನು ತೊಡೆದು ಹಾಕಲು ಸಹಾಯ ಮಾಡುತ್ತದೆ.

ಒತ್ತಡಗಳು ತೀವ್ರತರವಾಗಿದ್ದಾಗ ಭಕ್ತಿಯೋಗವು ಕೂಡ ಮನೋಮಯ ಕೋಶದಲ್ಲಿ ಒತ್ತಡದ ತೀವ್ರತೆಯನ್ನು ಕಡಿಮೆ ಮಾಡಲು ಒಂದು ಉತ್ತಮ ಕೌಶಲ. ನಮಗಿಂತ ದೊಡ್ಡ ಶಕ್ತಿಯನ್ನು ನಂಬಿ ಆ ಶಕ್ತಿಗೆ ಶರಣಾಗುವಿಕೆಯಿಂದ ಒತ್ತಡಗಳಿಂದ ದೂರ ಕೊಂಡೊಯ್ಯಲು ಸಹಾಯವಾಗುತ್ತದೆ. ಭಕ್ತಿಯನ್ನು ನವ ವಿಧದಲ್ಲಿ ಪ್ರಕಟಿಸಬಹುದು. ಅಂದರೆ ಶ್ರವಣಂ, ಕೀರ್ತನಂ, ವಿಷ್ಣುಸ್ಮರಣಂ, ಪಾದಸೇವನಂ, ಅರ್ಚನಂ, ವಂದನಂ, ದಾಸ್ಯಂ, ಸಖ್ಯಂ, ಆತ್ಮ ನಿವೇದನ ಎಲ್ಲವೂ ನಮಗೆ ಒತ್ತಡ ನಿರ್ವಹಣೆಗೆ ಸಹಾಯಕ. ಇದೇ ಭಕ್ತಿಯೋಗ. ಭಕ್ತಿ, ಜ್ಞಾನ, ಸತ್ಸಂಗ, ಸ್ವಾಧ್ಯಾಯ ಇವೆಲ್ಲವುಗಳಿಂದ ಮನೋಮಯ ಕೋಶವನ್ನು ಸುಸ್ಥಿತಿಯಲ್ಲಿಡಬಹುದು.

ವಿಜ್ಞಾನಮಯ, ಆನಂದಮಯ ಕೋಶಗಳನ್ನು ಧ್ಯಾನಯೋಗದಿಂದ ಅಂದರೆ ಅಧ್ಯಾತ್ಮಿಕ ಸ್ವಾಸ್ಥ್ಯದ ಅರಿವಿನಿಂದ ಸುಸ್ಥಿತಿಯಲ್ಲಿಡಬಹುದು. ಈ ಅರಿವು ಅವುಗಳ ಮೂಲವಾದ ಉಪನಿಷತ್ತು ವೇದಗಳಲ್ಲಿ ಸಿಗುತ್ತದೆ. ಇವುಗಳು ನಮ್ಮ ಬುದ್ಧಿಯನ್ನು ಉಪಯೋಗಿಸಿ ಯೋಗ ಸ್ಥಿತಿಯನ್ನು ತಲುಪಲು ತಾಂತ್ರಿಕ ಕೌಶಲ್ಯಗಳನ್ನು ನೀಡುತ್ತವೆ. ಆಂತರಿಕವಾಗಿ ನಮ್ಮನ್ನು ನಾವು ವಿಶ್ಲೇಷಿಸಿಕೊಂಡು ನಾವು ಸೇವಿಸುವ ಆಹಾರ ಕೆಲವೊಮ್ಮೆ ಅನಗತ್ಯವಾಗಿದ್ದರೂ ನಮ್ಮೆಲ್ಲಾ ಒತ್ತಡಗಳನ್ನು ತಣಿಸಲು ಆಹಾರ ಸೇವಿಸುತ್ತೇವೆ. ಇದು ಕೇವಲ ನಮ್ಮ ಮನಸ್ಸನ್ನು ಶಾಂತಗೊಳಿಸುವ ಕ್ರಿಯೆ ಎಂದು ವಿಶ್ಲೇಷಿಸುತ್ತಾ ಆಂತರಿಕ ನಿಶ್ಯಬ್ಧ ಸ್ಥಿತಿಗೆ ಹೋಗುವುದು. ಇಂತಹ ವಿಶ್ಲೇಷಣೆಗಳಿಂದ ನಮ್ಮ ತುಡಿತಗಳ ಮೇಲೆ ಪ್ರಭುತ್ವ ದೊರೆಯುತ್ತದೆ. ನಮ್ಮ ಜೀವನ ಶೈಲಿಯು ಆರೋಗ್ಯಕ್ಕೆ ಪೂರಕವಾಗಿಯೇ ಮುಂದುವರೆಯುತ್ತದೆ.

ಕರ್ಮಯೋಗ ಎಂದರೆ ನಾವು ದಿನನಿತ್ಯ ಮಾಡುವ ಕೆಲಸ ಕಾರ್ಯಗಳನ್ನು ಕೂಡ ಸಂತೃಪ್ತಿಯಿಂದ ಮಾಡುವುದು. "ಯೋಗಃ ಕರ್ಮಸು ಕೌಶಲಂ" ನಾವು ಯಾವುದೇ ಕೆಲಸವನ್ನು ಸಮಾಧಾನವಾಗಿ ಮಾಡುವುದು, ಫಲಾಫಲಗಳಿಗೆ ತುಂಬಾ ಯೋಚಿಸದೆ, ಮಾಡುವ ಕೆಲಸವನ್ನು ಕರ್ತವ್ಯವೆಂದು ತಿಳಿದು ಮಾಡುತ್ತಾ, ಆ ಕ್ಷಣವನ್ನು ಅನುಭವಿಸುತ್ತಾ, ದೈವಿಕ ಭಾವದಿಂದ ಮಾಡುವುದು ಮುಖ್ಯ. ಲೋಕ ರೂಢಿಗನುಸಾರವಾಗಿ ಹೊಂದಿಕೊಂಡು, ಕೆಲಸವನ್ನು ಅದರಿಂದ ಸಿಗುವ ಆನಂದಕ್ಕಾಗಿ ಮಾಡಬೇಕೆ ಹೊರತು ಕೇವಲ ಪ್ರತಿಫಲಕ್ಕಲ್ಲ ಎಂಬ ಭಾವನೆಯಿಂದ ಕರ್ತವ್ಯ ನಿರ್ವಹಿಸುವುದು ಮುಖ್ಯ. ಕೆಲಸ ಮಾಡುತ್ತಾ ಹೊರಗೆ ಚಟುವಟಿಕೆ, ಒಳಗೆ ಶಾಂತತೆ ಇಟ್ಟುಕೊಂಡು ಕರ್ತವ್ಯದಲ್ಲಿ ಬರುವ ಕಷ್ಟನಷ್ಟಗಳನ್ನು ಸಮದೂಗಿಸುತ್ತಾ ಹೋದರೆ, ಆನಂದವಾಗಿರಲು ಸಾಧ್ಯ. ಅಂತಹ ಆನಂದ ಪಡೆಯುವುದೇ ಆನಂದಮಯ ಕೋಶ. ಒಟ್ಟಾರೆ ಯೋಗಿಕ ಜೀವನಶೈಲಿ ಅನುಸರಿಸಿದರೆ ನಮ್ಮ ಮನಸ್ಸನ್ನು ಬುದ್ಧಿಯ ಹಿಡಿತದಲ್ಲಿಟ್ಟುಕೊಂಡು ಸೂಕ್ತ ಆಹಾರ ಸೇವನೆ, ಪಥ್ಯೋಪಚಾರ, ನಿಯಮಿತ ವ್ಯಾಯಾಮಗಳಿಂದ ನಮ್ಮ ಪಯಣ ಸದಾ ಸ್ವಾಸ್ಥ್ಯದೆಡೆಗೆ ಸಾಗುವುದು. ಜೀವನ ಶೈಲಿ ಕಾಯಿಲೆಗಳನ್ನು ಜಯಿಸಲು ಸಾಧ್ಯ.

"ಸರ್ವೇ ಭದ್ರಾಣಿ ಪಶ್ಯಂತು"



**ಡಾ. ನಾ. ಸೋಮೇಶ್ವರ**
ವಿಭಾಗೀಯ ಸಂಪಾದಕರು ಮತ್ತು ಲೇಖಕರು
ಬೆಂಗಳೂರು

## ವೈದ್ಯ ಲೋಕದ ವಿಸ್ಮಯಗಳು

# ಸಿಂಧು-ಸರಸ್ವತಿ ಮತ್ತು ಪ್ರಾಚೀನ ಭಾರತದಲ್ಲಿ ಆರೋಗ್ಯ ವಿಜ್ಞಾನ

ಇಂದಿಗೆ ೫೦ ದಶಲಕ್ಷ ವರ್ಷಗಳ ಹಿಂದೆ ಭಾರತ ಉಪಖಂಡದ ಭೂಫಲಕವು ಏಷ್ಯಾ ಭೂಫಲಕದೊಡನೆ ಘಟ್ಟಿಸಿತು. ಆಗ ಸುಮಾರು ೩೫೦೦ ಕಿಮೀ ಉದ್ದದ ಹಿಂದು ಕುಶ್-ಹಿಮಾಲಯನ್ ಪರ್ವತ ಶ್ರೇಣಿಯು ಹುಟ್ಟಿತು. ಇದು ಇಂದಿನ ಆಫ್ಘಾನಿಸ್ತಾನದಿಂದ ಹಿಡಿದು ಬರ್ಮದವರೆಗೆ ವ್ಯಾಪಿಸಿದೆ. ಏಷ್ಯಾ ಖಂಡದ ೧೦ ಮಹಾನ್ ನದಿಗಳು - ಅಮು ದರ್ಯಾ, ಸಿಂಧು, ಗಂಗಾ, ಬ್ರಹ್ಮಪುತ್ರ, ಇರಾವತಿ, ಸಾಲ್ವಿನ್, ಮೆಕಾಂಗ್, ಯಾಂಗ್‌ಟ್ಸೆ, ಹುವಾಂಗೆ, ಮತ್ತು ತರೀಮ್. ಈ ಹಿಂದುಕುಶ್-ಹಿಮಾಲಯನ್ ಪರ್ವತ ಶ್ರೇಣಿಯು ನೈಋತ್ಯ ಮಾರುತಗಳನ್ನು ತಡೆಯುತ್ತಿದ್ದ ಕಾರಣ ಈ ಹತ್ತು ನದಿಗಳಲ್ಲಿ ಸದಾ ನೀರನ್ನು ಹರಿಸುತ್ತಿತ್ತು. ಇಂದಿನ ವಾಯುವ್ಯ ಭಾರತ, ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನದ ಪ್ರದೇಶದಲ್ಲಿ ಸರಸ್ವತಿ ನದಿ, ಸಿಂಧು ನದಿ ಹಾಗೂ ಏಳು ಉಪನದಿಗಳು ಹರಿಯುತ್ತಿದ್ದು, 'ಸಪ್ತ ಸಿಂಧು' ಪ್ರದೇಶವೆಂದು ಹೆಸರಾಗಿತ್ತು.




10 ಲಕ್ಷ ಚ.ಕಿ.ಮೀ. ವ್ಯಾಪ್ತಿಯ ಸಿಂಧು-ಸರಸ್ವತಿಯ ನಾಗರಿಕತೆ.

ಸಪ್ತಸಿಂಧು ಪ್ರದೇಶದಲ್ಲಿ ಇಂದಿಗೆ ಕ್ರಿ. ಪೂ. ೨೦೦೦- ಕ್ರಿ. ಪೂ. ೫೫೦೦ ವರ್ಷಗಳ ಹಿಂದೆ ಮೊದಲ ಬಾರಿಗೆ ಮಾನವ ಜನಾಂಗವು ಇಲ್ಲಿ ನೆಲೆಸಿತು ತಮ್ಮದೇ ನಾಗರಿಕತೆಯನ್ನು ಬೆಳೆಸಿತು.



**ಯೋಜಿತ ದೋಲಾ-ವೀರ ನಗರ**

ಅದುವೇ ಮೆಹರ್ಘಡ-೧ ನಾಗರಿಕತೆ. ಇದು ಕ್ರಿ. ಪೂ. ೩೩೦೦ರ ವೇಳೆಗೆ ಉಛ್ರಾಯ ಸ್ಥಿತಿಯನ್ನು ತಲುಪಿತು. ಕ್ರಿ. ಪೂ. ೩೦೦ರವರೆಗೂ ಮೆರೆದ ಈ ನಾಗರಿಕತೆಯು ಕ್ರಮೇಣ ವೈದಿಕ ನಾಗರಿಕತೆಯ ಜೊತೆಯಲ್ಲಿ ಸೇರಿಹೋಯಿತು. ಈ ನಾಗರಿಕತೆಯು ಪ್ರಧಾನವಾಗಿ ಸರಸ್ವತಿ ನದಿ (ಗಗ್ರಾ-ಹಕ್ಕರ್) ಮತ್ತು ಸಿಂಧು ನದಿಯ ಇಕ್ಕೆಲಗಳಲ್ಲಿ ವ್ಯಾಪಿಸಿದ್ದ ಕಾರಣ, ಇದನ್ನು ಸಿಂಧು-ಸರಸ್ವತಿ ನಾಗರಿಕತೆ ಎಂದು ಕರೆದರು. ೧೦ ಲಕ್ಷ ಚ. ಕಿ. ಮೀ. ವ್ಯಾಪ್ತಿಯ ಪ್ರದೇಶದಲ್ಲಿ ೨೬೦೦ ನಗರಗಳನ್ನು ಗುರುತಿಸಲಾಗಿದೆ.

ಇವುಗಳಲ್ಲಿ ಕೇವಲ ೨% ರಷ್ಟು ನಗರಗಳ ಉತ್ಖನನ ಮತ್ತು ಸಂಶೋಧನೆಯು ನಡೆದಿದೆ. ಹಾಗಾಗಿ ನಮಗೆ ಸಿಂಧು–ಸರಸ್ವತಿ ನಾಗರಿಕತೆಯ ಬಗ್ಗೆ ಎಷ್ಟು ತಿಳಿದಿದೆಯೋ, ಅದಕ್ಕಿಂತಲೂ ಹೆಚ್ಚಿನದನ್ನು ತಿಳಿಯಬೇಕಾಗಿದೆ.

**ಸಾರ್ವಜನಿಕ ನೈರ್ಮಲ್ಯ:** ಸಿಂಧು–ಸರಸ್ವತಿ ಜನರ ಆರೋಗ್ಯ ಪ್ರಜ್ಞೆಯು ಅದ್ಭುತವಾಗಿತ್ತು. ಜಗತ್ತಿನ ಯಾವುದೇ ನಾಗರಿಕತೆಯಲ್ಲಿ ಕಂಡುಬರದಂತಹ ವ್ಯವಸ್ಥಿತ ನಗರ ಯೋಜನೆಯನ್ನು ಇಲ್ಲಿ ಕಾಣಬಹುದು. ನಗರಗಳಲ್ಲಿ ಪ್ರಧಾನ ರಸ್ತೆಯು ಉತ್ತರದಿಂದ ದಕ್ಷಿಣಕ್ಕೆ ಸಾಗುತ್ತಿತ್ತು. ಈ ಪ್ರಧಾನ ರಸ್ತೆಯನ್ನು ಅಲ್ಲಲ್ಲಿ ಛೇದಿಸುವ ಅಡ್ಡ ರಸ್ತೆಗಳಿದ್ದವು.




ಸ್ನಾನದ ಕೊಳ – ಮೊಹೆಂಜೋದಾರೊ

ಹಾಗಾಗಿ ಮನೆಗಳನ್ನು ಕಟ್ಟಲು ನಿರ್ದಿಷ್ಟ ಚೌಕಗಳು ರೂಪುಗೊಳ್ಳುತ್ತಿದ್ದವು. ಅಲ್ಲಿ ಸುಟ್ಟ ಇಟ್ಟಿಗೆಗಳಿಂದ ಕಟ್ಟಿದ ಒಂದು, ಎರಡು ಅಥವ ಎರಡು ಮಹಡಿಯ ಮನೆಗಳಿದ್ದವು. ಪೂರ್ವ ಮತ್ತು ಪಶ್ಚಿಮ ದ್ವಾರಗಳಿಂದ ಸೂರ್ಯನ ಬೆಳಕು ಧಾರಾಳವಾಗಿ ಮನೆಯ ಒಳಗೆ ಬರುತ್ತಿತ್ತು. ಪ್ರತಿಯೊಂದು ಮನೆಯಲ್ಲಿ ಶೌಚ ಮತ್ತು ಸ್ನಾನದ ಗೃಹಗಳಿದ್ದವು. ತ್ಯಾಜ್ಯ ನೀರು ಕೊಳವೆಗಳ ಮೂಲಕ ಹರಿದು, ಮನೆಯ ಮುಂಭಾಗದಲ್ಲಿದ್ದ ದೊಡ್ಡ ಕೊಳವೆಯೊಳಗೆ ಸೇರುತ್ತಿತ್ತು. ಪ್ರತಿ ಬೀದಿಯ ಕೊಳವೆಯು, ಒಂದು ಆಳೆತ್ತರದ ಬೃಹತ್ ಕೊಳವೆಯನ್ನು ಸೇರಿ, ಅಲ್ಲಿಂದ ನಗರದ ಹೊರಗೆ ವಿಸರ್ಜಿತವಾಗುತ್ತಿತ್ತು. ಒಳಚರಂಡಿ ವ್ಯವಸ್ಥೆಯನ್ನು ನೋಡಿಕೊಳ್ಳುವ ನುರಿತ ಪೌರಕಾರ್ಮಿಕರು




ಸ್ನಾನ ಗೃಹ

ಇದ್ದರು. ಪ್ರತಿಯೊಂದು ಮನೆಯ ಮುಂಭಾಗದಲ್ಲಿ ಮುಚ್ಚಳವಿರುವ ಕಸದ ತೊಟ್ಟಿಗಳು ಇರುತ್ತಿದ್ದವು. ಪ್ರತಿದಿನ ನಸುಕಿನಲ್ಲಿಯೇ ಅವುಗಳ ಸ್ವಚ್ಛತಾ ಕಾರ್ಯ ಪೂರ್ಣಗೊಳ್ಳುತ್ತಿತ್ತು. ಪ್ರತಿಯೊಂದು ಮನೆಯ ಹಿಂಭಾಗದಲ್ಲಿ ಕುಡಿಯುವ ಬಾವಿಗಳಿರುತ್ತಿದ್ದವು. ಸಾರ್ವಜನಿಕ ಸ್ನಾನದ ಕೊಳಗಳು ಹಾಗೂ ಅವುಗಳಿಗೆ ಹೊಂದಿಕೊಂಡಂತಿರುವ ಕಟ್ಟಡಗಳು ಬಹುಶಃ ಪೂಜಾ ಸ್ಥಳವಾಗಿದ್ದಿರಬಹುದು. ಕೆಲವು ನಗರಗಳಲ್ಲಿ ಮಳೆ ನೀರಿನ ಕೊಯ್ಲು ವ್ಯವಸ್ಥಿತವಾಗಿ ನಡೆಯುತ್ತಿತ್ತು. ಕುಡಿಯುವ ನೀರಿಗೆ ಯಾವ ತೊಂದರೆಯೂ ಇರಲಿಲ್ಲ.

ನೀರಾವರಿ ಮತ್ತು ಕೃಷಿ ಚಟುವಟಿಕೆಗಳು ಅತ್ಯುತ್ತಮ ಸ್ತರವನ್ನು ತಲುಪಿದ್ದವು. ಗೋಧಿ, ಬಾರ್ಲಿ, ಬಟಾಣಿ, ಅವರೆಕಾಳು, ನಾರಗಸೆ (ಲಿನ್‌ಸೀಡ್), ಸಾಸಿವೆಯನ್ನು ಚಳಿಗಾಲದಲ್ಲಿ ಬೆಳೆಯುತ್ತಿದ್ದರು. ಬೇಸಿಗೆಯಲ್ಲಿ ಭತ್ತ, ಸಿರಿಧಾನ್ಯ ಮತ್ತು ಎಳ್ಳನ್ನು ಬೆಳೆಯುತ್ತಿದ್ದರು. ಖರ್ಜೂರ, ದ್ರಾಕ್ಷಿ, ಕಲ್ಲಂಗಡಿ ಮುಂತಾದ ಹಣ್ಣುಗಳನ್ನು, ಸೌತೆ, ಈರುಳ್ಳಿ, ಬೆಳ್ಳುಳ್ಳಿ



ಕುಡಿಯುವ ನೀರಿನ ಬಾವಿ – ಮೊಹೆಂಜೋದಾರೊ

ಮುಂತಾದ ತರಕಾರಿಗಳನ್ನು ಬೆಳೆಯುತ್ತಿದ್ದರು. ಹಸು, ಎಮ್ಮೆ, ಮೇಕೆ, ಕುರಿ, ಹಂದಿಗಳನ್ನು ಸಾಕಿಕೊಂಡಿದ್ದರು. ಈ ಪ್ರಾಣಿಗಳ ಹಾಲನ್ನು, ಹಾಲಿನ ಉತ್ಪನ್ನಗಳನ್ನು ಸೇವಿಸುತ್ತಿದ್ದರು. ಈ ಪ್ರಾಣಿಗಳ ಮಾಂಸವನ್ನೂ ಸಹ ತಿನ್ನುತ್ತಿದ್ದರು. ಮೀನು ಅವರ ಪ್ರಮುಖ ಆಹಾರವಾಗಿತ್ತು. ನಾಯಿ ಮತ್ತು ಬೆಕ್ಕು ಸಾಕು ಪ್ರಾಣಿಗಳಾಗಿದ್ದವು. ಕೋಳಿಯನ್ನೂ ಅವರು ಸಾಕಿಕೊಂಡಿದ್ದಿರಬಹುದು ಎನ್ನುವುದಕ್ಕೆ ಪುರಾವೆಗಳಿವೆ. ಧಾನ್ಯಗಳನ್ನು ಒಕ್ಕುವ ಒರಳುಗಳು,



ಸಿದ್ಧ ಪದ್ಧತಿಯ ಋಷಿ?

ಬೀಸುವಕಲ್ಲುಗಳು ಹಾಗೂ ಕುಟ್ಟುವ ಉಪಕರಣಗಳು ದೊರೆತಿವೆ. ಕುಂಭ ಕಲೆಯು ಅವರಿಗೆ ಚೆನ್ನಾಗಿ ತಿಳಿದಿತ್ತು. ಮನೆಗಳಲ್ಲಿ ದೊಡ್ಡ ಒಲೆಗಳು ಇರುತ್ತಿದ್ದವು. ಇಂದಿನ ತಂದೂರಿ ಒಲೆಗಳಂತಹವೂ ದೊರೆತಿವೆ. ಬಹುಶಃ ಅವರು ರೊಟ್ಟಿ ಮತ್ತು ಗಂಜಿಯನ್ನು ನಿತ್ಯ ಸೇವಿಸುತ್ತಿದ್ದಿರಬೇಕು. ಅನ್ನವನ್ನು ಮಾಡುವುದೂ ಅವರಿಗೆ ಗೊತ್ತಿರಬೇಕು. ಹಾಗಾಗಿ ಸಿಂಧು–ಸರಸ್ವತಿ ಸಂಸ್ಕೃತಿಯ ಜನರು ಸಮತೋಲಿತ ಆಹಾರವನ್ನು ಸೇವಿಸುತ್ತಿದ್ದು, ಆರೋಗ್ಯವಂತರಾಗಿ ಇದ್ದಿರಬೇಕು ಎಂದು ಭಾವಿಸಬಹುದು.

ಭಾರತದ ಪಶ್ಚಿಮದಲ್ಲಿ ಲೋಥಾಲ್ ನಗರವು ಬಂದರು ಕಟ್ಟೆಯಾಗಿತ್ತು. ಇಲ್ಲಿಂದ ಹೊರಟ ಹಡಗುಗಳು ಪರ್ಷಿಯ, ಮೆಸೊಪೊಟೋಮಿಯ ಮತ್ತು ಈಜಿಪ್ಷಿಯನ್ ನಾಗರಿಕತೆಯ ಜನರೊಡನೆ ವ್ಯಾಪಾರ–ವಾಣಿಜ್ಯ–ವಹಿವಾಟುಗಳನ್ನು ನಡೆಸುತ್ತಿದ್ದರು. ಚೀನಾ ದೇಶದೊಡನೆಯೂ ವಹಿವಾಟು ಇದ್ದಿರಬೇಕು. ಹಾಗಾಗಿ ಈ ಎಲ್ಲ ಸಂಸ್ಕೃತಿಯಲ್ಲಿ ಇದ್ದಂತಹ ವೈದ್ಯಕೀಯ ಜ್ಞಾನವು, ಸಿಂಧು–ಸರಸ್ವತಿ ಜನರಲ್ಲೂ ಇದ್ದಿರಬೇಕು ಎಂದು ನಾವು ಸರಳವಾಗಿ ತರ್ಕಿಸಬಹುದು. ಅವುಗಳನ್ನು ಈ




ಕಪಾಲ ರಂಧ್ರನ – ಹರಪ್ಪ (ಕೋಲ್ಕತ್ತದಲ್ಲಿದೆ)

ಕೆಳಕಂಡಂತೆ ಸಂಗ್ರಹಿಸಬಹುದು.

- ಸಿಂಧು–ಸರಸ್ವತಿಯ ಯಾವ ನಗರದಲ್ಲಿಯೂ ವ್ಯವಸ್ಥಿತ ಆಸ್ಪತ್ರೆಗಳು ಇದ್ದ ಬಗ್ಗೆ ಪುರಾವೆಗಳು ದೊರೆತಿಲ್ಲ. ಸಾರ್ವಜನಿಕ ನೈರ್ಮಲ್ಯದ ಬಗ್ಗೆ ಇಷ್ಟೆಲ್ಲ ಕಾಳಜಿ ತೆಗೆದುಕೊಂಡಿರುವವರು, ವ್ಯವಸ್ಥಿತ ಆಸ್ಪತ್ರೆಗಳನ್ನು ಕಟ್ಟಿರಲಿಲ್ಲ ಎಂದರೆ ನಂಬಲು ಕಷ್ಟ. ಆ ಕಟ್ಟಡಗಳು ನಮಗೆ ದೊರೆತಿಲ್ಲ. ಅಷ್ಟೆ. ಬಹುಶಃ ಮುಂದಿನ ದಿನಗಳಲ್ಲಿ ದೊರೆಯಬಹುದು.
- ಇವರು ಕಪಾಲ ರಂಧ್ರನವನ್ನು (ಟ್ರೆಫೈನೇಶನ್) ಮಾಡುತ್ತಿದ್ದರು. ಕೋಲ್ಕತ್ತದಲ್ಲಿರುವ

ಭಾರತೀಯ ಮಾನವಶಾಸ್ತ್ರದ ಸರ್ವೇಕ್ಷಣ ವಿಭಾಗದ ಉಗ್ರಾಣದಲ್ಲಿ ಕ್ರಿ. ಪೂ. ೪೩೦೦ ವರ್ಷಗಳಷ್ಟು ಹಿಂದಿನ ಕಪಾಲವಿದೆ. ಈ ಕಪಾಲದ ಕಪಾಲರಂಧ್ರನವು ಕ್ರಮೇಣ ಗುಣಮುಖವಾಗುತ್ತಿದ್ದ, ಅಂದರೆ ಹೊಸ ಮೂಳೆ ಬೆಳೆಯುತ್ತಿದ್ದ ಲಕ್ಷಣಗಳು ಇವೆ. ಕಪಾಲರಂಧ್ರನವನ್ನು ನಡೆಸಲು ಆಸ್ಪತ್ರೆಯಂತಹ ಒಂದು ಕಟ್ಟಡ ಇದ್ದಿರಲೇಬೇಕು.



**ಬೋ–ಡ್ರಿಲ್ – ಮೆಹರ್ಘಡ**

- ಕ್ರಿ. ಪೂ. ೭೦೦೦ ವರ್ಷಗಳಷ್ಟು ಹಿಂದೆಯೇ ಆರಂಭವಾದ ಮೆಹರ್ಘಡ ನಾಗರಿಕತೆಯ ಕಪಾಲಗಳನ್ನು ಅಧ್ಯಯನ ಮಾಡಿದಾಗ, ಹಲ್ಲುಗಳನ್ನು ಕೊರೆದು ಅದರಲ್ಲಿ ಜಡ ವಸ್ತುವನ್ನು ತುಂಬಿರುವ ಉದಾಹರಣೆಗಳು ದೊರೆತಿವೆ. ಹಲ್ಲಿನಲ್ಲಿ ರಂಧ್ರವನ್ನು ಮಾಡಲು ಅವರು 'ಬೋ–ಡ್ರಿಲ್' ಎಂಬ ಸರಳ ಸಾಧನವನ್ನು ಬಳಸುತ್ತಿದ್ದರು. ಇಲ್ಲಿ ದೊರೆತ ಪೂರ್ಣ ಅಸ್ಥಿಪಂಜರಗಳ ಬಾಯಿಯನ್ನು ಗಮನಿಸಿದಾಗ, ಅವು ಬಹುಪಾಲು ಆರೋಗ್ಯವಾಗಿದ್ದವು.
- ಇವರು ಸಸ್ಯಜನ್ಯ–ಪ್ರಾಣಿಜನ್ಯ–ಖನಿಜ ಜನ್ಯ ವಸ್ತುಗಳನ್ನು ಬಳಸಿ ನಾನಾ ಔಷಧಗಳನ್ನು ತಯಾರಿಸುತ್ತಿದ್ದಿರಬೇಕು. ಜಿಂಕೆಯ ಕೊಂಬು ಹಾಗೂ ಬೆಣಸ ಅಥವ ಕಟ್ಲ್ ಮೀನಿನ ಮೂಳೆಗಳು ದೊರೆತಿವೆ.
- ಆಯುರ್ವೇದ, ಸಿದ್ಧ (ಸಿದ್ಧರ ಮುದ್ರೆ) ಹಾಗೂ ಯೋಗ ವಿಜ್ಞಾನಗಳು (ಪಶುಪತಿನಾಥ ಮುದ್ರೆ) ಸಿಂಧು–ಸರಸ್ವತಿ ಸಂಸ್ಕೃತಿಯಲ್ಲಿಯೇ ಜನಿಸಿದವು.

**ತಕ್ಷಶಿಲಾ ವಿವಿ:** ಸಿಂಧು–ಸರಸ್ವತಿ ಒಡಲಿನಲ್ಲಿ ಸರಿಸುಮಾರು ಕ್ರಿ. ಪೂ. ೧೫೦೦ರ ಆಸುಪಾಸಿನಲ್ಲಿ ಜನ್ಮತಳೆದ ಋಗ್ವೇದದಲ್ಲಿ ಆರೋಗ್ಯಕ್ಕೆ ಸಂಬಂಧಿಸಿದ ಮೂಲಭೂತ ಮಾಹಿತಿ ದೊರೆಯುತ್ತದೆ. ಋಗ್ವೇದದ ಉಪವೇದವಾಗಿ ಆಯುರ್ವೇದವು ಉದಯಿಸಿತು. ಅಥರ್ವಣ ವೇದವು ಆರೋಗ್ಯ ವಿಸ್ತೃತ ವಿವರಣೆಯನ್ನು ಒಳಗೊಂಡಿದೆ. ವೈದಿಕ ಯುಗದ ವೈದ್ಯಕೀಯ ಸೌಲಭ್ಯಗಳನ್ನು ಅರಿಯಲು ಬಹುಶಃ ತಕ್ಷಶಿಲಾ ವಿಶ್ವವಿದ್ಯಾಲಯದ ಕಾಲಕ್ಕೆ ಬರಬೇಕು. ಇದು ಸುಮಾರು ಕ್ರಿ. ಪೂ. ೫ನೆಯ ಶತಮಾನದಲ್ಲಿ ಆರಂಭವಾಗಿ ಕ್ರಿ. ಶ. ೫ನೆಯ ಶತಮಾನದವರೆಗೆ, ಸುಮಾರು ೧೦೦೦ ವರ್ಷಗಳ ಕಾಲ ಮೆರೆಯಿತು. ಭಾರತ, ಚೀನ, ಗ್ರೀಸ್, ಪರ್ಷಿಯ, ಬ್ಯಾಬಿಲೋನಿಯ, ಈಜಿಪ್ಟ್, ಫೊನೀಶಿಯ, ಸಿರಿಯ, ಅರೇಬಿಯ, ಶ್ರೀಲಂಕಾ ದೇಶಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ವೈದ್ಯವಿದ್ಯಾರ್ಥಿಗಳು ಅಂಗರಚನ ವಿಜ್ಞಾನ, ಶಸ್ತ್ರವೈದ್ಯಕೀಯ, ರೋಗ ವಿಜ್ಞಾನ, ಸಸ್ಯವಿಜ್ಞಾನ, ಔಷಧ ವಿಜ್ಞಾನಗಳನ್ನು ಕಲಿಸುತ್ತಿದ್ದರು. ಹತ್ತು ವಿದ್ಯಾರ್ಥಿಗಳಿಗೆ ಒಬ್ಬ ಗುರುವಿರುತ್ತಿದ್ದರು. ಗುರುಗಳು ವೈದ್ಯಕೀಯ ಸಿದ್ಧಾಂತಕ್ಕೆ ಎಷ್ಟು ಆದ್ಯತೆಯನ್ನು ಕೊಡುತ್ತಿದ್ದರೋ ಅಷ್ಟೇ ಆದ್ಯತೆಯನ್ನು ಪ್ರಾಯೋಗಿಕ ಚಟುವಟಿಕೆಗಳಿಗೆ ನೀಡುತ್ತಿದ್ದರು.

ತಕ್ಷಶಿಲಾ ವಿಶ್ವವಿದ್ಯಾಲಯದಲ್ಲಿ ಚರಕ ಮಹರ್ಷಿಗಳು ಅಧ್ಯಯನ ಮಾಡಿದರು. ಬಹುಶಃ ಚರಕ ಸಂಹಿತೆಯನ್ನೂ ಅವರು ಇಲ್ಲಿಯೇ ರಚಿಸಿರಬೇಕು. ಗೌತಮ ಬುದ್ಧನಿಗೆ ಚಿಕಿತ್ಸೆಯನ್ನು ನೀಡಿದ ಜೀವಕ ಮಹರ್ಷಿಯು ಇಲ್ಲಿಯೇ ಅಧ್ಯಯನವನ್ನು ಮಾಡಿದ್ದರು. ಸುಶ್ರುತ ಮಹರ್ಷಿಗಳೂ ಇಲ್ಲಿಯೇ ಅಧ್ಯಯನ ಮಾಡಿರಬೇಕು



ತಕ್ಷಶಿಲಾ ವಿಶ್ವವಿದ್ಯಾಲಯ

ಎನ್ನುವ ಅಭಿಪ್ರಾಯವಿದೆ. ಆಯುರ್ವೇದದಲ್ಲಿ ಬರುವ ಅಷ್ಟಾಂಗ ಹೃದಯದ ಐದನೆಯ ಅಂಗವೇ ಶಲ್ಯತಂತ್ರ ಅಥವ ಶಸ್ತ್ರವೈದ್ಯಕೀಯ. ಶಲ್ಯತಂತ್ರವು ಚುಚ್ಚಿಕೊಂಡ ದರ್ಭೆಯನ್ನು ತೆಗೆಯುವುದರಿಂದ ಹಿಡಿದು ಉದರದಲ್ಲಿರುವ ಮೃತಶಿಶುವನ್ನು ಛೇದಿಸಿ ಹೊರತೆಗೆಯುವವರಿಗೂ ಹಲವು ತಂತ್ರಗಳನ್ನು ವಿವರಿಸುತ್ತದೆ. ಮೂಗು, ಕಿವಿಗಳ ವಿರೂಪವನ್ನು ಸರಿಪಡಿಸುತ್ತಿದ್ದ ಸುರೂಪಿಕಾ



ವಿಶ್ವದ ಮೊದಲ ಪ್ಲಾಸ್ಟಿಕ್ ಸರ್ಜನ್ – ಸುಶ್ರುತ

ಶಸ್ತ್ರಚಿಕಿತ್ಸೆ, ಕಣ್ಣುಪೊರೆಯನ್ನು ನಿವಾರಿಸುವ ಶಸ್ತ್ರಚಿಕಿತ್ಸೆ, ಮೂತ್ರಾಶಯದಲ್ಲಿ ಬೆಳೆದ ಕಲ್ಲುಗಳನ್ನು ಶಸ್ತ್ರಚಿಕಿತ್ಸೆಯ ಮೂಲಕ ನಿವಾರಿಸುವ ಚಿಕಿತ್ಸೆ ಇತ್ಯಾದಿಗಳನ್ನು ನಡೆಸುತ್ತಿದ್ದರು. ಇದಕ್ಕಾಗಿ ಸುಮಾರು ೧೨೦ ಯಂತ್ರಗಳನ್ನು ಅಂದರೆ ಉಪಕರಣಗಳನ್ನು ಹಾಗೂ ೩೦೦ಕ್ಕೂ ಹೆಚ್ಚು ಶಸ್ತ್ರಗಳನ್ನು ರೂಪಿಸಿದ್ದರು. ಇವುಗಳಲ್ಲಿ ನಳಿಕೆಯಂತಹವೂ ಇದ್ದವು. ವಿಶೇಷವಾದ ಕ್ಷಾರದ್ರಾವಣದಿಂದ ಶಸ್ತ್ರಗಳನ್ನು ಶುದ್ಧೀಕರಿಸುತ್ತಿದ್ದರು. ಕ್ಷಾರ ಕರ್ಮ ಮತ್ತು ಅಗ್ನಿಕರ್ಮ ಎಂಬ ವಿಶೇಷ ಶಸ್ತ್ರಚಿಕಿತ್ಸಾ ತಂತ್ರಗಳನ್ನೂ ಬಳಸುತ್ತಿದ್ದರು.

೧೦,೦೦೦ ಕ್ಕೂ ಹೆಚ್ಚು ವಿದ್ಯಾರ್ಥಿಗಳಿದ್ದ ತಕ್ಷಶಿಲಾ ವಿಶ್ವವಿದ್ಯಾಲಯದಲ್ಲಿ ಇಷ್ಟು ದೊಡ್ಡ ವಿಶ್ವವಿದ್ಯಾಲಯದಲ್ಲಿ ಆಸ್ಪತ್ರೆಗಳು ಇರಲಿಲ್ಲ ಎಂದರೆ ನಂಬಲು ಕಷ್ಟ. ಆದರೆ ಆಸ್ಪತ್ರೆಗಳ ಕುರುಹುಗಳು ನಮಗೆ ದೊರೆತಿಲ್ಲ. ಬಹುಶಃ ಸಿಂಧು ಸರಸ್ವತಿ ಸಂಸ್ಕೃತಿಯ ೯೮% ನಗರಗಳ ಉತ್ಖನನವನ್ನು ನಡೆಸಿದಾಗ, ಈ ಬಗ್ಗೆ ಹೆಚ್ಚಿನ ಮಾಹಿತಿಯು ದೊರೆಯಬಹುದು. ○




ಕೃತಿ ಪರಿಚಯ

# ಶಿಕಾರಿ

**ಡಾ॥ ಉಷಾ ಎಂ.ಜಿ.**
ಸೂಕ್ಷ್ಮಜೀವಿಶಾಸ್ತ್ರಜ್ಞರು
ಜೆ.ಜೆ.ಎಂ. ಮೆಡಿಕಲ್ ಕಾಲೇಜು, ದಾವಣಗೆರೆ.
ಲೇಖಕರು ಮತ್ತು ವಿಭಾಗೀಯ ಸಂಪಾದಕರು

ಇತ್ತೀಚೆಗೆ ನಾನು ಓದಿದ ಯಶವಂತ ಚಿತ್ತಾಲರ ಪುಸ್ತಕ 'ಶಿಕಾರಿ'ಯ ಬಗ್ಗೆ ಯಾರಲ್ಲಾದರೂ ಮಾತನಾಡಬೇಕೆನಿಸಿದ್ದು ಸುಳ್ಳಲ್ಲ. ಚಿತ್ತಾಲರ ಪುಸ್ತಕವನ್ನು ವಿಮರ್ಶೆ ಮಾಡುವ ಧೈರ್ಯ ನನಗಿಲ್ಲ. ಕಾರ್ಪೋರೇಟ್ ಜಗತ್ತಿನಲ್ಲಿ ಎಲ್ಲವನ್ನೂ, ಎಲ್ಲರನ್ನೂ ಹಿಂದಿಕ್ಕಿ ನಾಗಲೋಟದಿಂದ ಮುಂದೋಡುತ್ತಾ, ಯಶಸ್ಸಿನ ಏಣಿಯನ್ನು ಹತ್ತಬೇಕೆನ್ನುವ ಕೆಲ ಮನಸ್ಸುಗಳ, ಮನುಷ್ಯರ ಹವಣಿಕೆಯನ್ನು, ಇದರಿಂದ ಜರ್ಜರಿತರಾಗಿ ಹತಾಶೆಗೊಳಗಾಗುವ ಇನ್ನೂ ಹಲವು ಮನಸ್ಸುಗಳನ್ನು, ಇವೆರಡೂ ಅಲ್ಲದೇ ಸಮಯಕ್ಕೆ ತಕ್ಕ ಅವಕಾಶವಾದಿಗಳಾಗುವ ಅನೇಕರ ವ್ಯಕ್ತಿತ್ವವನ್ನು ಎಲ್ಲವನ್ನೂ ಸವಿಸ್ತಾರವಾಗಿ ಬಿಚ್ಚಿಟ್ಟಿದ್ದಾರೆ. ಇದೆಲ್ಲಕ್ಕಿಂತ ಭಿನ್ನವಾಗಿ ನಿಲ್ಲುವುದು ಕಥಾನಾಯಕ ನಾಗಪ್ಪನ ವ್ಯಕ್ತಿತ್ವ. ನಿಂತ ಕಾಲ ಕೆಳಗಿನ ನೆಲ ಕುಸಿದಂಥ ಅನುಭವವಾದಾಗ ಹೇಗೆಲ್ಲಾ ಒಬ್ಬ ವ್ಯಕ್ತಿ ಹೊರಹೊಮ್ಮಬಲ್ಲ! ಮತ್ತೆ ವಿಜೃಂಭಿಸಬಲ್ಲ ಎನ್ನುವುದಕ್ಕೆ ಉದಾಹರಣೆಯಾಗುತ್ತಾನೆ ನಾಗಪ್ಪ ಉರ್ಫ್ ಪ್ರೊಫೆಸರ್ ನಾಗನಾಥ್ ಉರ್ಫ್ ಮಿಸ್ಟರ್ ನಾಗ್. ಮಲ್ಟಿ ನ್ಯಾಷನಲ್ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ/ಮಾಡಲಿಚ್ಛಿಸುವ ಪ್ರತಿಯೊಬ್ಬರೂ (ಅದರಲ್ಲೂ ಯುವಕರು) ಓದಲೇಬೇಕಾದ ಪುಸ್ತಕ 'ಶಿಕಾರಿ'.




ಉತ್ತರ ಕನ್ನಡದ ಹನೇಹಳ್ಳಿಯಲ್ಲಿ ಹುಟ್ಟಿದ ಯಶವಂತ ಚಿತ್ತಾಲರು ಕುಮಟಾ, ಧಾರವಾಡಗಳಲ್ಲಿ ಶಿಕ್ಷಣ ಮುಗಿಸಿ, ಮುಂಬಯಿಯಲ್ಲಿ ಬಿ.ಎಸ್.ಸಿ. (ಟೆಕ್ನಾಲಜಿ) ಪದವಿ ಪ್ಲಾಸ್ಟಿಕ್ ತಂತ್ರವಿಜ್ಞಾನದಲ್ಲಿ ಹೊಂದಿ, ಅಮೇರಿಕಾದಲ್ಲಿ ಎಂ.ಇ. (ರಸಾಯನಶಾಸ್ತ್ರ) ಪದವಿ ಮುಗಿಸಿ ನಂತರ ಬೇಕೆಲೈಟ್ ಹೈಲಮ್ ಲಿಮಿಟೆಡ್ ಕಂಪನಿಯಲ್ಲಿ ಸೇವೆ ಸಲ್ಲಿಸಿ, ಎಕ್ಸಿಕ್ಯೂಟಿವ್ ಡೆರೆಕ್ಟರಾಗಿ ನಿವೃತ್ತರಾದವರು. ಕನ್ನಡ ಸಾಹಿತ್ಯದಲ್ಲಿ ಅಪಾರ ಕೃಷಿ ಮಾಡಿದವರು. 'ಶಿಕಾರಿ'ಯ ಹೊಸ ರೀತಿ ಕಥಾವಸ್ತು ಚಿತ್ತಾಲರ ಆಗಾಧ ಶಬ್ದ ಭಂಡಾರದಿಂದ ಶ್ರೀಮಂತವಾಗಿ ಮೂಡಿ ಬಂದು ಇಂದಿಗೂ ಪ್ರಸ್ತುತವಾದ ಕೃತಿಯಾಗಿದೆ.

'ಶಿಕಾರಿ'ಯ ಕಥಾವಸ್ತು ತುಂಬಾ ನೇರ ಮತ್ತು ಸರಳ. ಕಾರ್ಯಸ್ಥಳದಲ್ಲಿ ನಡೆಯುವಂತಹ ಒಬ್ಬ ಮನುಷ್ಯನಿಂದ ಮತ್ತೊಬ್ಬ ಮನುಷ್ಯನ ಬೇಟೆ. ಪುಸ್ತಕದ ಪ್ರತಿ ಪುಟವು ಬೇಟೆಯ ಗುರಿ ನಾಗಪ್ಪನ ಸುತ್ತಲೂ ಸುತ್ತುತ್ತದೆ. ಹೇಗೆಲ್ಲಾ ಕಂಪನಿಯ ಸಹೋದ್ಯೋಗಿಗಳು, ಉನ್ನತ ಅಧಿಕಾರಿಗಳು ತಮ್ಮ ಸ್ವಾರ್ಥಕ್ಕಾಗಿ ಅವನನ್ನು ಉಪಯೋಗಿಸಿಕೊಳ್ಳುತ್ತಾರೆ, ಕಾಡುತ್ತಾರೆ ಎಂಬುದನ್ನು ನಿರೂಪಿಸಿದ್ದಾರೆ. ಕಥೆಯಲ್ಲಿರುವ ಪ್ರತಿ ಸನ್ನಿವೇಶವು ಬಿಂಬಿಸುವ

ಬೇಟೆಯ ಕಾರಣ ಮತ್ತು ರೀತಿ 'ಎಲಾ ಇವನಾ!' ಎಂದೆನಿಸದೆ ಇರದು.

ಕಥೆ ಪ್ರಾರಂಭವಾಗುವುದೇ ನಾಗಪ್ಪ ತನ್ನ ಕಂಪನಿಯ ಕೆಲಸದಿಂದ ಅಮಾನತಿನ ಆದೇಶ ಪಡೆಯುವ ಸಂದರ್ಭದಿಂದ, ಅದೂ ಕಾರಣ ನೀಡದೆ ಕೇವಲ 'ಗಂಭೀರ ಆಪಾದನೆಯ ಕಾರಣದಿಂದ' ಎಂದೆಷ್ಟೇ ಬರೆದದ್ದು. ಜೊತೆಯಲ್ಲಿ ಒಂದು ಸಲಹೆ ಕೂಡ; 'ಒಂದು ತಿಂಗಳ ರಜೆ ಬೇಕಾದರೆ ತೆಗೆದುಕೊಳ್ಳಬಹುದು' ಎಂದು ನಡುಗಿ ಹೋಗಿದ್ದ.
ಹನೇಹಳ್ಳಿಯಂಥ ಸಣ್ಣ ಹಳ್ಳಿಯಲ್ಲಿ ಹುಟ್ಟಿದ ನಾಗಪ್ಪ ಕೋಳಿಗಿರಿಯಣ್ಣನ ಕೇರಿಯಲ್ಲಿ ಬೆಳೆದು ಕೆಲಸದ ಸಲುವಾಗಿ ಮುಂಬೈಗೆ ವಲಸೆ ಬಂದಿದ್ದ. ಬಾಲ್ಯದ ಮತ್ತು ಪ್ರಾಥಮಿಕ ಶಾಲೆಯ ದಿನಗಳು ಸಂಕಷ್ಟ, ಅವಮಾನ, ಅಧೀರತೆಗಳಿಂದ ತುಂಬಿದ್ದರೂ ನಂತರ ಸಾರಸ್ವತ ಬ್ರಾಹ್ಮಣ ಸಮಾಜದ ಸ್ಕಾಲರ್‌ಶಿಪ್‌ನಲ್ಲಿ ರಸಾಯನಶಾಸ್ತ್ರದಲ್ಲಿ ಪರಿಣತಿ ಪಡೆದು ಹೈದ್ರಾಬಾದ್‌ನ ಮಲ್ಟಿನ್ಯಾಷನಲ್ ಕೆಮಿಕಲ್ ಕಂಪನಿಯೊಂದರಲ್ಲಿ ಉನ್ನತ ಹುದ್ದೆಗೇರಿದ್ದು ಮಹತ್ವದ ಸಾಧನೆ. ನಂತರ ಮುಂಬಯಿ ಶಾಖೆಗೆ ವರ್ಗಾವಣೆಯಾಗಿ ಇನ್ನೆರಡು ತಿಂಗಳಲ್ಲಿ ಹೆಚ್ಚಿನ ತರಬೇತಿಗಾಗಿ ಅಮೇರಿಕಾಗೆ ಹೋಗುವ ಅವನ ಕನಸು ನನಸಾಗುವಷ್ಟರಲ್ಲಿ ಧುತ್ತೆಂದು ಅಮಾನತಿನ ಆದೇಶ ಬಂದಿತ್ತು. ನಾಗಪ್ಪ ಒಬ್ಬ ಮೇಧಾವಿ, ನುರಿತ ಕೆಮಿಕಲ್ ಎಂಜಿನಿಯರ್, ಶ್ರಮಜೀವಿ, ನಿಷ್ಠಾವಂತ ಮತ್ತು ಸ್ವಾಭಿಮಾನಿ ಎಂಬುದು ಕಂಪನಿಯಲ್ಲಿ ಎಲ್ಲರಿಗೂ 'ತಿಳಿದ ವಿಷಯವೇ. ಕಂಪನಿಯ ಎಂ.ಡಿ. ಅವರಿಗಂತೂ ಅಚ್ಚುಮೆಚ್ಚು. ಒಮ್ಮೊಮ್ಮೆ ವಿಲಕ್ಷಣವೂ ಎನಿಸುತ್ತಾನೆ. ಹೆಚ್ಚಿನ ಸಂದರ್ಭಗಳಲ್ಲಿ ಅಂತರ್ಮುಖಿ. ತಾನಾಯಿತು ತನ್ನ ಕೆಲಸವಾಯಿತು ಎಂದು ಇದ್ದವ. ಬಿಡುವಿನ ವೇಳೆಯಲ್ಲಿ ಕನ್ನಡ ಸಾಹಿತ್ಯ ಬರವಣಿಗೆ ಮತ್ತು ಪುಸ್ತಕ ಓದುವಿಕೆ. ತನ್ನಂತಹವನಿಗೇ ಇಂತಹ ದುಷ್ಟ ಆದೇಶ ಬಂದಿತಲ್ಲ ಎಂದು ನೊಂದು, ಹೆದರಿ ಒಂದು ತಿಂಗಳ ರಜೆ ಬರೆಯುತ್ತಾನೆ. ರಜೆಯ ಮೊದಲೆರಡು ದಿನ ಅವನ ಮನದಲ್ಲಿ ದೊಡ್ಡ ಮಂಥನವೇ ನಡೆದಿರುತ್ತದೆ. ಏಕೆ ಹೀಗಾಯಿತು? ಎನ್ನುವುದು ಯಕ್ಷ ಪ್ರಶ್ನೆಯಾಗುತ್ತದೆ. ಆತ್ಮಾವಲೋಕನ ಮಾಡಿಕೊಳ್ಳುತ್ತಾ, ತನ್ನೊಳಗೆ ಏಳುತ್ತಿದ್ದ ಆತಂಕ, ಭಯ, ನಡುಕದ ಅಲೆಗಳನ್ನು ಅಡಗಿಸುವ ವ್ಯರ್ಥ ಪ್ರಯತ್ನ ಮಾಡುತ್ತಾ ಕೊನೆಗೆ ಹಾಳೆಯ ಮೇಲೆ ಅನಿಸಿದ್ದೆಲ್ಲವನ್ನು ಟಿಪ್ಪಣಿ ಮಾಡುತ್ತಾನೆ. ಲೇಖಕ ಯಶವಂತ ಚಿತ್ತಾಲರು ಪುಸ್ತಕದ ಒಂದನೇ ಭಾಗದ ಮೊದಲ ಕೆಲವು ಅಧ್ಯಾಯಗಳಲ್ಲಿ ನಾಗಪ್ಪನ ವಿಚಾರ ಮಂಥನಗಳನ್ನು ಸವಿಸ್ತಾರವಾಗಿ ಬರೆದಿದ್ದಾರೆ. ಇವು ಕೇವಲ ಭಾವನೆಗಳ ಏರಿಳಿತಗಳಷ್ಟೇ ಅಲ್ಲದೆ ವಾಸ್ತವಿಕ ಬದುಕಿಗೆ ಅನ್ವಯಿಸುವಂತಹ, ಬದುಕಿನ ಪಾಠ ಕಲಿಸುವಂತಹ ಸಾಲುಗಳು;

(1) "ಮನುಷ್ಯ ಜೀವನದಲ್ಲಿ ದಾರಿಗಳ ಕೂಟ ಸ್ಥಾನದಲ್ಲಿ ನಿಂತಾಗ, ಆಯ್ಕೆಯ ಸ್ವಾತಂತ್ರ್ಯ ತನಗಿದೆ ಎಂದುಕೊಂಡರೂ ಒಂದನ್ನು ಮಾತ್ರ ಆಯ್ಕೆ ಮಾಡಲು ಸಾಧ್ಯವಿರುವುದು. ನಮ್ಮ ಆಯ್ಕೆ ಬಾಹ್ಯ ಪ್ರೇರಣೆಗೆ ನಾವು ಕೊಟ್ಟ ಜವಾಬು ಅಲ್ಲ. ತದ್ವಿರುದ್ಧವಾಗಿ, ನಾವು ಕೊಟ್ಟ ಜವಾಬು ನಮಗಾದ ಪ್ರೇರಣೆಗೆ, ತನ್ಮೂಲಕ ನಮ್ಮ ವ್ಯಕ್ತಿತ್ವದ ಸಾಧ್ಯತೆಗಳಿಗೆ ಆಕಾರ ಕೊಡುತ್ತದೆ. ಹಾಗೆ ಪ್ರತ್ಯಕ್ಷವಾಗಿ ಹಿಡಿಯುವ ಕ್ರಿಯೆಯೇ ಮನುಷ್ಯನ ವ್ಯಕ್ತಿತ್ವವನ್ನು ನಿಶ್ಚಯಿಸುತ್ತದೆ".

(2) "ನಾವು ಬೇಡಿ ಬಂದಿರದ ಹುಟ್ಟು-ಸಾವುಗಳ ನಡುವಿನ ಬದುಕು ಮಾತ್ರ ನಮ್ಮ ವೈಯಕ್ತಿಕ ಜವಾಬ್ದಾರಿಯದು"

(3) "ಕೇಳುವವರಿಲ್ಲದಾಗಲೂ ಬರೀ ನಮ್ಮ ಮನಸ್ಸಿನ ಸಮಾಧಾನಕ್ಕಾಗಿ ಹಾಡಿಕೊಳ್ಳಬಲ್ಲೆವು. ತಿಂಗಳುಗಟ್ಟಲೆ ಕಲೆ ಹಾಕಿ ಸುಂದರ ಚಿತ್ರ ಬರೆದು ಯಾರಿಗೂ ತೋರಿಸದೇನೇ ಹರಿದೊಗೆಯಬಲ್ಲೆವು. ಆದರೆ ಶಬ್ದಗಳಲ್ಲಿ ಹಿಡಿದ ಅನುಭವ ಮಾತ್ರ ಇನ್ನೊಬ್ಬನಿಗೆ ಮುಟ್ಟದ ಹೊರತು ಮನಸ್ಸಿಗೇಕೆ ಸಮಾಧಾನವೆನಿಸುವುದಿಲ್ಲ!?"

(4) "ಈ ಜಗತ್ತಿನಲ್ಲಿ ಬರೀ ಪ್ರತಿಭೆಯಿದ್ದರಷ್ಟೇ ಸಾಲದು. ಅದನ್ನು ತನಗೆ ಅನ್ಯಾಯವಾಗದಂತೆ ಪ್ರಕಟಿಸುವ ಚಾತುರ್ಯವೂ ಬೇಕು. ದಕ್ಷತೆಯೂ ಬೇಕು."

.......ಇಂತಹವು ಈ ಪುಸ್ತಕದಲ್ಲಿ ಹಲವಾರು ಇವೆ.

ಕೆಲ ದಿನಗಳ ನಂತರ ಕಂಪನಿಯ ಡೆಪ್ಯೂಟಿ ಮ್ಯಾನೇಜಿಂಗ್ ಡೈರೆಕ್ಟರ್‌ರಾದ (ಡಿ.ಎಂ.ಡಿ.) ಫಿರೋಜ್ ಬಂದೂಕವಾಲರಿಂದ ಬಂದ ಪತ್ರದಲ್ಲಿ ಬರೆಯಲಾಗಿದ್ದ ಅಮಾನತಿಗೆ ಕಾರಣ ಓದಿದ ನಾಗಪ್ಪ ಬೆಚ್ಚಿ ಬೀಳುತ್ತಾನೆ. ಹಲವು ವಾರಗಳ ಹಿಂದೆ ಹೈದ್ರಾಬಾದ್‌ನಲ್ಲಿದ್ದ ಕಂಪನಿಯಲ್ಲಿ ನಡೆದ ಒಂದು ಬೆಂಕಿ ಅಪಘಾತ ಮತ್ತು ಅದರಲ್ಲಿ ಜೀವ

ಕಳೆದುಕೊಂಡ ಮೂವರು ಕೆಲಸಗಾರರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಗಪ್ಪನ ಪಾತ್ರವಿರುವುದರಿಂದ ತನಿಖೆಗೆ ಕರೆಯಲಾಗುತ್ತದೆ ಎಂದಿತ್ತು!

ತನ್ನ ಜೀವನದಲ್ಲಿ ಯಾವ ಬೆಂಕಿಯನ್ನು ಕಂಡರೆ ಅತಿ ಹೆಚ್ಚು ಭಯ ಬೀಳುತ್ತಿದ್ದನೋ ಅದೇ ಬೆಂಕಿ ಕೆಲಸದ ಸುತ್ತ ಸುತ್ತಿಕೊಂಡದ್ದನ್ನು ಮಾತ್ರ ತಡೆಯಲಾರದೆ ಹೋದ. ಒಂದು ಸಲ ಅವನ ಮನಸ್ಸು ತೀರಿಕೊಂಡ ತನ್ನ ಅಮ್ಮ, ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಮುಂಚೆ ಮಗನಿಗೆ ಬೆಂಕಿ ಹಚ್ಚಿ ಸಾವಿಗೆ ಶರಣಾದ ತನ್ನ ಅಪ್ಪ, ನಾಗಪ್ಪ ಚಿಕ್ಕವನಿದ್ದಾಗ ನಡೆದ ಈ ಬೆಂಕಿ ಅನಾಹುತದಿಂದ ಹೇಗೋ ತಪ್ಪಿಸಿಕೊಂಡದ್ದು ಇವೆಲ್ಲದರ ಮೇಲೆ ಹಾಗೆ ಹಾದು ಬಂತು.

ತಾನು ಮಾಡದ ತಪ್ಪಿನಲ್ಲಿ ಯಾರೋ ತನ್ನನ್ನು ಸಿಕ್ಕಿಸಲು ಪ್ರಯತ್ನಿಸುತ್ತಿರುವುದು ಅರಿವಾದ ಕೂಡಲೇ ಅದನ್ನು ಕಂಡು ಹಿಡಿಯಲು ಸಿದ್ಧನಾಗುತ್ತಾನೆ. ನಂತರದ ದಿನಗಳಲ್ಲಿ ಡಿ.ಎಂ.ಡಿ. ಫೀರೋಜ್‌ನನ್ನು ಸೇರಿದಂತೆ ಕಂಪನಿಯ ಇನ್ನೂ ಕೆಲವರು ಮತ್ತು ಬಾಲ್ಯದ ಸ್ನೇಹಿತನಾಗಿದ್ದ ಶ್ರೀನಿವಾಸ ಎಲ್ಲರೂ ಸೇರಿದಂತೆ ಇಡೀ ಒಂದು ತಂಡವೇ ಅವನ ಬೆನ್ನು ಹತ್ತಿ ಬೇಟೆಯಾಡುತ್ತಿರುವುದು ನಾಗಪ್ಪನಿಗೆ ಅರಿವಾಗುತ್ತದೆ. ಯಾರನ್ನು ನಂಬುವುದು, ಯಾರನ್ನು ಬಿಡುವುದು ಎಂದಾಗುತ್ತದೆ ಅವನ ಪರಿಸ್ಥಿತಿ.

ಇದಲ್ಲದೇ ಶ್ರೀನಿವಾಸನ ಕಡೆಯಿಂದ ಮತ್ತೊಂದು ಆಪಾದನೆ ಬರಸಿಡಿಲಿನಂತೆ ಬಂದೆರಗುತ್ತದೆ. ನಾಗಪ್ಪನ ತಂದೆ ಬ್ರಾಹ್ಮಣನಾದರೂ ತಾಯಿ ಕೆಳವರ್ಗಕ್ಕೆ ಸೇರಿದವಳು ಎನ್ನುವುದನ್ನು ಕಂಡು ಹಿಡಿದ ಶ್ರೀನಿವಾಸ ನಾಗಪ್ಪ ಸ್ಕಾಲರ್‌ಶಿಪ್‌ಗೆ ಅರ್ಹನಿರಲಿಲ್ಲ, ಸಮಾಜಕ್ಕೆ ಮೋಸ ಮಾಡಿದ್ದಾನೆ ಎಂದು ಗುಲ್ಲೆಬ್ಬಿಸುತ್ತಾನೆ. ಈ ಘಟನೆ ಹಿಂದಿನ ದಿನಗಳಲ್ಲಿದ್ದ ಜಾತೀಯತೆ ಸಮಸ್ಯೆಯನ್ನು ಬಿಂಬಿಸುತ್ತದೆ.

ಎಲ್ಲ ಕಡೆಯಿಂದಲೂ ವ್ಯವಸ್ಥಿತ ಸಂಚು ಮಾಡಿದ್ದ ಬೇಟೆಗಾರರ ತಂಡ ಏಕಕಾಲಕ್ಕೆ ಆಕ್ರಮಣ ಮಾಡಿದಾಗ ನಾಗಪ್ಪನಿಗೆ ತನ್ನ ಅಸ್ತಿತ್ವದ ಬೇರುಗಳನ್ನೇ ಅಲುಗಾಡಿಸಿದಂತಾಗುತ್ತದೆ. ತನ್ನನ್ನೇ ತಾನು ಸಂಶಯಪಡುವಂತಾಗುತ್ತದೆ. ಒಂದೊಂದೇ ಪ್ರಶ್ನೆಗೆ ಉತ್ತರ ಹುಡುಕುತ್ತಾ ಕೊನೆಗೆ ರಹಸ್ಯವನ್ನು ಬೇಧಿಸುತ್ತಾನೆ. ಅವನ ಸ್ವಭಾವದಲ್ಲಾಗುವ ಬದಲಾವಣೆ ಅವನಲ್ಲಿ ಧೈರ್ಯವನ್ನು ಗಟ್ಟಿಗೊಳಿಸುತ್ತದೆ. ಬೇಟೆಗಾರರ ತಂಡದ ಒಬ್ಬೊಬ್ಬರ ಜಾಡು ಹಿಡಿದು ಮಾತಿನಲ್ಲಿ ಆಟವಾಡಿಸುತ್ತಾನೆ. ತನಗೆ ತೊಂದರೆ ಕೊಡುವುದಕ್ಕಿಂತ ಅವರ ತಪ್ಪುಗಳನ್ನು ಮುಚ್ಚಿಹಾಕಲು ಬೇಕಾದ ತನ್ನ ಒಂದು ಸಹಿಗೆ ಇಷ್ಟೆಲ್ಲಾ ನಾಟಕ ಎಂದರಿತಾಗ ನಾಗಪ್ಪ ನಿರ್ಲಿಪ್ತನಾಗುತ್ತಾನೆ. ಪಿತೂರಿಯನ್ನು ಬಯಲಿಗೆಳೆಯುತ್ತಾನೆ. ಕೊನೆಗೂ ಸಹಿ ಮಾಡುವುದಿಲ್ಲ.



**ಯಶವಂತ ಚಿತ್ತಾಲ**

'ಶಿಕಾರಿ' ಕಥೆಯನ್ನು ಆರು ಭಾಗಗಳಲ್ಲಿ ಬರೆಯಲಾಗಿದೆ. ಭಾಗ ಐದು ಓದುವಾಗಲಂತೂ ಮೈನವಿರೇಳುತ್ತದೆ. ನಾಗಪ್ಪನ "ಇನ್‌ವೆಸ್ಟಿಗೇಷನ್ ತ್ರೂ ಇನ್ಟರ್‌ವ್ಯೂ" ಅಂತೂ ರೋಮಾಂಚನಕಾರಿಯಾಗಿದೆ. ಸಾಧಾರಣವಾಗಿ ಕಾಫಿ, ತಿಂಡಿಯ ಜೊತೆ ನಡೆಯುವ 'ಇನ್ಟರ್‌ವ್ಯೂ' ಬೀಯರ್‌ನ ಜೊತೆ ನಡೆದದ್ದು ವಿಭಿನ್ನ. ನಾಗಪ್ಪನ ಬಾಲ್ಯದ ಕಹಿ ಘಟನೆಗಳನ್ನು ಹೆಣೆದು ಮಾಡಿದ ದಸ್ತೂರನ (ನಾಗಪ್ಪನನ್ನು ಇನ್ಟರ್‌ವ್ಯೂ ಮಾಡಿದ ತನಿಖಾಧಿಕಾರಿ) ಕುತಂತ್ರವಂತೂ ಯಮಭಯಂಕರ. ಆದರೆ ನಾಗಪ್ಪ ಬಲೆಗೆ ಬೀಳಲೇ ಇಲ್ಲ. ಸಂದರ್ಶನದಲ್ಲಿ ಲೇಖಕರು ಬಳಸಿರುವ

ಮನೋ ವಿಜ್ಞಾನ ಪರಿಕಲ್ಪನೆಗಳು ಆಸಕ್ತಿದಾಯಕ ಮತ್ತು ಕುತೂಹಲಕಾರಿಯಾಗಿವೆ.

ಕಥೆಯ ಕೊನೆಯಲ್ಲಿ ಅವನನ್ನು ಬಹುವಾಗಿ ಮೆಚ್ಚಿಕೊಂಡಿದ್ದ ಎಂ.ಡಿ.ಯವರು ನಾಗಪ್ಪನಿಗೆ ಉದ್ಯೋಗದಲ್ಲಿ ಬಡ್ತಿ ಮತ್ತು ಅಮೇರಿಕಾ ಪ್ರವಾಸದ ಪ್ರಸ್ತಾಪವಿಟ್ಟರೂ ಅವನು ರಾಜೀನಾಮೆ ಹಿಂಪಡೆಯಲಿಲ್ಲ. ಕಾರಣ ಎಂ.ಡಿ.ಯವರು ಡಿ.ಎಂ.ಡಿ. ಫಿರೋಜ್‌ನ ಕಾಲೆಳೆಯಲು ತನ್ನನ್ನು ಉಪಯೋಗಿಸಿಕೊಂಡಿದ್ದನ್ನು ನಾಗಪ್ಪ ಚೆನ್ನಾಗಿ ಅರಿತಿದ್ದ. [ಈಗ ದಿಗ್ಭ್ರಮೆಗೊಳ್ಳುವ ಸರದಿ ಓದುಗರದು].

ಮೇಲ್ನೋಟಕ್ಕೆ ನಾಗಪ್ಪ ಸೋತಿದ್ದರೂ ನಿಜವಾದ ಅರ್ಥದಲ್ಲಿ ಗೆದ್ದಿದ್ದ! 14 ದಿನಗಳ ಯಾತನೆಯ ಬಳಿಕ ಮಾನವ ನಡವಳಿಕೆಯ ಹಿಂದಿನ ಉದ್ದೇಶಗಳನ್ನು ಊಹಿಸುವಲ್ಲಿ ಪರಿಣಿತನಾಗಿದ್ದ. ಮುಂಚಿನಂತಿರಲಿಲ್ಲ. ಅವನು "ರಾಜೀನಾಮೆ ಕೊಟ್ಟದ್ದು ಬರೀ ನೌಕರಿಗಲ್ಲ. ನಮ್ಮ ಸ್ವಾರ್ಥಕ್ಕಾಗಿ, ಭಯಗಳಿಗಾಗಿ, ಒಬ್ಬರನ್ನೊಬ್ಬರು ಕೇವಲ ಉಪಯೋಗಿಸಿಕೊಳ್ಳುವಂತೆ ಮಾಡುವ ಈ ವ್ಯವಹಾರಿಕ ಲೋಕಕ್ಕೆ" [ಕಾದಂಬರಿಯಲ್ಲಿನ ಈ ಪುಟ ಓದುವಾಗ ಅಕ್ಷರಗಳು ಮಂಜಾದದ್ದು ನನ್ನರಿವಿಗೆ ಬಂತು]. ಕಥಾನಾಯಕರ ನಿಜವಾದ ಮನುಷ್ಯ ಪ್ರೀತಿಯನ್ನು ಹುಡುಕಿಕೊಂಡು ಹೊರಟಿದ್ದ!! ....... "ಇನ್ನೂ ಕಂಡಿರದ ಅಣ್ಣನನ್ನು..... ಕಾಣೆಯಾದ ತಂಗಿಯನ್ನು ಹುಡುಕಿ ತೆಗೆಯಲು".

'ಶಿಕಾರಿ' ಒಂದು ಜನಪ್ರಿಯ ಕಾದಂಬರಿ, ಕಥೆಯ ಉದ್ದಕ್ಕೂ ಓದುಗರ ಮನಸ್ಸನ್ನು ಲೇಖಕರು ಚಿಂತನೆಗೆ ಒರೆ ಹಚ್ಚುತ್ತಾರೆ. ಉಪಯೋಗಿಸಿರುವ ಬಹು ಭಾಷಾ ಪದಗಳು ಕಥೆಯನ್ನು ಸಹಜ ಮತ್ತು ಬರವಣಿಗೆಯನ್ನು ಸೌಹಾರ್ದಯುತವಾಗಿಸಿವೆ. ಉತ್ತರ ಕನ್ನಡ ಭಾಷೆಯ ಬೈಗುಳಗಳು ಓದುಗರ ಭಾವತೀವ್ರತೆಯನ್ನು ನಿಯಂತ್ರಣದಲ್ಲಿಡುತ್ತವೆ. ಬೈಗುಳಗಳನ್ನು ಕೋಡ್ ನಂಬರ್‌ನಿಂದ ನಯವಾಗಿ ಬಳಸಲಾಗಿದೆ. ಒಂದು ರೀತಿಯ ತೆಳು ಹಾಸ್ಯಮಿಳಿತವಾಗಿದೆ. ಅಲ್ಲಲ್ಲಿ ಮುಂಬಯಿ ನಗರದ ಗಲ್ಲಿಗಳಲ್ಲಿನ ಜನಜೀವನ, ನಿತ್ಯ ಚಟುವಟಿಕೆಗಳನ್ನು ಕಣ್ಣಿಗೆ ಕಟ್ಟುವಂತೆ ಶಬ್ದಗಳಲ್ಲಿ ಚಿತ್ರಿಸಲಾಗಿದೆ. ಲೇಖಕರು ಅಲ್ಲಲ್ಲಿ ನೆನೆದಿರುವ ಟಾಲ್‌ಸ್ಟಾಯ್, ಎರಿಕ್, ಕ್ಯಾಮಸ್, ವಿಲ್ಯಮ್ ಜೇಮ್ಸ್ ಇವರ ಸಾಲುಗಳು ಓದುಗರ ಮನಸ್ಸಿನ ಮೇಲೆ ಮೋಡಿ ಮಾಡುತ್ತವೆ. ಕಥೆಯಲ್ಲಿನ ಸಂದರ್ಭ/ಘಟನೆಗಳಲ್ಲಿ ವ್ಯಕ್ತವಾಗಿರುವ ಮನುಷ್ಯನ ಸ್ವಭಾವವನ್ನು ಮನೋವಿಜ್ಞಾನದ ಹಿನ್ನೆಲೆಯಲ್ಲಿ ವಿಶ್ಲೇಷಿಸಿರುವುದು ಅನನ್ಯವಾಗಿದೆ. ಕಾರ್ಯಸ್ಥಳದಲ್ಲಿ ಎಷ್ಟು ಮೈಯೆಲ್ಲಾ ಕಣ್ಣಾಗಿದ್ದರೂ ಸಾಲದು. ಮನುಷ್ಯ ಭಯದ ನೆರಳಿನಿಂದ ಹೊರಬರುವ ಬಗೆ ಹೇಗೆ ಎನ್ನುವುದನ್ನು ತಿಳಿಸಿದ್ದಾರೆ. ತಂದೆ, ತಾಯಿ, ಇತರೆ ಕೌಟುಂಬಿಕ ಸಂಬಂಧಗಳ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯಲಾಗಿದೆ.

ಒಟ್ಟಾರೆ ಪ್ರತಿಯೊಬ್ಬರೂ ಓದಲೇಬೇಕಾದ ಪುಸ್ತಕ 'ಶಿಕಾರಿ'. ಒಮ್ಮೆ ಓದಿದರೆ ಇನ್ನೊಮ್ಮೆ ಓದಬೇಕು ಎಂದು ಎನಿಸದೇ ಇರದು!!

**ಕನ್ನಡ ಬಳಸಿ, ವೈದ್ಯ ಸಾಹಿತ್ಯ ಬೆಳೆಸಿ, ಚಂದಾದಾರರಾಗಿ ಪ್ರೋತ್ಸಾಹಿಸಿ**

೨೦೨೪ರ ಜನವರಿಯಿಂದ ೨೦೨೬ ಡಿಸೆಂಬರ್‌ವರೆಗೆ (೩ ವರುಷಗಳು, ಒಟ್ಟು ೧೮ ಸಂಚಿಕೆಗಳು) ಚಂದಾದಾರರಾಗಲು ರೂ. ೨೦೦೦ ಪಾವತಿಸಬೇಕು. ಈ ಕೆಳಗೆ ನೀಡಲಾದ ಖಾತೆಗೆ ಅಂತರ್ಜಾಲದ ಮುಖೇನ ಪಾವತಿಸಿ, ನಂತರ ನಿಮ್ಮ ವಿಳಾಸವನ್ನು ಮತ್ತು ರಸೀದಿಯನ್ನು ೯೪೪೮೧೫೩೫ / ೯೪೪೮೨೧೫೪೦ ನಂಬರ್‌ಗೆ ವಾಟ್ಸಾಪ್ ಕಳುಹಿಸಿ.






**ಡಾ. ಉಷಾ ಎಂ. ಜಿ.**
ವಿಭಾಗೀಯ ಸಂಪಾದಕರು


# ಇತ್ತೀಚಿಗೆ ಬಿಡುಗಡೆಯಾದ ವೈದ್ಯರ ಕೃತಿಗಳು




| | |
|---|---|
| ಕೃತಿಯ ಹೆಸರು | : ನಿಗೂಢ ಕೊಲೆಗಳು |
| ಲೇಖಕರ ಹೆಸರು | : ಡಾಕ್ಟರ್ ಬಿ. ಸೂರ್ಯಕುಮಾರ್, ಮಡಿಕೇರಿ ೫೭೧೨೦೧ |
| ಕೃತಿಯ ಬಗ್ಗೆ | : ಲೇಖಕರ ವೈದ್ಯಜೀವನದಲ್ಲಿ ಕಂಡಂತಹ ಕೆಲವು ಕೊಲೆಗಳ ಮತ್ತು ಪ್ರಪಂಚದ ಕೆಲವು ಸರಣಿ ಕೊಲೆಗಳ ಬಗ್ಗೆ ಕಥನ. |
| ಪ್ರಕಾಶಕರ ಹೆಸರು | : ಅಮಿತ ಪ್ರಕಾಶನ, ಮೈಸೂರು |
| ಒಟ್ಟು ಪುಟಗಳು | : ೧೫೨ |
| ಪುಸ್ತಕದ ದರ | : ರೂ. ೧೯೦/- |





| | |
|---|---|
| ಕೃತಿಯ ಹೆಸರು | : ವೈದ್ಯಕೀಯ ಕೈಪಿಡಿ. |
| ಲೇಖಕರ ಹೆಸರು | : ಡಾಕ್ಟರ್ ಬಿ. ಸೂರ್ಯಕುಮಾರ್, ಮಡಿಕೇರಿ ೫೭೧೨೦೧ |
| ಕೃತಿಯ ಬಗ್ಗೆ | : ಸುಲಭ ಕನ್ನಡದಲ್ಲಿ ಸಾಮಾನ್ಯರಿಗೆ ಅರ್ಥವಾಗುವಂತೆ ೯೦ ಸಾಮಾನ್ಯ ರೋಗಗಳ ಕಿರು ಪರಿಚಯ. |
| ಪ್ರಕಾಶಕರ ಹೆಸರು | : ಪೆನ್ಸಿಲ್ ಪ್ರಕಾಶನ, ಮೈಸೂರು |
| ಒಟ್ಟು ಪುಟಗಳು | : ೩೫೬ |
| ಪುಸ್ತಕದ ದರ | : ರೂ. ೪೨೦/- |




ಕೃತಿಯ ಹೆಸರು : ಕ್ಯಾನ್ಸರ್‌ಗೆ ಆನ್ಸರ್
ಲೇಖಕರ ಹೆಸರು : ಡಾ. ಅಪರ್ಣಾ ಶ್ರೀವತ್ಸ
ಶಿವಮೊಗ್ಗ – ೫೭೭೨೦೬
ಕೃತಿಯ ಬಗ್ಗೆ : ಅತ್ಯಾಧುನಿಕ ಕ್ಯಾನ್ಸರ್ ಚಿಕಿತ್ಸೆಗಳಾದ ಕೀಮೋಥೆರಪಿ, ರೇಡಿಯೋಥೆರಪಿ, ರೊಬಾಟಿಕ್ ಸರ್ಜರಿ, ಟಾರ್ಗೆಟ್ ಥೆರಪಿ, ಇಮ್ಯುನೋಥೆರಪಿ, ಬೋನ್ ಮ್ಯಾರೋ ಟ್ರಾನ್ಸ್‌ಪ್ಲಾಂಟ್ ಬಗ್ಗೆ ಸವಿವರವಾಗಿ ತಿಳಿಸಿದ್ದಾರೆ. ಕ್ಯಾನ್ಸರ್ ಚಿಕಿತ್ಸೆ ಪಡೆಯುವಾಗ ಸೇವಿಸಬೇಕಾದ ಆಹಾರ ಮತ್ತು ಜೀವನಶೈಲಿ, ಕ್ಯಾನ್ಸರ್ ಮರುಕಳಿಸುವುದನ್ನು ತಡೆಗಟ್ಟುವ ವಿಧಾನವನ್ನು ಸೂಚಿಸಿದ್ದಾರೆ.
ಪ್ರಕಾಶನದ ಹೆಸರು : ಸಾವಣ್ಣ ಎಂಟರ್ ಪ್ರೈಸಸ್,
ಬೆಂಗಳೂರು
ಒಟ್ಟು ಪುಟಗಳು : ೧೭೨
ಪುಸ್ತಕದ ದರ : ರೂ. ೨೦೦/–




ಕೃತಿಯ ಹೆಸರು : ವೈದ್ಯವೃತ್ತಿಯ ನೀತಿ ಮತ್ತು ತತ್ವ
ಮೂಲ ಲೇಖಕರ ಹೆಸರು : ಡಾ. ಎಂ. ಶಾಂತಾರಾಂ ಶೆಟ್ಟಿ
ಕನ್ನಡಕ್ಕೆ : ಡಾ. ನಾ. ಸೋಮೇಶ್ವರ, ಬೆಂಗಳೂರು
ಕೃತಿಯ ಬಗ್ಗೆ : ವೈದ್ಯ ವೃತ್ತಿಯ ನೈತಿಕತೆ ಮತ್ತು ತಾತ್ವಿಕತೆ ಹಾಗೂ ಒಳ್ಳೆಯ ವೈದ್ಯನಾಗುವುದು ಹೇಗೆ ಎನ್ನುವುದರ ಕುರಿತು ಸ್ವಚಿಂತನೆ ಹಾಗೂ ಅನುಭವ ಬರಹ.
ಪ್ರಕಾಶಕರ ಹೆಸರು : ಬಹುರೂಪಿ ಪ್ರಕಾಶನ, ಬೆಂಗಳೂರು
ಒಟ್ಟು ಪುಟಗಳು : ೧೨೮
ಪುಸ್ತಕದ ದರ : ರೂ. ೨೦೦/–




ಕೃತಿಯ ಹೆಸರು : ಆರೋಗ್ಯ ಸಂಹಿತೆ – ಸ್ವಸ್ಥ ಜೀವನಕ್ಕೆ ಸರಳ ಕೈಪಿಡಿ
ಲೇಖಕರ ಹೆಸರು : ಡಾ. ನಾ. ಸೋಮೇಶ್ವರ. ಬೆಂಗಳೂರು
ಕೃತಿಯ ಬಗ್ಗೆ : ಸ್ವಾಸ್ಥ್ಯ ಸಂರಕ್ಷಣೆಯ ಮೂಲಭೂತ ಮಾಹಿತಿ.
ಪ್ರಕಾಶಕರ ಹೆಸರು : ಅಯೋಧ್ಯಾ ಪಬ್ಲಿಕೇಶನ್
ಒಟ್ಟು ಪುಟಗಳು : ೨೦೭
ಪುಸ್ತಕದ ದರ : ರೂ. ೨೦೦/–



### ವೈದ್ಯಕೀಯ ಮತ್ತು ಕಾನೂನು

# ರೋಗಿಯ ಹಕ್ಕುಗಳು

**ಡಾ. ಶಿವಕುಮಾರ ಕುಂಬಾರ**
ಅರಿವಳಿಕೆ ತಜ್ಞರು ಮತ್ತು ವೈದ್ಯಕೀಯ
ಕಾನೂನು ಸಲಹೆಗಾರರು, ಲೇಖಕರು ಮತ್ತು ವಿಭಾಗೀಯ ಸಂಪಾದಕರು, ಧಾರವಾಡ

ಪ್ರತಿಯೊಬ್ಬ ವ್ಯಕ್ತಿಯೂ ಒಂದಲ್ಲ ಒಂದು ಸಮಯದಲ್ಲಿ ರೋಗಿಯಾಗುತ್ತಾನೆ ಆರೋಗ್ಯದಿಂದ ಇದ್ದು ಹಾಗೇ ಇಡೀ ಜೀವಮಾನ ಮರಣ ಹೊಂದದವರು ಇಲ್ಲವೆಂದೇ ಹೇಳಬಹುದು. ಮನುಷ್ಯ ತನ್ನ ಜೀವಿತ ಕಾಲದಲ್ಲಿ ವೈದ್ಯರನ್ನು ಕಾಣಲೇಬೇಕಾಗುತ್ತದೆ. ಹಾಗಾಗಿ ರೋಗಿಯಾದವನಿಗೂ ಕೆಲವು ಹಕ್ಕುಗಳು ಇರಬೇಕಾಗುತ್ತದೆ. ಆದರೆ ಇದುವರೆಗೂ ರೋಗಿಗಳ ಹಕ್ಕುಗಳು ಯಾವುವು ಎಂಬುದು ನಿಖರವಾಗಿ ನಿರೂಪಣೆಯಾಗಿಲ್ಲ. ನ್ಯಾಯಾಲಯಗಳೂ ಕೂಡ ಅವನ್ನು ವಿಷದ ಪಡಿಸಿಲ್ಲ.

ವಿಶ್ವದೆಲ್ಲಡೆ ಗ್ರಾಹಕ ಸಂಸ್ಥೆಗಳು, ಆರೋಗ್ಯ ಕ್ಷೇತ್ರದಲ್ಲಿ ದುಡಿಯುತ್ತಿರುವ ಸ್ವಯಂ ಸೇವಾ ಸಂಸ್ಥೆಗಳು ರೋಗಿಗಳ ಹಕ್ಕುಗಳ ಬಗ್ಗೆ ವಿಶೇಷ ಆಸಕ್ತಿ ವಹಿಸಿ ಸರ್ಕಾರಗಳು ಇದರತ್ತ ಗಮನಹರಿಸುವಂತೆ ಮಾಡಿವೆ. ನಾನಾ ವೇದಿಕೆಗಳಲ್ಲಿ, ಸಭೆಗಳಲ್ಲಿ ಹಾಗೂ ವಿಚಾರಗೋಷ್ಠಿಗಳಲ್ಲಿ ರೋಗಿಗಳ ಹಕ್ಕುಗಳನ್ನು ಕುರಿತು ಚರ್ಚೆಗಳಾಗಿವೆ. ಕರಡು ಮಸೂದೆಯನ್ನು ತಯಾರಿಸಿದೆ. ರೋಗಿಯ ಹಕ್ಕುಗಳಿಗೆ ಮಾನ್ಯತೆ ನೀಡಬೇಕೆಂದು ಒತ್ತಾಯಿಸಿ, ಈಗಲೂ ಆಂದೋಲನ ನಡೆಯುತ್ತಿದೆ.

ಈವರೆಗೆ ಪ್ರಕಟಗೊಂಡಿರುವ ದಾಖಲೆಗಳ ಆಧಾರದ ಮೇಲೆ ಹಾಗೂ ನಮ್ಮ ದೇಶದ ಪರಿಸ್ಥಿತಿಗೆ ಅನುಗುಣವಾಗಿ, ರೋಗಿಯ ಹಕ್ಕುಗಳನ್ನು ಪಾಂಡಿಚೇರಿಯ ಜಿಪ್‌ಮರ್ (JIPMER) ಸಂಸ್ಥೆ ಕ್ರೋಡೀಕರಿಸಿ, ರೋಗಿಯ ಹಕ್ಕುಗಳ ಪಟ್ಟಿಯನ್ನು ತಯಾರಿಸಿದೆ. ಮಲೇಶಿಯಾದಲ್ಲಿರುವ ಅಂತರರಾಷ್ಟ್ರೀಯ ಬಳಕೆದಾರರ ಸಂಸ್ಥೆಗಳ ಒಕ್ಕೂಟ (Consumers International) ರೋಗಿಯ ಹಕ್ಕುಗಳನ್ನು ಕುರಿತ ಆಂದೋಲನ ಆರಂಭಿಸಿದೆ. ಈ ಸಂಸ್ಥೆ ಸೂಚಿಸಿರುವ ರೋಗಿಯ ಹಕ್ಕುಗಳನ್ನು ಇಲ್ಲಿ ನೀಡಲಾಗಿದೆ :

೧) ಪ್ರತಿಯೊಬ್ಬ ನಾಗರಿಕನಿಗೂ ಪ್ರಾಥಮಿಕ ಆರೋಗ್ಯ ಸೌಲಭ್ಯವಿರಬೇಕು. ಎಲ್ಲ ರಾಷ್ಟ್ರ ಸರ್ಕಾರಗಳೂ ಎಲ್ಲರಿಗೂ ಆರೋಗ್ಯ ಸೌಲಭ್ಯ ಒದಗಿಸಲು ಕ್ರಮಗಳನ್ನೂ ಕೈಗೊಳ್ಳಬೇಕು.

೨) ಯಾವುದೇ ದೇಶದಲ್ಲಾಗಲಿ ರೋಗಿಯನ್ನು ಜಾತಿ, ಮತ, ಕುಲ, ಲಿಂಗ, ಭಾಷೆಯ ಆಧಾರದ ಮೇಲೆ ಭೇದ ಭಾವದಿಂದ ಕಾಣಬಾರದು.

೩) ಪ್ರತಿಯೊಬ್ಬ ರೋಗಿ ತನಗೆ ಬೇಕಾದ ಎಲ್ಲ ಮಾಹಿತಿಯನ್ನು ಪಡೆಯುವಂತಿರಬೇಕು. ರೋಗಿಯಾದವನಿಗೆ ಚಿಕಿತ್ಸೆಯಲ್ಲಿ ಭಾಗವಹಿಸಲು ಈ ಮಾಹಿತಿ ಅತ್ಯಗತ್ಯ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ, ಮಾಹಿತಿ ಹೊಂದಿರುವ ರೋಗಿ ಬಹುಬೇಗ ಚಿಕಿತ್ಸೆಗೆ ಪ್ರತಿಕ್ರಿಯೆ ನೀಡುತ್ತಾನೆ. ರೋಗವೂ ಗುಣವಾಗುತ್ತದೆ.

೪) ರೋಗಿಯಾದವನು ತನಗೆ ಇಷ್ಟವಾದ ವೈದ್ಯರನ್ನು ಆರಿಸಿಕೊಳ್ಳುವ ಹಕ್ಕು ಹೊಂದಿರಬೇಕು. ಅಲ್ಲದೆ ತನಗೆ ಇಷ್ಟವಾದ ಅಥವಾ ನಂಬಿಕೆ ಇರುವ ವೈದ್ಯ ಶಾಸ್ತ್ರದ ಪ್ರಕಾರ ಚಿಕಿತ್ಸೆ ಪಡೆಯುವ ಹಕ್ಕು ಹೊಂದಿರಬೇಕು.




ಉದಾಹರಣೆಗೆ, ಅಲೋಪತಿ, ಆಯುರ್ವೇದ, ಹೋಮಿಯೋಪತಿ ಇತ್ಯಾದಿ.

೫) ರೋಗಿಯಾದವನು ಗೋಪ್ಯತೆಯ ಹಕ್ಕನ್ನು ಪಡೆದಿದ್ದಾನೆ. ಅವನ ರೋಗದ ವಿಷಯ, ಚಿಕಿತ್ಸೆಯ ವಿಷಯ, ದೇಹಸ್ಥಿತಿ ಮುಂತಾದವುಗಳನ್ನು ವೈದ್ಯನಾದವನು ಯಾರಿಗೂ ಬಹಿರಂಗಪಡಿಸಬಾರದು ಎಂಬುದು ಇದರ ಸಾರ. ಈ ನಿಯಮಕ್ಕೆ ಕೆಲವು ವಿನಾಯಿತಿಗಳಿವೆ.

೬) ಚಿಕಿತ್ಸೆಯ ವಿಷಯದಲ್ಲಿ ಅನಾಹುತಗಳು, ಲೋಪದೋಷಗಳು ಉಂಟಾದರೆ, ದೂರು ಸಲ್ಲಿಸಿ, ಅದಕ್ಕೆ ಸೂಕ್ತ ಪರಿಹಾರ ಪಡೆಯುವ ಸೌಲಭ್ಯ ಹಾಗೂ ಹಕ್ಕು ರೋಗಿಗೆ ಇರಬೇಕು.

**ರೋಗಿಯ ಜವಾಬ್ದಾರಿಗಳು :**

೧) ಚಿಕಿತ್ಸೆಗೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನು ಕಾಗದ ಪತ್ರಗಳನ್ನು ಜಾಗರೂಕತೆಯಿಂದ ಇಡತಕ್ಕದ್ದು.

೨) ವೈದ್ಯರು ಬರೆದುಕೊಟ್ಟ ಚೀಟಿ, ಔಷಧ ಖರೀದಿಸಿದ ರಸೀದಿ ಇತ್ಯಾದಿಯ ಪ್ರತಿಯನ್ನು ಜೋಪಾನವಾಗಿ ಇಟ್ಟಿರಬೇಕು.

೩) ವೈದ್ಯರು ಹೇಳಿದಂತೆ ಔಷಧ ಸೇವಿಸಬೇಕು.

೪) ವೈದ್ಯರು ಪವಾಡ ಪುರುಷರಲ್ಲ ಅವರೂ ಮಾನವರೆಂಬ ಸತ್ಯ ತಿಳಿದಿರಲಿ.

೫) ಔಷಧಗಳಿಂದ ಉಂಟಾಗುವ ಅಡ್ಡಪರಿಣಾಮದ ಬಗ್ಗೆ ಗಾಬರಿಯಾಗಬೇಡಿ ಕೂಡಲೆ ವೈದ್ಯರನ್ನು ಸಂಪರ್ಕಿಸಿ.

೬ ವೈದ್ಯರು ಯಾವ ಸಮಯದಲ್ಲಿ ದೊರೆಯುತ್ತಾರೆ ಎಂದು ತಿಳಿದುಕೊಂಡು ಆ ನಂತರ ಆಸ್ಪತ್ರೆಗೆ ತೆರಳಿ.

೭) ವೈದ್ಯರ ಬಳಿ ಹೋಗುವಾಗ ಎಲ್ಲ ಬಂಧು ಬಳಗದವರನ್ನು ಕರೆದುಕೊಂಡು ಹೋಗಬೇಡಿ. ಒಬ್ಬರು ಅಥವಾ ಇಬ್ಬರು ಸಾಕು. ಆ ಇಬ್ಬರು ಸಹ ರೋಗಿಯ ವಿಷಯ ತಿಳಿದವರಾಗಿರಬೇಕು.

೮) ವೈದ್ಯರ ಬಳಿ ಸುಳ್ಳು ಹೇಳಬೇಡಿ. ಹಾಗೂ ನಿಮ್ಮ ರೋಗವನ್ನು ವೈಭವೀಕರಿಸಬೇಡಿ.

೯) ನಿಮಗೆ ಯಾವ ಔಷಧಿಗೆ ಅಲರ್ಜಿ ಇದೆ ಎಂಬುದನ್ನು ವೈದ್ಯರಿಗೆ ತಿಳಿಸಿ.

೧೦) ಪರೀಕ್ಷೆ ನಡೆಸುವಾಗ ವೈದ್ಯರೊಂದಿಗೆ ಸಂಪೂರ್ಣವಾಗಿ ಸಹಕರಿಸಿ.



**ಡಾ. ಲಕ್ಷ್ಮೀ ನಾರಾಯಣ ಗುಡೂರ್**
ಅಂಗಾಂಶ ರೋಗನಿದಾನ ಶಾಸ್ತ್ರ,
ಪ್ರೆಸ್ಟೆನ್

ಅನಿವಾಸಿ ಲೋಕ

# ನಾವೂ ಕಳ್ಳನನ್ನು ಹಿಡಿದೆವು!



**ಡಾ. ರಾಮಶರಣ ಎಲ್**
ವಿಭಾಗೀಯ ಸಂಪಾದಕರು

(ಲಕ್ಷ್ಮೀನಾರಾಯಣ ಗುಡೂರ. ಹುಟ್ಟಿದ್ದು ಬೆಳೆದದ್ದು ಉತ್ತರ ಕರ್ನಾಟಕದಲ್ಲಿ, ಅದರಲ್ಲಿಯ ಹೆಚ್ಚು ಭಾಗ ಕಲಬುರ್ಗಿಯಲ್ಲಿ. ಪುಣೆಯಲ್ಲಿ ಎಂಡಿ ಯ ನಂತರ ೪ ವರ್ಷ ವೆಲ್ಲೂರು, ಚೆನ್ನೈಗಳಲ್ಲಿ ಕೆಲಸ. ೨೦೦೨ರಿಂದ ಇಂಗ್ಲೆಂಡಿನಲ್ಲಿ ವಾಸ. ವೃತ್ತಿಯಲ್ಲಿ ಅಂಗಾಂಶ ರೋಗ ನಿದಾನ ಶಾಸ್ತ್ರಜ್ಞ (Histopathologist). ಚಿತ್ರಕಲೆ, ಛಾಯಾಗ್ರಹಣ, ಕವನದ ಹವ್ಯಾಸವಿದೆ)

ನಾನಾಗ ಹತ್ತನೆಯ ತರಗತಿಯಲ್ಲಿದ್ದೆ, ನನ್ನ ಸೋದರತ್ತೆಯ ಮಗ ಮುರಲಿ ಪಿಯುಸಿ ೧ನೇ ವರ್ಷ. ಅಜ್ಜಿ–ತಾತನ ಮನೆಯಲ್ಲಿ ನಾನು, ಮುರಲಿ ಇಬ್ಬರೂ ಕಲಬುರ್ಗಿಯಲ್ಲಿ ಅಜ್ಜಿ–ತಾತನ ಮನೆಯಲ್ಲಿದ್ದೆವು. ನಮ್ಮ ಮನೆಯಂಗಳದಲ್ಲಿ ಹಲವಾರು ಹಣ್ಣಿನ, ಹೂವಿನ ಗಿಡಗಳು ಇದ್ದು, ಕರಿಬೇವು, ಕಿರುನೆಲ್ಲಿಕಾಯಿ, ಪಾರಿಜಾತದ ಹೂಗಳು ಇತ್ಯಾದಿ ಯಥೇಚ್ಛ ಬೆಳೆಯುತ್ತಿದ್ದವು. ನೆಲ್ಲಿಕಾಯಂತೂ ಗಿಡಮುಟ್ಟಿದರೆ ಸಾಕು ಆಲಿಕಲ್ಲಿನ ಮಳೆಬಂದಂತೆ ನಮ್ಮ ತಲೆಯ ಮೇಲೆ ಉದುರುತ್ತಿದ್ದವು. ನಮ್ಮ ಮನೆಯಿದ್ದ ಜಾಗದ ಸುತ್ತಮುತ್ತ ಹಲವಾರು ಶಾಲೆಗಳಿದ್ದು, ಹುಡುಗರು ಹೋಗುವಾಗ, ಬರುವಾಗ, ಮಧ್ಯಂತರದಲ್ಲಿ ನಮ್ಮ ಮನೆಗೆ ಬಂದು ಅಜ್ಜಿ–ತಾತನನ್ನು ಕಾಡಿ–ಬೇಡಿ ನೆಲ್ಲಿಕಾಯಿ ಆಯ್ದುಕೊಂಡೊಯ್ಯಲು ಬರುತ್ತಿದ್ದರು. ನೆಲ್ಲಿಕಾಯಿಯ ಜೊತೆಗೆ, ಪಕ್ಕದಲ್ಲಿದ್ದ ನಿಂಬೆಹಣ್ಣು, ಕರಿ ಬೇವನ್ನೂ, ಕೆಲವರು ಹೇಳದೇ ಕೇಳದೆ ಕಿತ್ತಿಕೊಂಡು ಹೋಗುವವರೂ ಇದ್ದರು. ಆದರೂ ಅಜ್ಜಿ–ತಾತಯಾರಿಗೂ ಇಲ್ಲವೆಂದದ್ದು ನಾನು ನೋಡಿರಲೇ ಇಲ್ಲ; ನೀವಿಬ್ಬರೇ ಇರುವಾಗ (ಇಬ್ಬರಿಗೂ ೭೦+ ವಯಸ್ಸು, ಅಜ್ಜಿಯ ಬೆನ್ನು ಬಗ್ಗಿ ಮುಖ ನೆಲಮುಟ್ಟುತ್ತಿತ್ತು) ಯಾರನ್ನೂ ಮನೆಯೊಳಗೆ ಬಿಡಬೇಡಿ ಅಂದರೂ, “ಪಾಪ ಸಣ್ಣ ಹುಡುಗ್ರು, ತಿಂತಾವ ಬಿಡು; ನಮಗೇನು ಮಾಡ್ತಾವ” ಅಂದು ನಮ್ಮನ್ನು ಸುಮ್ಮನಾಗಿಸುತ್ತಿದ್ದರು. ಬಂದವರಲ್ಲಿ ಹೆಚ್ಚಿನ ಹುಡುಗರೂ ಅಜ್ಜಿ–ತಾತನನ್ನು ಗೌರವದಿಂದಲೇ ನೋಡುತ್ತಿದ್ದರೆನ್ನಿ; ಅಷ್ಟೇ ಅಲ್ಲ, ಪರೀಕ್ಷೆಗೆ ಹೋಗುವ ಮುನ್ನ ಅವರಿಗೆ ನಮಸ್ಕಾರ ಮಾಡಲೂ ಎಷ್ಟೋ ಮಕ್ಕಳು ಬರುತ್ತಿದ್ದರು. ಪರೀಕ್ಷೆ ಮುಗಿದು, ಬೇಸಿಗೆ ರಜೆಯಿದ್ದರೂ ನಮ್ಮನೆಗೆ ಬರುವ ಹುಡುಗರ ಸಂಖ್ಯೆಗೇನೊ ಮಿತಿಯಿರಲಿಲ್ಲ. ನೆಲ್ಲಿಕಾಯಿಗೆ ಬಂದವರಲ್ಲಿ ಅನೇಕರು ಕೇಳಿ ನೀರು ಕುಡಿಯುತ್ತಿದ್ದರು. ೪೬ ಡಿಗ್ರಿಯ ಬಿಸಿಲಲ್ಲಿ ಬಂದವರಿಗೆ ನೀರು ಕೊಡಲೆಂದೇ ಬೋರ್ವೆಲ್ಲಿನಿಂದ ಒಂದು ಕೊಡ ಹೆಚ್ಚೇತಂದು ಇಟ್ಟಿರುತ್ತಿದ್ದೆವು.

ಇಂಥ ಒಂದು ದಿನ, ಒಬ್ಬ ಹುಡುಗ ನೀರು ಕೇಳಿ ಬಾಗಿಲಿಗೆ ಬಂದ. ಅಜ್ಜಿ ಒಳಗೆ ಹೋಗಿ ನೀರು ತಂದುಕೊಟ್ಟರು, ಹುಡುಗ ಕುಡಿದು ಹೋದ. ನಾನು ಸಾಯಂಕಾಲ ಮನೆಗೆ ಬಂದು ರೇಡಿಯೋ ಹಾಕೋಣವೆಂದು ನೋಡಿದರೆ, ಪಡಸಾಲೆಯ ಗಣಪತಿ / ಗೌರಿ / ರೇಡಿಯೋ ಮಾಡ ಖಾಲಿ ಹೊಡೆಯುತ್ತಿದೆ! ಟೀವಿಗಳಿಲ್ಲದ ಆ ಕಾಲದ ಮನೆಗಳಲ್ಲಿ, ರೇಡಿಯೊ ಮನೆಯವರೆಲ್ಲರ ಏಕಮಾತ್ರ ಎಂಟರ್ಟೇನ್ಮೆಂಟ್ ಫೆಸಿಲಿಟಿ ಆಗಿದ್ದು, ಅದಿಲ್ಲದ ನಮ್ಮ ದಿನಗಳು ಓಡುವುದು ಹೇಗೆ? ನಮ್ಮ ಚಿತ್ರಗೀತೆ, ಅಭಿಲಾಷಾ ಕಾರ್ಯಕ್ರಮಗಳೂ ಇಲ್ಲ;

ತಾತನ ಮೂರು ಭಾಷೆಯ ಆರು ನ್ಯೂಸುಗಳೂ ಇಲ್ಲ! ಅಜ್ಜಿಯ ವಂದನಾ ಭಕ್ತಿಗೀತೆಗಳು, ಎಲ್ಲರ ಇಷ್ಟದ ರಾತ್ರಿ ೯.೩೦ರ ನಾಟಕಗಳು, ೧೧ರ ವರೆಗಿನ ಶಾಸ್ತ್ರೀಯ ಸಂಗೀತ! ಒಟ್ಟಿನಲ್ಲಿ ರೇಡಿಯೋ ಇಲ್ಲದ ಒಂದು ಸಂಜೆ, ಮೊನ್ನೆಯ ವ್ಹಾಟ್ಸಾಪ್, ಫೇಸ್ಬುಕ್, ಇನ್ಸ್ಟಾಗ್ರಾಮ್ಗಳಿಲ್ಲದ ಸಂಜೆಯಂತಾಗಿತ್ತು.

ಆಗ ನಮ್ಮನೆಗೆ, ನಮ್ಮ ಅಜ್ಜಿಯ ತಂಗಿ ಅಕ್ಕೂ ಅಜ್ಜಿ ಬಂದಿದ್ದರು. ಭಾರೀ ಚಾಲಾಕಿನ ಅಜ್ಜಿ ಅವರು. ಅವರಿಗೂ ರೇಡಿಯೋ ಇಲ್ಲದ ದಿನಗಳನ್ನು ಹೇಗೆ ಕಳೆಯುವುದೋ ಅನ್ನಿಸಿಬಿಟ್ಟಿತ್ತು, ಕೆಲವೇ ಗಂಟೆಗಳ ರೇಡಿಯೋ–ವಿರಹದಲ್ಲೇ! ಸರಿ, ಸೆರಗನ್ನು ಸೊಂಟಕ್ಕೆ ಸಿಕ್ಕಿಸಿ ತಯಾರಾದರು.



"ಇಂದಕ್ಕಾ, ಬಾ ಇಲ್ಲಿ" ಅಂತ ಅವರಕ್ಕ, ನಮ್ಮ ಅಜ್ಜಿಯನ್ನು ಸಮನ್ಸ್ಮಾಡಿ, ಇಂಟೆರೊಗೇಶನ್ನುರು ಮಾಡಿದರು. ಮಧ್ಯಾಹ್ನ ನಾವಿಲ್ಲದ ವೇಳೆ ಬಾಗಿಲು ತೆಗೆದಿಟ್ಟುಮಡಿ ಅಡಿಗೆಯಲ್ಲಿ ಕೂತಿದ್ದೆಯಾ, ಹಿಂದೆ ಹೂವು ತರಲು ಹೋಗಿದ್ದೆಯಾ, ಊಟಕ್ಕೆ ಕೂತಾಗ ಬಾಗಿಲು ಹಾಕಿತ್ತೋ ಇಲ್ಲವೋ?? ಇತ್ಯಾದಿ, ಇತ್ಯಾದಿ ನಡೆಯಿತು ಸ್ವಲ್ಪ ಹೊತ್ತು. ಕೊನೆಗೂ ಅಜ್ಜಿಯಿಂದ ಮಧ್ಯಾಹ್ನ ನೆಲ್ಲಿಕಾಯಿಗೆ ಬಂದ ಹುಡುಗನಿಗೆ ನೀರು ಕೊಟ್ಟ ವಿಷಯವನ್ನು ಹೊರತೆಗೆದರು, ಅಕ್ಕೂ ಅಜ್ಜಿ. ಅಲ್ಲಿಂದ ಅವನ ಬಗ್ಗೆ ವಿವರವಾಗಿ ಪ್ರಶ್ನೆಗಳು ಶುರುವಾದವು? ಹೆಸರೇನು, ಯಾವ ಶಾಲೆ, ನೋಡಲು ಹೇಗಿದ್ದ, ಯೂನಿಫಾರ್ಮ್ಹಾಕಿದ್ದನೋ, ಹಾಕಿದ್ದರೆ ಯಾವ ಬಣ್ಣದ್ದು ಮುಂತಾಗಿ ನಡೆಯಿತು. ಆಗ ನಮ್ಮಜ್ಜಿ ಅದುವರೆಗೂ ಮರೆತಿದ್ದ ಒಂದು ವಿಷಯ ಹೊರಬಿತ್ತು? ಆ ಹುಡುಗ ತನ್ನ ಹೆಸರು ಹೇಳಿದ್ದಲ್ಲದೇ, ತನ್ನ ತಾಯ್ತಂದೆಯರ ಹೆಸರು, ಇರುವ ಓಣಿ ಇತ್ಯಾದಿ ಪ್ರವರ ಹೇಳಿ, ಅವರ ಅಪ್ಪ–ಅಮ್ಮ ತಾತಾ ಅಜ್ಜಿಯ ಪರಿಚಯದವರು ಎಂತಲೂ ಹೇಳಿಕೊಂಡಿದ್ದ (ನೆಲ್ಲಿಕಾಯಿ ಜಾಸ್ತಿ ಸಿಗುವ ಆಸೆಗೆ). ಸರಿ, ಪತ್ತೇದಾರಿಣಿ ಅಕ್ಕೂ ಅಜ್ಜಿ ಕಾಲಿಗೆ ಚಪ್ಪಲಿ ತೂರಿಸಿಕೊಂಡು ಹೊರಟರು ಹತ್ತಿರದ ವಿಟ್ಠಲ ಮಂದಿರಕ್ಕೆ. ಅರ್ಧಗಂಟೆಯಲ್ಲಿ, ಗೆಲುವಿನ ಮುಖದೊಂದಿಗೆ ವಾಪಸು ಬಂದು, ಸದಸ್ಯರ ತಾತ್ಕಾಲಿಕ ಅಧಿವೇಶನ ಕರೆದು ಆ ಹುಡುಗನ ಹೆಸರು, ಅಡ್ರೆಸ್ಸು, ಮುಂಚೆ ಮಾಡಿದ ಕಳ್ಳತನದ ಇತಿಹಾಸ ಹೇಳಿ, ಅವನೇ ನಮ್ಮ ರೇಡಿಯೋ ಕಳ್ಳ ಅಂತ ತೀರ್ಪನ್ನೂ ಕೊಟ್ಟರು. ಮುಂದಿನ ಹಂತ ಅವನನ್ನು ಹಿಡಿತರುವುದು. ಮೊದಲು, ಪೋಲಿಸ್ಸ್ಟೇಶನ್ನಿಗೆ ಹೋಗಿ, ನಮಗೆ ಗೊತ್ತಿದ್ದ ಒಬ್ಬ ಪೋಲಿಸರಿಗೆ ಕಂಪ್ಲೇಂಟ್ ಬರೆದು ಕೊಟ್ಟು ಬಂದೆವು. ಅವರು ಮರುದಿನ ಒಬ್ಬ ಪ್ಯಾದೆಯನ್ನು ಕಳಿಸುವುದಾಗಿ ಹೇಳಿದ ಮೇಲೆ, ಮನೆಗೆ ಬಂದು ಸುಖವಾಗಿ ಮಲಗಿದೆವು.

ಎರಡು ದಿನ ಕಳೆಯಿತು. ಪರಿಚಯದ ಪೋಲಿಸಪ್ಪ ಬಂದು, "ನಾನ ಹೋಗಿದ್ದೆನ್ರೀ, ಪಾರ (ಹುಡುಗ) ಸಿಗಲಿಲ್ಲ; ಏನಮಾಡ್ಲಿಕಾಗಂಗಿಲ್ಲ, ಕಾಯಬೇಕು" ಅಂತ ಹೇಳಿದ. ಮರುದಿನಕ್ಕೆ, ನಮ್ಮ ಕಮಾಂಡರ್ ಅಕ್ಕೂ ಅಜ್ಜಿಯ ಸಹನೆ ಮುಗಿದು, ಕಮಾಂಡೋ ಆಕ್ಷನ್ನೇ ಸರಿ; ನಾವೇ ಹೋಗಿ ಅವನನ್ನು ಹಿಡುಕೊಂಡು ಬರೋದು ಒಳ್ಳೇದುಅಂತ ತೀರ್ಮಾನಿಸಿದರು. ನಾನು, ಮುರಲಿ ಮತ್ತು (ಸಾಕಷ್ಟು ಗಟ್ಟಿಮುಟ್ಟಾಗಿಯೇ ಇದ್ದ) ನಮ್ಮ ಸಣ್ಣ ಕಾಕಾ ಎರಡು ಬೈಸಿಕಲ್ಲು ತೊಗೊಂಡು ಕರಿ ಬೆಕ್ಕು (Black-Cat) ಕಮಾಂಡೋಗಳು ಸೀಕ್ರೆಟ್ಮಿಶನ್ನಿನ ಮೇಲೆ ಹೊರಟಂತೆ ಹೊರಟೆವು, ರಾತ್ರಿ ೯–೩೦ ಕ್ಕೆ. ನಾಲ್ಕೈದು ಮೈಲಿ ಸೈಕಲ್ಲು ಹೊಡೆದುಕೊಂಡು ಕಳ್ಳ ಸಾಹೇಬರ ಮನೆಗೆ ಹೋಗಿ, ಮಲಗಿದ್ದವರನ್ನು ಬಾಗಿಲು ಬಡಿದು ಎಬ್ಬಿಸಿದೆವು. ನಿದ್ದೆಗಣ್ಣಲ್ಲಿದ್ದವರಿಗೆ ಎಲ್ಲವನ್ನೂ ಹೇಳಿ,

ಅವರಿಂದ ಮಗನನ್ನು ನಮ್ಮವಶಕ್ಕೆ ತೆಗೆದುಕೊಂಡು, ಗೆದ್ದವರಂತೆ ಮತ್ತೆ ೪ ಮೈಲಿ ಸೈಕಲ್ಲು ಹೊಡೆದು ಕೊಂಡು ರೇಲ್ವೆ ಸ್ಟೇಶನ್ ಪೋಲಿಸ್ ಸ್ಟೇಶನ್ನಿಗೆ ಹೊರಟೆವು. ನಾನು ಮತ್ತು ಮುರಲಿ ಒಂದು ಸೈಕಲ್ಲಿನ ಮೇಲೆ ಇದ್ದರೆ, ಕಳ್ಳನನ್ನು ಮುಂದೆ ಕೂರಿಸಿಕೊಂಡು ನಮ್ಮ ಕಾಕಾ ಇನ್ನೊಂದು ಸೈಕಲ್ಲಿನ ಮೇಲೆ.

ಇನ್ನೇನು ಪೋಲಿಸ್ಸ್ಟೇಶನ್ ೨೦೦ ಮೀಟರ್ ಇದೆ, ಅದುವರೆಗೂ ಆರಾಮವಾಗಿ ಕೂತಿದ್ದ ಕಳ್ಳ ಒಮ್ಮೆಲೆ ಜೋರಾಗಿ ಸೈಕಲ್ಲಿನ ಹ್ಯಾಂಡಲನ್ನು ಅಲುಗಾಡಿಸಿದ. ನಮ್ಮ ಕಾಕಾ ಅದರ ಶಾಕಿನಿಂದ ಎಚ್ಚೆತ್ತು ಕೊಳ್ಳುವುದರೊಳಗೆ ಕಳ್ಳ ಹಾರಿ, ಎದುರಿನ ಗಲ್ಲಿಯೊಳಗೆ ಓಡಿದ. ಇನ್ನೂ ಬಾಯಿ–ಕಣ್ಣುಬಿಟ್ಟುಕೊಂಡು ಆ ಕಡೆಗೇ ನೋಡುತ್ತಿದ್ದ ನಮ್ಮ ಕಾಕಾನ ಪಕ್ಕದಲ್ಲೇ ನಮ್ಮ ಸೈಕಲ್ಲನ್ನು ರಸ್ತೆ ಬದಿಗೆ ಎಸೆದು, ನಾವಿಬ್ಬರೂ ೧೦೦ ಮೀಟರ್ ಸ್ಪರ್ಧೆಯಲ್ಲಿ ಓಡಿದ ಬೆನ್ಜಾನ್ಸನ್ನನಂತೆ ಹುಮ್ಮಸ್ಸಿನಿಂದ, ಪ್ರಾಣದ ಹಂಗು ತೊರೆದು ಕಳ್ಳನ ಹಿಂದೆ ಓಡಿದೆವು. ಆಗ ಸಮಯ ರಾತ್ರಿಯ ಹನ್ನೆರಡು–ಹನ್ನೆರಡೂವರೆ ಇರಬೇಕು. ನಾವಿಬ್ಬರೂ ಚಿಕ್ಕಚಿಕ್ಕ ಗಲ್ಲಿಗಳ ನೆಟ್ವರ್ಕಿನಲ್ಲಿ ಹದಿನೈದು–ಇಪ್ಪತ್ತು ನಿಮಿಷ ತೆಲುಗು ಸಿನಿಮಾದಲ್ಲಿ ಮಧ್ಯರಾತ್ರಿ ಕತ್ತಲೆಯಲ್ಲಿ (ನಾಗಾರ್ಜುನನ 'ಶಿವಾ' ನೆನಪಿಸಿಕೊಳ್ಳಿ) ವಿಲನ್ನುಗಳ ಹಿಂದೆ ಓಡುವ ಹೀರೊ ಮತ್ತವನ ಪ್ರಾಣ ಸ್ನೇಹಿತನಂತೆ ಓಡಿದೆವು. ಅವನೇನೋ ತಪ್ಪಿಸಿಕೊಂಡ. ನಾವೂ ಸ್ವಲ್ಪ ಸುಧಾರಿಸಿಕೊಳ್ಳಲು ನಿಂತೆವು. ಕಣ್ಣುಬಿಟ್ಟು ಸುತ್ತ ನೋಡಿದಾಗ ನಾವಿರುವ ಜಾಗದ ಪೂರ್ಣ ಅರಿವಾಯಿತು. ಅದೊಂದು ಅಷ್ಟೇನೂ ಒಳ್ಳೆಯ ಹೆಸರಿಲ್ಲದ ಭಾಗ; ಅಲ್ಲಿ ಹಾಡುಹಗಲೇ ಆಗುತ್ತಿದ್ದ ಹೊಡೆದಾಟ, ಬಡಿದಾಟಗಳ ಸುದ್ದಿಗಳು ನೆನಪಾದವು. ನಾವು ಓಡುತ್ತಿದ್ದ ಪರಿಗೆ, ಜನ ಎದ್ದು ನಮ್ಮನ್ನೇ ಹಾಕಿ ತದುಕಬಹುದು ಅನ್ನುವ ಜ್ಞಾನೋದಯವಾಗುತ್ತಿದ್ದಂತೆ ಬಂದದ್ದರಎರಡು ಪಟ್ಟು ವೇಗದಲ್ಲಿ ವಾಪಸ್ಸು ಓಡಿ ಬಂದೆವು. ಬದುಕಿದೆಯಾ ಬಡ ಜೀವವೇ ಅಂತ ಮೈನ್‌ರೋಡಿಗೆ ಬಂದು ಮುಟ್ಟಿದೆವು. ನಮ್ಮ ಕಾಕಾ ಇನ್ನೂ ನಾವು ಅಂಥ ಜಾಗದಲ್ಲಿ ಕಳ್ಳನ ಹಿಂದೆ ಓಡಿಹೋದ ರೀತಿಯನ್ನು ನೋಡಿದ ಶಾಕಿನಲ್ಲೇ ಇದ್ದ! ಸೈಕಲ್ಲುಗಳನ್ನು ತಳ್ಳಿಕೊಂಡು (ಸೈಕಲ್ಲು ಹೊಡೆಯಲು ಸಾಧ್ಯವಾಗದಂತೆ ಕಾಲು ನಡುಗುತ್ತಿದ್ದವಲ್ಲ?), ಸುಧಾರಿಸಿಕೊಳ್ಳುತ್ತಾ ಬೆಳಗಿನ ಜಾವ ಎರಡಕ್ಕೆ ಮನೆಗೆ ಬಂದು ಮುಟ್ಟಿದೆವು.

ಮರುದಿನ ಬೆಳಗ್ಗೆ ಎದ್ದು ನೋಡಿದರೆ, ನಮ್ಮ ಕಮಾಂಡರ್ ಅಕ್ಕು ಅಜ್ಜಿ ನಾಪತ್ತೆ. ಅವಲಕ್ಕಿ ತಿಂದು, "ಇಂದವ್ವಾ, ನಾ ಈಗ ಬಂದೆ" ಅಂತ ಹೇಳಿ ಹೋದವರು, ಮಟಮಟ ಮಧ್ಯಾಹ್ನ ಬಂದು "ಏ ಹುಡುಗ್ರಾ, ನಡೀರಿ ನಂಜೊತಿಗೆ" ಅಪ್ಪಣೆ ಕೊಟ್ಟರು. ಮತ್ತೆ ರಿಕ್ಷಾ ಹತ್ತಿ ೫ ಮೈಲು ಹೋಗಿ ಅಲ್ಲಿದ್ದ ಒಂದು ಸ್ಲಮ್ಮಿಗೆ ಹೋದೆವು. ದಾರಿಯಲ್ಲಿ ಅಜ್ಜಿಯ ಇದುವರೆಗಿನ ಪತ್ತೇದಾರಿಕೆಯ ವಿವರಗಳು ತಿಳಿದವು. ಪರಿಚಯದ ಪೋಲಿಸಪ್ಪನ ಜೊತೆಗೆ ಕಳ್ಳ ನಮನೆಗೆ ಹೋಗಿ, ಅವನ ಅಪ್ಪ–ಅಮ್ಮನನ್ನು ಒಳ್ಳೆಯದಾಗಿ ಮಾತಾಡಿಸಿ, ಆ ಹುಡುಗ ಮನೆಗೆ ಒಂದು ರೇಡಿಯೊ (ಗೆಳೆಯನದೆಂದು ಹೇಳಿ) ಹಿಡಿದುಕೊಂಡು ಬಂದದ್ದನ್ನೂ, ಆ ಗೆಳೆಯನಿಗೆ ಕೊಡಲು ಹೋಗಿರುವುದನ್ನೂ ತಿಳಿದುಕೊಂಡಿದ್ದರು. ರೇಡಿಯೊ ವಾಪಸ್ಸು ಬಂದರೆ, ಕೊಟ್ಟ ಕಂಪ್ಲೇಂಟ್ ವಾಪಸ್ಸು ತೆಗೆದುಕೊಳ್ಳುವದಾಗಿ ಹೇಳಿದ ಮೇಲೆ, ಗೆಳೆಯನ ಮನೆಯ ಪತ್ತೆಯೂ ಸಿಕ್ಕಿತ್ತು. ಪೋಲಿಸಪ್ಪನನ್ನು ಬ್ಯಾಕ್ ಅಪ್ಪರಲು ಕಳಿಸಿ, ನಮ್ಮನ್ನು ಕರೆಯಲು ಮನೆಗೆ ಬಂದಿದ್ದರು. ಅಲ್ಲಿಗೆ ಅವಾಂತರ ಮುಗಿದು ರೇಡಿಯೊ ಸಿಕ್ಕಿತೆಂದೆನಲ್ಲ, ಆ ಗೆಳೆಯ ಯಾರಿಗೋ ಮಾರಿ ಬಿಟ್ಟಿದ್ದ. ನಮ್ಮ ಜೊತೆ ಈಗ ಪೋಲಿಸರಿದ್ದರಲ್ಲ, ಕೈಯಲ್ಲಿನ ಕೋಲಿಗಿಂತ ಸಕಲಾದರೇ ನಂತೆ, ಜೋರಿಗೇನೂ ಕಡಿಮೆಯಿರಲಿಲ್ಲ, ಹಾಗಾಗಿ ಕೊಂಡಿದ್ದವನಲ್ಲಿ ಹೋಗಿ, ಮಾರಿದ್ದ ರೇಡಿಯೋ ಕಿತ್ತಿಕೊಂಡು ತಂದೆವು. ಅಷ್ಟೆ ಅಲ್ಲ, ಆ ಹುಡುಗ ನಮ್ಮ ಮನೆಯ ಕಡೆಗೇನಾದರೂ ಬಂದರೆ?? ಅಂತ ಹೆದರಿಸಿಯೂ ಬಂದೆವು.

ಮತ್ತೆ, ನಮ್ಮ ಮನೆಯಲ್ಲಿ ರೇಡಿಯೋದ ಪ್ರತಿಷ್ಠಾಪನೆಯಾಯಿತು, ಗಣಪತಿ ಮಾಡದಲ್ಲಿ. ಅದರಿಂದ ಹೊಮ್ಮಿದ ಸುದ್ದಿ, ಸಂಗೀತ, ನಾಟಕಗಳು ನಮ್ಮ ಜೀವನವನ್ನು ಸಂತೋಷಮಯಗೊಳಿಸಿದವು ಎನ್ನುವಲ್ಲಿಗೆ ರೇಡಿಯೋ ಕಳ್ಳನ ವೃತ್ತಾಂತವು ಮುಕ್ತಾಯವಾಯಿತು.

○



## ಕನ್ನಡ ಚಟುವಟಿಕೆಗಳ ವರದಿ

**ಡಾ. ವಿನಯ ಶ್ರೀನಿವಾಸ**
ಲೇಖಕರು ಹಾಗೂ ವಿಭಾಗೀಯ ಸಂಪಾದಕರು

**ಎಲ್ಲರಿಗೂ ನಮಸ್ಕಾರ.**

ರಾಜ್ಯದಾದ್ಯಂತ ಭಾರತೀಯ ವೈದ್ಯಕೀಯ ಸಂಘದ ವಿವಿಧ ಶಾಖೆಗಳು ಹಲವಾರು ಕನ್ನಡ ಚಟುವಟಿಕೆಗಳನ್ನು ಹಮ್ಮಿಕೊಂಡು ಆ ನಿಟ್ಟಿನಲ್ಲಿ ಯಶಸ್ವಿಯಾಗಿ ಮುನ್ನಡೆಯುತ್ತಿರುವುದು ನಿಜಕ್ಕೂ ಶ್ಲಾಘನೀಯ. ಅಷ್ಟೇ ಅಲ್ಲ ನಮ್ಮ ವೈದ್ಯ ಸಾಹಿತಿಗಳು, ವೃತ್ತಿ ಬದುಕಿನೊಂದಿಗೆ ಅನೇಕ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಸಾಗುತ್ತಿರುವುದು ಸಹ ನಾವೆಲ್ಲರೂ ಹೆಮ್ಮೆ ಪಡಬೇಕಾದ ವಿಷಯವೇ. ಅಂತಹ ಕೆಲವು ಮುಖ್ಯ ಕಾರ್ಯಕ್ರಮಗಳ ಸಂಕ್ಷಿಪ್ತ ವರದಿಯನ್ನು ಈ ಅಂಕಣದಲ್ಲಿ ತೆರೆದಿಡಲು ಪ್ರಯತ್ನಿಸುವೆ.

**ವಿವಿಧ ಶಾಖೆಗಳು ಹಮ್ಮಿಕೊಂಡ ಕನ್ನಡ ಚಟುವಟಿಕೆಗಳು**

* ದಿನಾಂಕ ದಿನಾಂಕ ೧೬-೦೫-೨೦೨೪ ರಂದು ಶಿವಮೊಗ್ಗ ಐ ಎಂ ಎ ಮಹಿಳಾ ಘಟಕವು 'ಅಂತರರಾಷ್ಟ್ರೀಯ ತಾಯಂದಿರ ದಿನಾಚರಣೆ'ಯನ್ನು ವಿಶಿಷ್ಟವಾಗಿ ಆಚರಿಸಿತು. ಕಾರ್ಯಕ್ರಮದ ಭಾಗವಾಗಿ ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಭಾಷಣ ಮತ್ತು ಚಿತ್ರಕಲಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. 'ಅಮ್ಮನೊಂದಿಗಿನ ಆಪ್ತ ಅನುಭವ' ಕುರಿತಾಗಿ ವಿದ್ಯಾರ್ಥಿಗಳು ಹೃದಯಸ್ಪರ್ಶಿಯಾಗಿ ಮಾತನಾಡಿದರು. ಮಾತೃವಾತ್ಸಲ್ಯವನ್ನು ಬಿಂಬಿಸುವ ಸುಂದರ ಚಿತ್ರಗಳನ್ನು ವಿದ್ಯಾರ್ಥಿಗಳು ರಚಿಸಿ ಸ್ಪರ್ಧೆಗಳಲ್ಲಿ ಉತ್ಸಾಹದಿಂದ ಭಾಗವಹಿಸಿದರು. ಅಂದು ಘಟಕದ ಹಲವು ಸದಸ್ಯರು ತಾಯಿಯ ಕುರಿತಾದ ಸುಮಧುರ ಗೀತಗಾಯನವನ್ನೂ ಪ್ರಸ್ತುತ ಪಡಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳಾ ಘಟಕದ ಅಧ್ಯಕ್ಷೆ ಡಾ. ವಿಶಾಲಾಕ್ಷಿ ಮೂಗಿ ಮತ್ತು ಭಾವೈಸಂ ಅಧ್ಯಕ್ಷ ಡಾ. ಸಿ. ರಮೇಶ್ ಉಪಸ್ಥಿತರಿದ್ದರು. ಡಾ. ಕೆ. ಎಸ್. ಶುಭ್ರತಾ ಕಾರ್ಯಕ್ರಮವನ್ನು ನಿರೂಪಿಸಿದರು.

* ದಿನಾಂಕ ೨೮-೦೫-೨೦೨೪ರಂದು ಶಿವಮೊಗ್ಗ ಐಎಂಎ ಮಹಿಳಾ ಘಟಕವು 'ಮುಟ್ಟಿನ




ನೈರ್ಮಲ್ಯ ದಿನಾಚರಣೆ'ಯನ್ನು ಆಚರಿಸಿತು. ಈ ಬಾರಿ ನಗರದ ಕಮಲ ನೆಹರು ಕಾಲೇಜಿನಲ್ಲಿ ಕಾರ್ಯಕ್ರಮವನ್ನು ಏರ್ಪಡಿಸಿ ಅಲ್ಲಿನ ವಿದ್ಯಾರ್ಥಿನಿಯರಿಗೆ ಋತುಚಕ್ರದ ಬಗ್ಗೆ ವೈಜ್ಞಾನಿಕ ಮಾಹಿತಿಯನ್ನು ನೀಡುವುದರ ಮೂಲಕ ಆ ಬಗ್ಗೆ ಸಂಪೂರ್ಣ ಅರಿವನ್ನು ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಘಟಕದ ಸದಸ್ಯರಾದ ಡಾ. ಪ್ರಿಯಂವದಾರವರು ಮಹಿಳೆಯ ಸಂತಾನೋತ್ಪತ್ತಿ ಶರೀರಶಾಸ್ತ್ರದ ಬಗೆಗೂ, ಡಾ. ಸೋನಿಯಾರವರು ಮುಟ್ಟಿನ ನೈರ್ಮಲ್ಯದ ಬಗೆಗೂ ಹಾಗೂ ಡಾ. ರಕ್ಷಾರಾವ್‌ರವರು ಋತುಸ್ರಾವದ ಸಮರ್ಥ ನಿರ್ವಹಣೆಯ ಬಗೆಗೂ ಉಪನ್ಯಾಸ ನೀಡಿದರು. ಕಾರ್ಯಕ್ರಮದ ಕೊನೆಯಲ್ಲಿ ಘಟಕದ ಸದಸ್ಯರಾದ ಡಾ. ವಿನಯ ಶ್ರೀನಿವಾಸ್‌ರವರು ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ವಿದ್ಯಾರ್ಥಿನಿಯರು ಮುಟ್ಟಿನ ಕುರಿತಾದ ತಮ್ಮ ಎಲ್ಲ ಸಂಶಯಗಳನ್ನು ತಜ್ಞರೊಡನೆ ಸಂವಾದ ನಡೆಸಿ ಪರಿಹರಿಸಿಕೊಂಡರು. ಘಟಕದ ಅಧ್ಯಕ್ಷೆ ಡಾ. ವಿಶಾಲಾಕ್ಷಿ ಮೂಗಿ ಮತ್ತು ಶಿವಮೊಗ್ಗ ಸ್ತ್ರೀರೋಗ ತಜ್ಞರ ಸಂಘದ ಅಧ್ಯಕ್ಷೆ ಡಾ. ಭಾರತಿ ಎಚ್. ಜಿ.ರವರು ರಸಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಕೊಟ್ಟ ವಿದ್ಯಾರ್ಥಿನಿಯರಿಗೆ ಬಹುಮಾನವನ್ನು ವಿತರಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಚ್. ಎಸ್. ನಾಗಭೂಷಣ ಮತ್ತು ಇತರ ಉಪನ್ಯಾಸಕರು ಉಪಸ್ಥಿತರಿದ್ದರು.

**ನಮ್ಮ ಸದಸ್ಯರು ಭಾಗವಹಿಸಿದ ಮುಖ್ಯ ಕಾರ್ಯಕ್ರಮಗಳು**

* ದಿನಾಂಕ ೨೩–೦೪–೨೦೨೪ರಂದು ನಮ್ಮ ಸಮಿತಿಯ ಸಕ್ರಿಯ ಸದಸ್ಯೆ ಡಾ. ವೀಣಾ ಭಟ್‌ರವರು ಮೈಸೂರಿನ ಜೆಎಸ್‌ಎಸ್ ಸಮೂಹ ಸಂಸ್ಥೆಯಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಹ್ವಾನಿಸಲ್ಪಟ್ಟಿದ್ದರು.



ಸಂಸ್ಥೆಯು ಗೃಹವೈದ್ಯರು ಮತ್ತು ಮತ್ತು ವೈದ್ಯಕೀಯ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸೇವಾ ಪೂರ್ವಭಾವಿ ಸಭೆಯನ್ನು ಏರ್ಪಡಿಸಿತ್ತು. ಡಾ. ವೀಣಾರವರು 'ಆರೋಗ್ಯರಕ್ಷಣೆಯಲ್ಲಿ ಮಾನವೀಯ ಮೌಲ್ಯಗಳು' ಎಂಬ ವಿಷಯದ ಕುರಿತಾಗಿ ಉಪನ್ಯಾಸ ಮಾಡಿದರು. ವೈದ್ಯಕೀಯ ವೃತ್ತಿಯಲ್ಲಿ ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕಾದ ಮೌಲ್ಯಗಳ ಬಗ್ಗೆ ಡಾ. ವೀಣಾ ತಿಳಿಸಿ ಹೇಳಿದರು. ಸಭೆಯಲ್ಲಿ ಜೆಎಸ್‌ಎಸ್ ಸಂಸ್ಥೆಯ ಮೂಳೆ ಮತ್ತು ಕೀಲು ವಿಭಾಗದ ಮುಖ್ಯಸ್ಥರಾದಡಾ. ಶಾಸ್ತ್ರಿ, ನವಜಾತ ಶಿಶು ತಜ್ಞ ಡಾ. ಚೇತನ್, ಸಮುದಾಯ ಮುಖ್ಯಸ್ಥರಾದ ಡಾ. ಕುಲಕರ್ಣಿ ಮತ್ತು ಪ್ರಸೂತಿ ಶಾಸ್ತ್ರ ವಿಭಾಗದ ಮುಖ್ಯಸ್ಥೆ ಡಾ. ಸುಮಾ ಕೆ ಬಿ ಉಪಸ್ಥಿತರಿದ್ದರು.

* ದಿನಾಂಕ ೨೮–೦೫–೨೦೨೪ರಂದು ಆಕಾಶವಾಣಿ, ಭದ್ರಾವತಿ ಮುಟ್ಟಿನ ನೈರ್ಮಲ್ಯ ದಿನದ ಅಂಗವಾಗಿ, ಸ್ತ್ರೀರೋಗ ತಜ್ಞೆ ಹಾಗೂ ನಮ್ಮ ಸಮಿತಿಯ ಸದಸ್ಯೆಯಾದ ಡಾ. ವೀಣಾ ಭಟ್‌ರವರೊಂದಿಗೆ ವಿಶೇಷ ಸಂದರ್ಶನ ನಡೆಸಿತ್ತು. ಈ ಸಂದರ್ಶನವು ರಾಜ್ಯದ ಎಲ್ಲ ಬಾನುಲಿ ಕೇಂದ್ರಗಳಿಂದ ಏಕಕಾಲಕ್ಕೆ ಪ್ರಸಾರವಾಗಿ ಸಾರ್ವಜನಿಕರಿಗೆ ಅರಿವು ಮೂಡಿಸುವಲ್ಲಿ ಯಶಸ್ವಿಯಾಯಿತು.

* ದಿನಾಂಕ ೩೦–೦೫–೨೦೨೪ರಂದು ಶಿವಮೊಗ್ಗ ಸಮೀಪ ಹೊಳೆಹೊನ್ನೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿನಿಯರಿಗಾಗಿ ಆಯೋಜಿಸಿದ್ದ ಮುಟ್ಟಿನ ನೈರ್ಮಲ್ಯ ದಿನಾಚರಣೆಯಲ್ಲಿ ನಮ್ಮ ಸಮಿತಿಯ ಕ್ರಿಯಾಶೀಲ ಸದಸ್ಯೆ ಡಾ. ವೀಣಾ ಭಟ್‌ರವರು ಮುಖ್ಯ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು. ವಿಶೇಷ ಉಪನ್ಯಾಸ ಹಾಗೂ ಸಂವಾದದ ಮೂಲಕ ವಿದ್ಯಾರ್ಥಿನಿಯರಿಗೆ ಮುಟ್ಟಿನ ಕುರಿತಾದ ಎಲ್ಲ ವೈಜ್ಞಾನಿಕ ಮಾಹಿತಿಯನ್ನು ತಿಳಿಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲೆ ಶ್ರೀಮತಿ ಕೆ ಎಸ್ ಪ್ರತಿಭಾ ವಹಿಸಿದ್ದರು. ಕಾಲೇಜಿನ ಇತರ ಉಪನ್ಯಾಸಕರು ಉಪಸ್ಥಿತರಿದ್ದರು.

* ದಿನಾಂಕ ೦೬–೦೬–೨೦೨೪ರಂದು ಶಿವಮೊಗ್ಗ ಸಮೀಪ ಅಗರದಹಳ್ಳಿಯಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಯಿಂದಆಯೋಜಿಸಲ್ಪಟ್ಟ ಮುಟ್ಟಿನ ನೈರ್ಮಲ್ಯ ದಿನಾಚರಣೆಯಲ್ಲಿ ನಮ್ಮ ಸದಸ್ಯೆ ಡಾ. ವೀಣಾ ಭಟ್‌ರವರು ಪರಿಸರ ಸ್ನೇಹಿ ಮುಟ್ಟಿನ ನಿರ್ವಹಣೆಯ ಬಗ್ಗೆ ಆಶಾ ಕಾರ್ಯಕರ್ತೆಯರು




ಹಾಗೂ ಅಲ್ಲಿನ ಪ್ರೌಢಶಾಲಾ ಮಕ್ಕಳಿಗೆ ವಿವರಿಸಿದರು. ಇದು ಸ್ವಚ್ಛ ಪರಿಸರ ನಿರ್ಮಾಣದತ್ತ ನಮ್ಮ ಸದಸ್ಯರಿಂದ ಮತ್ತೊಂದು ಹೆಜ್ಜೆ ಎಂದೇ ಹೇಳಬಹುದು.

* ದಿನಾಂಕ ೨೦.೦೬.೨೦೨೪ರಂದು ಆಕಾಶವಾಣಿ ಶಿವಮೊಗ್ಗದಲ್ಲಿ ನಮ್ಮ ಸಮಿತಿಯ ಕ್ರಿಯಾಶೀಲ ಸದಸ್ಯೆ ಡಾ. ಕೆ ಎಸ್ ಶುಭ್ರತಾರವರ ಸಂದರ್ಶನ ಬಿತ್ತರವಾಯಿತು. ಚರ್ಚೆಯಲ್ಲಿ ಮಹಿಳಾ ಮಾನಸಿಕ ಆರೋಗ್ಯದ ಅಭಿಪ್ರಾಯ ವ್ಯಕ್ತಪಡಿಸಿದರು. ಮಹಿಳೆಯರನ್ನು ಕಾಡುವ ಆತಂಕ, ಖಿನ್ನತೆ, ಮೊದಲಾದ ಮಾನಸಿಕ ಕಾಯಿಲೆಗಳನ್ನು ಆರಂಭದಲ್ಲಿಯೇ ಗುರುತಿಸಿ ಚಿಕಿತ್ಸೆ ಪಡೆಯುವುದರ ಮಹತ್ವವನ್ನು ತಿಳಿಸಲಾಯಿತು.

* ಜೂನ್ ೨೨ ಮತ್ತು ೨೩ರಂದು ಡಾ. ಎಸ್ ಪಿ ಯೋಗಣ್ಣ ಅವರ ಅಧ್ಯಕ್ಷತೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ರಾಜ್ಯ ಮಟ್ಟದ ಪ್ರಥಮ ಯೋಗ ಸಮ್ಮೇಳನವನ್ನು ಮೈಸೂರಿನಲ್ಲಿ ಆಯೋಜಿಸಲಾಗಿತ್ತು.

* ದಿನಾಂಕ ೨೬-೦೬-೨೦೨೪ರಂದು ಬೆಂಗಳೂರಿನ ಜ್ಞಾನ ಭಾರತಿ ಕ್ಯಾಂಪಾಸ್‌ನಲ್ಲಿ, ಮೈಂಡ್‌ಕೇರ್ ಸಂಸ್ಥೆ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯ ಜಂಟಿಯಾಗಿ ಆಯೋಜಿಸಿದ್ದ ವಿಶ್ವ ಮಾದಕ ವಸ್ತು ಜಾಗೃತಿ ದಿನಾಚರಣೆಯಲ್ಲಿ ಪ್ರತಿಷ್ಠಿತ ಪದ್ಮಶ್ರೀ ಪುರಸ್ಕೃತರೂ, ಖ್ಯಾತ ಮನೋವೈದ್ಯರೂ ಆದ ಡಾ. ಸಿ. ಆರ್. ಚಂದ್ರಶೇಖರ್‌ರವರು ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಉಪನ್ಯಾಸ ನೀಡಿದರು. ಇಂತಹ ವಸ್ತುಗಳ ವ್ಯಸನದಿಂದ ವ್ಯಕ್ತಿಯ ಜೊತೆ ಆತನ ಕುಟುಂಬ ಹಾಗೂ ಸಮಾಜಕ್ಕೂ ಹಾನಿಯಾಗುತ್ತದೆ ಎಂದು ಕಳಕಳಿ ವ್ಯಕ್ತಪಡಿಸಿದರು.

**ಪ್ರಶಸ್ತಿಗಳು**

ನಮ್ಮ ಸಮಿತಿಯ ಸದಸ್ಯ, ಸಾಹಿತಿ ಡಾ. ಕರವೀರಪ್ರಭು ಕ್ಯಾಲಕೊಂಡರವರು ೨೦೨೪ನೇ



ಸಾಲಿನ ಆರ್ಯಭಟ ಅಂತರರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಶ್ರೀಯುತರು ಜಿಲ್ಲಾ ಶಸ್ತ್ರಚಿಕಿತ್ಸಕರಾಗಿದ್ದಾಗ ನೂತನ ಜಿಲ್ಲಾ ಆಸ್ಪತ್ರೆ ನಿರ್ಮಾಣದಲ್ಲಿ ವಹಿಸಿದ ಪಾತ್ರ, ರೋಗಿಗಳಿಗೆ ನೀಡಿದ ಅಮೋಘ ಸೇವೆ, ಮಾಡಿದ ದಾಖಲೆಯ ೧,೭೫,೫೪೩ ದೋಷರಹಿತ ಲ್ಯಾಪರೋಸ್ಕೋಪಿಕ್ ಸಂತಾನಹರಣ ಶಸ್ತ್ರಚಿಕಿತ್ಸೆ ಮತ್ತು ಆ ವೇಳೆಯಲ್ಲಿ ಕರ್ನಾಟಕ ಸರ್ಕಾರದಿಂದ ಸಿಕ್ಕ ಪ್ರಶಸ್ತಿ, ಪುರಸ್ಕಾರ, ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಗಳನ್ನು ಪರಿಗಣಿಸಿ ಈ ಪ್ರಶಸ್ತಿಗೆ ಆಯ್ಕೆ ಮಾಡಿರುವುದಾಗಿ ಆ ಸಂಸ್ಥೆಯ ಅಧ್ಯಕ್ಷರಾದ ಡಾ. ಎಚ್‌ಎಲ್‌ಎನ್ ರಾವ್ ತಿಳಿಸಿದ್ದಾರೆ. ಇದು ನಮಗೆಲ್ಲರಿಗೂ ಹೆಮ್ಮೆಯ ವಿಚಾರ. ಡಾ. ಕರವೀರಪ್ರಭು ಕ್ಯಾಲಕೊಂಡರವರಿಗೆ ಸಮಿತಿಯ ಪರವಾಗಿ ಅಭಿನಂದನೆಗಳು.

**ಆನ್ ಲೈನ್ ಕಾರ್ಯಕ್ರಮಗಳು**

ಎಂದಿನಂತೆ ಪ್ರತಿ ಭಾನುವಾರ ಸಂಜೆ

ನಮ್ಮ ಸಮಿತಿಯು ವಾಸವಿ ಕಲಾ ವೇದಿಕೆಯ ಸಹಯೋಗದೊಂದಿಗೆ ಆಯೋಜಿಸುವ 'ಸಾಹಿತಿಗಳೊಂದಿಗೆ ಒಂದು ಸಂಜೆ' ಆನ್ ಲೈನ್ ಕಾರ್ಯಕ್ರಮಗಳೂ ಮೇ ಮತ್ತು ಜೂನ್ ತಿಂಗಳುಗಳಲ್ಲಿಯೂ ನಡೆದಿದ್ದು ಈ ಬಾರಿ ಸಂಪನ್ಮೂಲ ವ್ಯಕ್ತಿಗಳು ವಿಭಿನ್ನ ವಿಚಾರಗಳ ಬಗ್ಗೆ ಅರಿವು ಮೂಡಿಸಿದರು. ದಿನಾಂಕ ೦೫-೦೫-೨೦೨೪ ರಂದು ಉಡುಪಿಯ ಡಯೆಟ್ ಸಂಸ್ಥೆಯ ಹಿರಿಯ ಉಪನ್ಯಾಸಕರಾದ ಡಾ. ಅಶೋಕ್ ಕಾಮತ್‌ರವರು 'ರಾಷ್ಟ್ರೀಯ ಶಿಕ್ಷಣ ನೀತಿ- ೨೦೨೦' ವಿಷಯದ ಕುರಿತಾಗಿ, ದಿನಾಂಕ ೧೨-೦೫-೨೦೨೪ ರಂದು ಮಂಗಳೂರಿನ ಕುಟುಂಬ ವೈದ್ಯರಾದ ಡಾ. ಜೆಎನ್ ಭಟ್‌ರವರು "ಆಧುನಿಕತೆಯಲ್ಲಿ ಆಧ್ಯಾತ್ಮಿಕತೆ' ಎಂಬ ಶೀರ್ಷಿಕೆಯ ಅಡಿಯಲ್ಲಿ ಪ್ರತಿಯೊಬ್ಬರ ಬದುಕಿನಲ್ಲಿ ಆಧ್ಯಾತ್ಮಿಕತೆಯ ಅಳವಡಿಕೆಯ ಮಹತ್ವವನ್ನು ತಿಳಿಸಿದರು. ದಿನಾಂಕ ೧೯-೦೬-೨೦೨೪ ರಂದು ಅಂಕಣ ಬರಹಗಾರರು ಮತ್ತು ಉಪನ್ಯಾಸಕರಾದ ಡಾ. ಗಣಪತಿ ಹೆಗಡೆಯವರು 'ಮನವು ಅರಳಲಿ' ಎಂಬ ತಲೆಬರಹದ ಅಡಿಯಲ್ಲಿ ಮನಸ್ಸನ್ನು ಸಂತೋಷವಾಗಿಟ್ಟುಕೊಳ್ಳುವುದು ನಮ್ಮ ಕೈಯಲ್ಲಿಯೇ ಇದೆ ಎಂಬ ಕಿವಿಮಾತನ್ನು ಹೇಳಿದರು. ದಿನಾಂಕ ೨೬-೦೫-೨೦೨೪ ರಂದು ಭರತನಾಟ್ಯ ಕಲಾವಿದರಾದ ಶ್ರೀ ಸತ್ಯನಾರಾಯಣ ರಾಜುರವರು ತಮ್ಮ ನರ್ತನ ಪಯಣದ ಕುರಿತಾಗಿ ಹಂಚಿಕೊಂಡರು.

ದಿನಾಂಕ ೦೨-೦೬-೨೦೨೪ರಂದು 'ಕರ್ನಾಟಕ ಪದ್ಮಪುರಸ್ಕೃತ ವೈದ್ಯರು' ಶೀರ್ಷಿಕೆಯ ಅಡಿಯಲ್ಲಿ ಬೆಂಗಳೂರಿನ ನರಶಸ್ತ್ರಚಿಕಿತ್ಸಕರಾದ ಡಾ. ಸೂರ್ಯನಾರಾಯಣ ಶರ್ಮರವರು ಕರ್ನಾಟಕದ ಪ್ರಪ್ರಥಮ ನರ ಶಸ್ತ್ರ ವೈದ್ಯರಾದ ಡಾ. ರವಿ ಮಾರ್ತಾಂಡ ವರ್ಮರವರ ಪರಿಚಯವನ್ನು ಮಾಡಿಕೊಟ್ಟರು. ದಿನಾಂಕ ೧೬-೦೬-೨೦೨೪ರಂದು ಶಿವಮೊಗ್ಗೆಯ ರೋಗ ಶಾಸ್ತ್ರಜ್ಞೆ ಡಾ. ವಿನಯ ಶ್ರೀನಿವಾಸ್‌ರವರು ಪದ್ಮಶ್ರೀ ಪುರಸ್ಕೃತರೂ ಹಾಗೂ ಕಿದ್ವಾಯಿ ಸ್ಮಾರಕಗಂತಿ ಸಂಸ್ಥೆಯ ಪ್ರಪ್ರಥಮ ನಿರ್ದೇಶಕರಾಗಿದ್ದ ಡಾ. ಮಲ್ಲಪ್ಪ ಕೃಷ್ಣ ಭಾರ್ಗವರವರ ಪರಿಚಯ ಮಾಡಿಕೊಟ್ಟರು.

ದಿನಾಂಕ ೨೩-೦೬-೨೦೨೪ ರಂದು ಹುಬ್ಬಳ್ಳಿಯ ನೇತ್ರತಜ್ಞರಾದ ಡಾ ಕೃಷ್ಣ ಪ್ರಸಾದ್ ರವರು ಪದ್ಮಪುರಸ್ಕೃತರೂ ಹಾಗೂ ಹುಬ್ಬಳ್ಳಿಯ ಎಂ ಎಂ ಜೋಶಿ ನೇತ್ರವಿಜ್ಞಾನಗಳ ಸಂಸ್ಥೆಯ ಸಂಸ್ಥಾಪಕರಾದ ಡಾ. ಎಂ. ಎಂ. ಜೋಶಿಯವರನ್ನು ಕುರಿತು ಮಾತನಾಡಿದರು.

**ನಮ್ಮ ಸದಸ್ಯರು ಭಾಗವಹಿಸಿದ ಕಾರ್ಯಕ್ರಮಗಳು**

ದಿನಾಂಕ ೨೦-೦೬-೨೦೨೪ರಂದು ರೇಡಿಯೋ ಶಿವಮೊಗ್ಗದಲ್ಲಿ ನಮ್ಮ ಸಮಿತಿಯ




ಕ್ರಿಯಾಶೀಲ ಸದಸ್ಯೆ ಡಾ ಕೆ ಎಸ್ ಶುಭ್ರತಾರವರ ಸಂದರ್ಶನ ಬಿತ್ತರವಾಯಿತು. ಚರ್ಚೆಯಲ್ಲಿ ಮಹಿಳಾ ಮಾನಸಿಕ ಆರೋಗ್ಯದ ಬಗ್ಗೆ ಮಾತನಾಡಲಾಯಿತು. ಮಹಿಳೆಯರನ್ನು ಕಾಡುವ ಆತಂಕ, ಖಿನ್ನತೆ ಮೊದಲಾದ ಮಾನಸಿಕ ಕಾಯಿಲೆಗಳನ್ನು ಆರಂಭದಲ್ಲಿಯೇ ಗುರುತಿಸಿ ಚಿಕಿತ್ಸೆ ಪಡೆಯುವುದರ ಮಹತ್ವವನ್ನು ತಿಳಿಸಲಾಯಿತು.



ಕಾವ್ಯ ಸಂಪದ / ವಿಶ್ಲೇಷಣೆ

# ಬೇರೆ ಮಧುವೇಕೆ ನನಗೆ?

**ಡಾ. ಗೋವಿಂದ ಹೆಗಡೆ**
ಅರಿವಳಿಕೆ ತಜ್ಞರು
ಲೇಖಕರು ಮತ್ತು ವಿಭಾಗೀಯ ಸಂಪಾದಕರು, ಹುಬ್ಬಳ್ಳಿ

ಐದಾರು ವರ್ಷಗಳ ಹಿಂದಿನ ಮಾತು. ನಾನು ಆಗ 'ನಮ್ಮ ಪ್ರೀತಿಯ ಗಜಲ್' ಎಂಬ ಗುಂಪೊಂದನ್ನು ಹುಟ್ಟುಹಾಕಿ, ಮುನ್ನಡೆಸುತ್ತಿದ್ದೆ. ಒಂದು ಬೆಳಗ್ಗೆ ಚಿದಾನಂದ ಸಾಲಿ ಅವರು ಸಂಪಾದಿಸಿದ 'ಕನ್ನಡ ಗಜಲ್' ಅನ್ನು ತಿರುವಿ ಹಾಕುತ್ತಿದ್ದವನನ್ನು ಲಕ್ಷ್ಮಣರಾಯರ ಈ ಗಜಲ್ ಸೆಳೆಯಿತು. ಅದರ ಫೋಟೋ ತೆಗೆದು ಗಜಲ್ ಗುಂಪಿನಲ್ಲಿ ಹಂಚಿಕೊಂಡವನು 'ಇದರ ವಿಶೇಷವೇನು, ಹೇಳಿ' ಎಂದೆ. ಕೆಲವರು ತಮ್ಮ ತಮ್ಮದೇ ರೀತಿಯಲ್ಲಿ, ಲಹರಿಯಲ್ಲಿ ಪ್ರತಿಕ್ರಿಯಿಸಿದರು. ಅವುಗಳಿಗೆ ಉತ್ತರಿಸುತ್ತ ನಾನು, ಎಂದಿನ ಸೋಮಾರಿತನದಲ್ಲಿ, ಬರೆಯಲು ಹೋಗದೆ, ನನಗನಿಸಿದಂತೆ ಈ ಗಜಲ್ ವಿಶೇಷತೆಯನ್ನು, ಅಲ್ಲಿ ಬರುವ ಪದಗಳ ಸೊಬಗನ್ನು ತಿಳಿದಷ್ಟು ಮಟ್ಟಿಗೆ, ಧ್ವನಿ ಸಂದೇಶವನ್ನು ಮುದ್ರಿಸಿ ಹಂಚಿಕೊಂಡೆ. ಅದಕ್ಕೆ ಒಳ್ಳೆಯ ಪ್ರತಿಕ್ರಿಯೆ ಬಂತು. ಅದೇ ಹುಕಿಯಲ್ಲಿ ಶ್ರೀ ಲಕ್ಷ್ಮಣರಾಯರ ಸಂಪರ್ಕ ಸಂಖ್ಯೆಯನ್ನು ಹುಡುಕಿ ಅವರಿಗೆ ಕೂಡ ಕಳಿಸಿಕೊಟ್ಟೆ. 'ನಾನು ಇಂಥವನು, ನಿಮ್ಮ ಗಜಲ್ ಒಂದರ ವಿಶೇಷತೆಯ ಬಗ್ಗೆ ನನಗೆ ತಿಳಿದಂತೆ ಇಲ್ಲಿ ಹೇಳಿದ್ದೇನೆ. ಕೇಳಿ ನೋಡಿ', ಎಂದು ಇನ್ನೊಂದು ಸಂದೇಶವನ್ನು ಜೊತೆಗೆ ಕಳಿಸಿದ್ದೆ. ಕಳಿಸಿದ್ದು ವಾಟ್ಸಾಪ್ ನಲ್ಲಿ. ಕೆಲವು ನಿಮಿಷಗಳಲ್ಲಿ ಬಿ ಆರ್ ಎಲ್ ನನ್ನ ಸಂದೇಶವನ್ನು ಆಲಿಸಿದ್ದು ತಿಳಿಯಿತು. ಆದರೆ ಅವರಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ಇದು ನಡೆದಿದ್ದು ಬೆಳಗಿನ ೮: ೩೦ – ೯ ರ ಒಳಗೆ. ತುಸು ನಿರಾಶೆಯಲ್ಲೇ ನನ್ನ ದಿನದ ಕೆಲಸಕ್ಕೆ ತೆರಳಿದೆ.

ಅರಿವಳಿಕೆತಜ್ಞನಾದ ನಾನು ಅಂದು ಸಂಪೂರ್ಣ ಅರಿವಳಿಕೆಯ ಕೇಸ್ ಒಂದನ್ನು ನಿಭಾಯಿಸಬೇಕಿತ್ತು. ಶಸ್ತ್ರಕ್ರಿಯೆ ಮುಗಿಯಿತು. ನಾನು ಇನ್ನೇನು, ಅರಿವನ್ನು ಮರಳಿಸುವ ಕ್ರಿಯೆಯಲ್ಲಿ ತೊಡಗಬೇಕು– ಆಗ ಲಕ್ಷ್ಮಣರಾಯರ ಕರೆ ಬಂತು! ಸಂಭ್ರಮದಲ್ಲೇ ಅವರ ಕರೆ ಸ್ವೀಕರಿಸಿದೆ. ಮುಂದೆ ಸುಮಾರು ೧೫ ನಿಮಿಷಗಳ ಕಾಲ ಮಾತನಾಡಿದ ಅವರು, ತಮ್ಮ ಗಜಲ್ ಕುರಿತಂತೆ ನನ್ನ ಗ್ರಹಿಕೆಗಳ ಬಗ್ಗೆ ಖುಷಿ ಪಟ್ಟರು. ನನ್ನ ಓದು, ಕೆಲಸ, ಊರು ಇತ್ಯಾದಿಗಳ ಬಗ್ಗೆ ವಿಚಾರಿಸಿಕೊಂಡರು. ಆ ಮೂಲಕ ನಾನು ಅವರ ಸ್ನೇಹವಲಯಕ್ಕೆ ಪ್ರವೇಶ ಪಡೆದೆ!

ಗಜಲ್ ಒಂದು, ಹಿರಿಯ– ಪ್ರಸಿದ್ಧ ಕವಿಯೊಬ್ಬರ ಸ್ನೇಹಲಾಭವನ್ನು ನನಗೆ ಒದಗಿಸಿದ ರೀತಿ ಇದು. ಸದಾ ನೆನಪಿನಲ್ಲಿರುವ, ಅವಿಸ್ಮರಣೀಯ ಪ್ರಸಂಗ.

ಗಜಲ್ ಅಥವಾ ಯಾವುದೇ ಕಾವ್ಯ ನಮ್ಮನ್ನು ಕಾಡುವುದು ಕಾಡಬೇಕಾದದ್ದು ಯಾಕೆ, ಹೇಗೆ? ಒಂದು– ಅದು ನಿರ್ವಹಿಸುವ ವಸ್ತುವಿನ ಮೂಲಕ. ಅದು ನೋವಿಗೆ, ಶೋಷಣೆಗೆ ನೀಡಿದ ಅಭಿವ್ಯಕ್ತಿ ಆಗಿರಬಹುದು. ಮನುಷ್ಯನ ಮೂಲಭೂತ ಆಶೋತ್ತರಗಳಿಗೆ, ತವಕ ತಲ್ಲಣಗಳಿಗೆ, ಅವನ ಕುದಿತಕ್ಕೆ ಮಾತು ನೀಡಿದ್ದರಿಂದ ಇರಬಹುದು ಒಟ್ಟಿನಲ್ಲಿ ನಮ್ಮ ಅಂತರಂಗವನ್ನು ಕದಲಿಸುವ, ಆ ಮೂಲಕ ಭಾವಗಳನ್ನು ಉದ್ದೀಪಿಸುವ ಕೆಲಸ ಆಗಬೇಕು. 'ಒಳಗನ್ನು ಚೂರೂ ಅಲುಗಿಸದಿದ್ದರೆ ಅದೇನು ಕವಿತೆ' ನನ್ನದೇ ಗಜಲ್ ಒಂದರ ಸಾಲು ಇದು.

ಹಾಗಿದ್ದರೆ ಕಾವ್ಯ – ಅದರ ಭಾಗವಾಗಿ ಗಜಲ್, ಸದಾ ಶೋಷಣೆ, ವೇದನೆ, ಅಸಮಾನತೆಯ ವಿರುದ್ಧ ಗುಡುಗುತ್ತಲೇ ಇರಬೇಕೇ? ಬದುಕಿನ ಸುಕುಮಾರ ಭಾಗವಾದ ಒಲವು, ನಲುಮೆ, ಅನುರಾಗ

– ಇವುಗಳ ಬಗ್ಗೆ ಹಾಡಬೇಕಿಲ್ಲವೇ?

'ನೊಂದ ನೋವನ್ನಷ್ಟೇ ಹಾಡಲೇಬೇಕೇನು
ಯಾರಿಗೂ ಬೇಡವೆ ಸಿರಿ ಮಲ್ಲಿಗೆ'

ಇದು ಮಲ್ಲಿಗೆಯ ಕವಿ ಕೆ ಎಸ್ ನರಸಿಂಹಸ್ವಾಮಿ ಅವರ ಪ್ರಶ್ನೆ.

ಅಂತಹ ಸುಕುಮಾರ ಭಾವವನ್ನು; ಗಜಲ್ ನ ಮೂಲ, ಆಧಾರ ಶ್ರುತಿಯೇ ಆದ ಪ್ರಣಯ, ಅನುರಾಗಗಳನ್ನು ಅತ್ಯಂತ ವಿಶಿಷ್ಟ ಧಾಟಿಯಲ್ಲಿ,



ಬನಿಯಲ್ಲಿ ಕಟ್ಟಿಕೊಡುವ ಗಜಲ್ ಇದು. ಆ ಮೂಲಕ ನಮ್ಮ ಭಾವವಲಯವನ್ನು ವಿಸ್ತಾರಗೊಳಿಸುವ ಗಜಲ್. ಇನ್ನು ಮುಂದಕ್ಕೆ ಈ ಚರ್ಚೆಯನ್ನು ಬೆಳೆಸುವ ಮೊದಲು ಗಜಲನ್ನು ಓದಿ ಬಿಡೋಣ.

**ಬೇರೆ ಮಧುವೇಕೆ ನನಗೆ?**

ನಿನ್ನ ಒಡಲೇ ಮಧುರ ಮಧುಶಾಲೆಯಾಗಿರಲು
ಬೇರೆ ಮಧುವೇಕೆ ನನಗೆ?
ನೀನೇ ತೆಕ್ಕೆಯೊಳಿರುವ ಮಧುಬಾಲೆಯಾಗಿರಲು
ಬೇರೆ ಮಧುವೇಕೆ ನನಗೆ?
ನಿನ್ನ ನೋಟದ ಮಾದಕತೆಗಿಂತ ಸವಿಯಾದ
ಮಧುವುಂಟೇ ಈ ಜಗದಲಿ?
ನಿನ್ನ ನಳಿದೋಳುಗಳೇ ಮಧುಮಾಲೆಯಾಗಿರಲು
ಬೇರೆ ಮಧುವೇಕೆ ನನಗೆ ?
ನಿನ್ನ ಅಧರಾಮೃತದ ಮಧುಪಾನವೇ ಸಾಕು
ದೇವಸುರೆಗಿಂತ ಮಿಗಿಲು
ನೀನೇ ಚಿಂತೆಯ ಸುಡುವ ಮಧುಜ್ವಾಲೆಯಾಗಿರಲು
ಬೇರೆ ಮಧುವೇಕೆ ನನಗೆ?
ನಿನ್ನೆದೆಯ ತುಂಬು ಮಧುಕುಂಭಗಳೇ ನನಗಿರಲು
ಇನ್ನೆಂಥ ಬಾಯಾರಿಕೆ
ನಿನ್ನ ಸಂಗವೇ ಅಮಲಿನುಯ್ಯಾಲೆಯಾಗಿರಲು ಬೇರೆ
ಮಧುವೇಕೆ ನನಗೆ?
ನಿನ್ನ ಹೃದಯದ ತುಂಬ ತುಂಬಿರುವ ಪ್ರೀತಿ ಮಧು
ಈ ಜಗದ ಪರಿವೆ ಹರಿಸಿ
ಬಾಳೊಂದು ಸುಖಸ್ವಪ್ನ ಮಧುಲೀಲೆಯಾಗಿರಲು
ಬೇರೆ ಮಧುವೇಕೆ ನನಗೆ?

ಬಿ ಆರ್ ಲಕ್ಷ್ಮಣರಾವ್

ಈ ಗಜಲ್ನಲ್ಲಿ ಥಟ್ಟನೆ ಗಮನ ಸೆಳೆಯುವುದು ಗಜಲ್‌ಗೆ ಇರುವ ಶೀರ್ಷಿಕೆ. ಸಾಮಾನ್ಯವಾಗಿ ಗಜಲ್‌ಗಳಿಗೆ ಶೀರ್ಷಿಕೆ ಇರುವುದಿಲ್ಲ. ಚಿದಾನಂದ ಸಾಲಿಯವರು ಕೇಂದ್ರ ಸಾಹಿತ್ಯ ಅಕಾಡೆಮಿಗಾಗಿ ಸಂಪಾದಿಸಿರುವ ಕನ್ನಡ ಗಜಲ್ ಸಂಕಲನದಲ್ಲಿ ಎಲ್ಲ ಗಜಲ್ ಗಳಿಗೆ ಶೀರ್ಷಿಕೆ ನೀಡಿದ್ದಾರೆ. ಗಜಲ್ ಹಾಡುಗಬ್ಬವೇ ಆಗಿದ್ದ ಪೂರ್ವಕಾಲದಲ್ಲಿ ಶೀರ್ಷಿಕೆಯ ಅಗತ್ಯವಿರಲಿಲ್ಲ ಎಂದೆನಿಸುತ್ತದೆ. ಈಗ ಮುದ್ರಿತ ರೂಪವನ್ನು ನಾವು ಓದುವುದರಿಂದ ಶೀರ್ಷಿಕೆಗಳನ್ನು ನೀಡುವುದರಲ್ಲಿ ತಪ್ಪಿಲ್ಲ ಎಂಬುದು ನನ್ನ ಅನಿಸಿಕೆ ಕೂಡ. ಗಜಲ್ಕಾರರು ಈ ಬದಲಾವಣೆಯನ್ನು ಸ್ವಾಗತಿಸಬಹುದು, ಒಪ್ಪಿ ಅಪ್ಪಿಕೊಳ್ಳಬಹುದು ಎಂದೆನಿಸುತ್ತದೆ.

ಗಜಲ್ ನ ಮೂಲ ಪರಂಪರೆ ಸಂಭಾಷಣೆಯ ರೀತಿಯದು. ಪುರುಷನೊಬ್ಬ ಸ್ತ್ರೀಯನ್ನು, ಸ್ತ್ರೀಯರನ್ನು ಸಂಬೋಧಿಸಿ ಮಾತನಾಡುವ ಕ್ರಮದ್ದು. ಈ ಗಜಲ್ ಕೂಡ ಅದೇ ಮಾದರಿಯನ್ನು ಅನುಸರಿಸಿದೆ. ಪ್ರಿಯಕರನೊಬ್ಬ ತನ್ನ ಪ್ರೇಯಸಿಯನ್ನು ಬಣ್ಣಿಸುತ್ತ, ಇಂತಹ ಮಧುಭಾಂಡವೇ ನನ್ನದಾಗಿರುವಾಗ ಬೇರೆ ಮಧುವಿನ ಅಗತ್ಯವೇನಿದೆ ಎಂದು ಪ್ರಶ್ನಿಸುವ, ಪ್ರಶ್ನಿಸಿಕೊಳ್ಳುವ ಶೈಲಿ ಇಲ್ಲಿದೆ.

ಗಜಲ್‌ನ ಸ್ವರೂಪದ ಬಗ್ಗೆ ಮೌಲಿಕವಾದ ಮಾತೊಂದಿದೆ. ಅದು ಕಾಫಿಯಾ ಗಜಲ್‌ನ 'ಬೇರು' ಎನ್ನುವುದು. ಇಲ್ಲಿನ ಕಾಫಿಯ ಪದಗಳನ್ನು ಗಮನಿಸಿದಾಗ ಅದು ನಮ್ಮ ಅನುಭವಕ್ಕೆ ಬರುತ್ತದೆ.

ಮಧುಶಾಲೆಯಾಗಿರಲು
ಮಧುಬಾಲೆಯಾಗಿರಲು
ಮಧುಮಾಲೆಯಾಗಿರಲು
ಮಧುಜ್ವಾಲೆಯಾಗಿರಲು
ಅಮಲಿನುಯ್ಯಾಲೆಯಾಗಿರಲು
ಮಧುಲೀಲೆಯಾಗಿರಲು

ಇವುಗಳಲ್ಲಿ ಅಮಲಿನುಯ್ಯಾಲೆಯಾಗಿರಲು ಈ ಶಬ್ದವನ್ನು ಬಿಟ್ಟು ಉಳಿದವೆಲ್ಲವೂ 'ಮಧು' ಶಬ್ದದಿಂದ ಆರಂಭವಾಗುವ ಸಮಸ್ತ ಪದಗಳು. (ಸಮಾಸವಾದ ಪದಗಳನ್ನು 'ಸಮಸ್ತ' ಎಂದು ಗುರುತಿಸುತ್ತಾರೆ.) ಮಧುಶಾಲೆ, ಮಧುಬಾಲೆ,

ಮಧುಮಾಲೆ ಈ ಶಬ್ದಗಳು ತೆರೆಯುವ ಭಾವಲೋಕ ಅದ್ಭುತವಾದದ್ದು. ಚಕಿತಗೊಳಿಸುವ ಮುಂದಿನ ಶಬ್ದ 'ಮಧುಜ್ವಾಲೆ'! ಉತ್ತಮ ದರ್ಜೆಯ ಕವಿ, ಪ್ರತಿಭಾ ವಿಲಾಸವುಳ್ಳ ಕವಿ ಮಾತ್ರ ಟಂಕಿಸಬಹುದಾದ ಶಬ್ದಪುಂಜ ಇದು. ಜ್ವಾಲೆ– ಬೆಂಕಿ. ನೀನು 'ಜ್ವಾಲೆಯಾಗಿರಲು' ಎನ್ನುವುದು ಒಂದು ರೀತಿಯಲ್ಲಿ ಭಯವನ್ನು ಹುಟ್ಟಿಸುವ ಶಬ್ದ. ಆದರೆ ಇಲ್ಲಿ ನೀನು ಎಂದರೆ ಪ್ರೇಯಸಿ, ಅಂತಿಂಥ ಜ್ವಾಲೆಯಲ್ಲ! ನೀನು ಮಧುರವಾದ, ಮಧುವಿನಿಂದಲೇ ಮಾಡಲ್ಪಟ್ಟ ಬೆಂಕಿ! ಎರಡು ಕಾರಣಗಳಿಗಾಗಿ ಈ ಪ್ರಯೋಗ ವಿಶಿಷ್ಟವಾಗಿದೆ, ಸಮುಚಿತವೂ ಇದೆ.

ಚಿಂತೆಯನ್ನು ಬೆಂಕಿಗೆ ಹೋಲಿಸುತ್ತಾರೆ. ಆದರೆ ಇಲ್ಲಿ ನೀನು ಚಿಂತೆಯನ್ನೇ ಸುಡುವ ಬೆಂಕಿ. ಹಾಗೆ ಸುಟ್ಟು ಆಹ್ಲಾದವನ್ನು, ಉಲ್ಲಾಸವನ್ನು, ಮಾಧುರ್ಯವನ್ನು ಉಂಟು ಮಾಡುವ ಬೆಂಕಿ. ಹಾಗಾಗಿ ಮಧುಜ್ವಾಲೆ.

ಪ್ರೇಯಸಿಯ ಸಾಮೀಪ್ಯ, ಎಲ್ಲ ತರಹದ ತಲ್ಲಣ–ದುಗುಡಗಳನ್ನು ದೂರ ಮಾಡದಿದ್ದರೆ, ಅವಕ್ಕೆ ಅಗ್ನಿಯಾಗಿ ಪರಿಣಮಿಸದಿದ್ದರೆ, ಇನ್ನು ಯಾವುದು ಆ ಅಗ್ನಿಯಾಗಲು ಸಾಧ್ಯ?!

ಮಧುಜ್ವಾಲೆ ಒಂದು ಆಕ್ಸಿಮೊರೋನ್ ಪದ. ಪರಸ್ಪರ ವಿರೋಧಾಬಾಸವನ್ನು ಉಂಟುಮಾಡುವಿಕೆಯಲ್ಲೇ ಅದರ ಚೆಲುವು. ಅಂತಹ ಚಮತ್ಕಾರವನ್ನು ತುಂಬ ಅರ್ಥಪೂರ್ಣವಾಗಿ, ಚೆಲುವಾಗಿ ಬಳಸಿಕೊಂಡ ಶ್ರೇಯಸ್ಸು ಬಿ ಆರ್ ಎಲ್ ಅವರದು. ಜಯಂತ ಕಾಯ್ಕಿಣಿ, ಮುಂದೆ ತುಂಬ ಪ್ರಸಿದ್ಧವಾದ 'ಮಧುರ ಯಾತನೆ' ಎಂಬ ಆಕ್ಸಿಮೊರೋನ್ ಪದವನ್ನು ಬಳಸಿದ್ದನ್ನು ನೆನಪಿಸಿಕೊಳ್ಳಬಹುದು.

ಒಲಿದ ಹೆಣ್ಣು ಮಧುಶಾಲೆ, ಮಧುಬಾಲೆ, ಮಧುಮಾಲೆ, ಮಧುಜ್ವಾಲೆ ಅವಳೊಂದು ಅಮಲಿನುಯ್ಯಾಲೆ. ಹಾಗಿರುವಾಗ ಬಾಳು ಸುಖಸ್ವಪ್ನದ ಮಧುಲೀಲೆಯಾಗುವ, ಹಾಗೆ ಮಿನುಗುವ ಸಾರ್ಥಕ್ಯವನ್ನು ಮಕ್ತಾ (ಕೊನೆಯ ಶೇರ್) ತುಂಬ ಸೊಗಸಾಗಿ ಕಟ್ಟಿಕೊಟ್ಟಿದೆ.

ಈ ಗಜಲ್‌ನ ಸೊಗಸು ಇರುವುದು ಇಲ್ಲಿನ ಕಾಫಿಯಾ ಪದಗಳಲ್ಲಿ. ಆ ಮೂಲಕ ತುಂಬ ಸೊಗಸಾಗಿ ಸಮರಸಗೊಳ್ಳುವ, ಸಮನ್ವಯಗೊಳ್ಳುವ ಗಜಲ್ ಕಟ್ಟಡದಲ್ಲಿ. ಇದರ ಜೊತೆಗೆ ಮತ್ತೆ ಮತ್ತೆ ಪುನರಾವರ್ತನೆಗೊಳ್ಳುವ, ಓದಿದಾಗ ಹಾಡಿದಾಗ ಅನುರಣನಗೊಳ್ಳುವ 'ಮಧು' ಶಬ್ದ ಕೂಡ ಗಜಲ್‌ನ ವಿಶೇಷ ಕಾಂತಿಯನ್ನು ತಂದುಕೊಟ್ಟಿದೆ. ನಾದಸೌಖ್ಯವನ್ನು ಹೆಚ್ಚಿಸುತ್ತದೆ.

ನಿನ್ನ ಒಡಲು ಮಧುರ ಮಧುಶಾಲೆ,<br>
ನೀನು ತೆಕ್ಕೆಯೊಳಿರುವ ಮಧುಬಾಲೆ,<br>
ಅಧರಾಮೃತ, ನಿನ್ನೆದೆಯ ತುಂಬು<br>
ಮಧುಕುಂಭಗಳು, ನಿನ್ನ ಸಂಗ

ಹೀಗೆ ಕೇವಲ ಐಹಿಕ ವಿವರಗಳಲ್ಲಿ ಈ ಗಜಲ್ ಸಿಕ್ಕಿಕೊಂಡಿದೆ ಎಂದು ಮೇಲುನೋಟಕ್ಕೆ ಅನ್ನಿಸಬಹುದು.

'ನಿನ್ನ ಹೃದಯದ ತುಂಬ ತುಂಬಿರುವ ಪ್ರೀತಿ ಮಧು ಈ ಜಗದ ಪರಿವೆ ಹರಿಸಿ' ಎಂಬ ಸಾಲಿನಲ್ಲಿ ಲೋಕಾತೀತವಾದ, ಲೋಕದ ಜಂಜಡಗಳನ್ನು ಮೀರಿ ನಿಲ್ಲುವ ಶಕ್ತಿಯನ್ನು ನೀಡುವ ಪ್ರೀತಿಯನ್ನು (ಆ ಪ್ರೀತಿಯೂ ಮಧುವೇ!) ಹಾಡುವ ಮೂಲಕ ಬಾಳನ್ನು ಮಧುಲೀಲೆಯಾಗಿ ವಿಸ್ತರಿಸುವ ಗಜಲ್‌ನ ಕೊನೆ, ಭೌತಿಕ ವಿವರಗಳ ಆಚೆ ಗಜಲ್ ಅನ್ನು ಎತ್ತರಿಸುತ್ತದೆ.

ಗಜಲ್‌ನ ಪರಂಪರೆಯಲ್ಲಿ ಪ್ರೇಮ ಐಹಿಕವೂ ಹೌದು, ಆಧ್ಯಾತ್ಮಿಕವೂ ಹೌದು. ಸೂಫಿ ಚಿಂತನೆಯಲ್ಲಿ ಭಕ್ತ ಪುರುಷ, ಭಗವಂತ (ಅವನು ಒಲಿಸಿಕೊಳ್ಳಬೇಕಾದ) ಸ್ತ್ರೀ ಎಂಬ ಪರಿಕಲ್ಪನೆಯೂ ಇದೆ ಎಂದು ಓದಿದ್ದೇನೆ. ಹಾಗೆ ಪರಿಭಾವಿಸಿದಾಗ ಈ ಗಜಲ್‌ನ ಪಾರಮಾರ್ಥಿಕ ಆಯಾಮಗಳು ಕೂಡ ತೆರೆದುಕೊಳ್ಳುತ್ತವೆ.

ಸರ್ವಾಂಗ ಸುಂದರವಾದ, ನಮ್ಮ ಬುದ್ಧಿ – ಭಾವ – ಸಂವೇದನೆಗಳಿಗೆ ಹೊಸ ಕಾಂತಿಯನ್ನು ನೀಡುವ ಗಜಲ್‌ನ ಒಂದನ್ನು ನೀಡಿದ್ದಕ್ಕಾಗಿ ಕವಿ ಬಿ. ಆರ್. ಲಕ್ಷ್ಮಣರಾಯರನ್ನು ಅಭಿನಂದಿಸುತ್ತೇನೆ.

**ಒಳ್ಳೆಯ ಕಾವ್ಯ ಭುವನದ ಭಾಗ್ಯ!**



# ಕಾವ್ಯ ಸಂಪದ

**ಡಾ. ಜಯಲಕ್ಷ್ಮಿ ನಾಯಕ್**
ವಿಭಾಗೀಯ ಸಂಪಾದಕರು



**ಡಾ. ಪವನ್ ಕುಮಾರ್. ಎಂ.** ಎಂಡಿ
ಪವನ್ ಹಾಸ್ಪಿಟಲ್,
ಪ್ರೆಸಿಡೆಂಟ್ IMA ಯಲಹಂಕ

## ಕನ್ನಡಕ್ಕಾಗಿ ಕೈಯೆತ್ತಿ

ಕಸ್ತೂರಿ ಕನ್ನಡ, ಕಿವಿಗಿಂಪು ಕನ್ನಡ,
ಸವಿಜೇನು ಕನ್ನಡ।
ಇದು ನಿಮ್ಮ ಕನ್ನಡ, ನನ್ನ ಕನ್ನಡ,
ನಮ್ಮೆಲ್ಲರ ಕನ್ನಡ।
ಕನ್ನಡಕ್ಕಾಗಿ ಶಿರಬಾಗಿ, ಕನ್ನಡಕ್ಕಾಗಿ ಕೈಯೆತ್ತಿ॥
ಕನ್ನಡದೋಳ್ ಮೆದುಳು ಮಿಂದು ಪಾವನವಾಗಲಿ;

ಕನ್ನಡದೋಳ್ ಪದಗಳ ನೋಡಿ ನಯನಗಳು
ನಳನಳಿಸಲಿ;
ಕನ್ನಡದೋಳ್ ಬಡಿದು ಹೃದಯವು ಕುಣಿದಾಡಲಿ;
ಕನ್ನಡದೋಳ್ ನುಡಿದು ಜಿಹ್ವೆಯು ಧನ್ಯವಾಗಲಿ;

ಪ್ರಾಣ ಕನ್ನಡ, ದೈವ ಕನ್ನಡ, ಪ್ರೀತಿ ಕನ್ನಡ।
ನೀ ಕನ್ನಡ, ನಾ ಕನ್ನಡ, ನಾವೆಲ್ಲರೂ ಕನ್ನಡ।

ಕನ್ನಡಕ್ಕಾಗಿ ಶಿರಬಾಗಿ,
ಕನ್ನಡಕ್ಕಾಗಿ ಕೈಯೆತ್ತಿ॥

*****



**ಡಾ. ಗೋವಿಂದ ಹೆಗಡೆ**
ಅರಿವಳಿಕೆ ತಜ್ಞರು

## ಗಜಲ್

ಶಬ್ದಗಳ ರಾಶಿ ಹಾಕಿದರೆ ಕಾವ್ಯವಾಗುವುದಿಲ್ಲ
ಲಯಬದ್ಧ ನಡೆಯಿದ್ದರೆ ಕಾವ್ಯವಾಗುವುದಿಲ್ಲ

ರಾಜನ ಪೋಷಾಕು ಹಾಕಿದರೆ ಅರಸನೇನು
ಕಾವ್ಯದ ವೇಷ ಧರಿಸಿದರೆ ಕಾವ್ಯವಾಗುವುದಿಲ್ಲ

ಸಪ್ಪೆ ಪದಗಳ ಎಷ್ಟೆಂದು ಮೆರೆಯಿಸುವೆ
ಮಿಂಚಿನ ಕರವಿಲ್ಲದಿರೆ ಕಾವ್ಯವಾಗುವುದಿಲ್ಲ

ಪದಾರ್ಥಗಳ ಸಿಕ್ಕಿನಲ್ಲಿ ಸೊರಗಿದೆ ಭಾವ
ಅತೀತಕ್ಕೆ ಚಾಚದಿದ್ದರೆ ಕಾವ್ಯವಾಗುವುದಿಲ್ಲ

ಕವಿತೆ ಒಣಮಾತಿನ ಸಂತೆಯಲ್ಲ 'ಜಂಗಮ'
ಮೌನವನ್ನು ಅರಳಿಸದಿದ್ದರೆ ಕಾವ್ಯವಾಗುವುದಿಲ್ಲ

***



**ಡಾ. ಗೋವಿಂದ ಹೆಗಡೆ**
ಅರಿವಳಿಕೆ ತಜ್ಞರು

## ಗಜಲ್

ತೇವವಿಲ್ಲದೆ ನಾಲಗೆ ನುಡಿಯುವುದಿಲ್ಲ
ಹಸಿಯಾಗದೆ ಕೊರಲು ಹೊಮ್ಮುವುದಿಲ್ಲ

ಒಣಗಿದ ಕಣ್ಣುಗಳು ಏನನ್ನು ಕಂಡಾವು
ಕಂಬನಿ ಇಲ್ಲದಿದ್ದರೆ ದೃಷ್ಟಿ ಬೆಳಗುವುದಿಲ್ಲ

ಎಣ್ಣೆಯೆರೆದಾಗಲೇ ಚಕ್ರಗಳೂ ಸರಾಗ
ಸ್ನಿಗ್ಧತೆಯಿರದೆ ಚಲನೆ ಬೆಳೆಯುವುದಿಲ್ಲ

ನೀರು ಇದ್ದಾಗಲಷ್ಟೇ ಬೀಜಕ್ಕೆ ಭರವಸೆ
ಉರಿಬೆಂಕಿ ನೆಲ ಭವಿಷ್ಯ ಬರೆಯುವುದಿಲ್ಲ

ಆರ್ದ್ರತೆಯಿಲ್ಲದ ಎದೆಯಿಂದೇನು 'ಜಂಗಮ'
ಒಲವು ಹನಿಯದೆ ಬೆಳಕಾಡುವುದಿಲ್ಲ

***

**೩ನೇ ಪುಟದಿಂದ**

ಕಾರ್ಪೊರೇಟ್ ಸಂಸ್ಥೆಗಳು ವೈದ್ಯಕೀಯ ಸೇವೆಗಳ ಜವಾಬ್ದಾರಿ ಪಡೆದಿದ್ದು ಸೇರಿ ಇನ್ನೂ ಅನೇಕ ಕಾರಣಗಳಿವೆ. ವೈದ್ಯಕೀಯ ವೃತ್ತಿಯ ಘನತೆಯನ್ನು ಕಾಪಾಡುವುದು ಮತ್ತು ಆರೋಗ್ಯ ಕ್ಷೇತ್ರದಲ್ಲಿ ಸಹಕಾರ ಸಮನ್ವಯತೆ ಉಳಿಸಿ ಗೌರವ ಹೆಚ್ಚಿಸುವ ಜವಾಬ್ದಾರಿ ವೈದ್ಯರ ಜೊತೆ ಸಮಾಜದ ಎಲ್ಲಾ ವರ್ಗಗಳ ಜವಾಬ್ದಾರಿ.

ರಾಷ್ಟ್ರೀಯ ವೈದ್ಯಕೀಯ ಆಯೋಗದ ರಚನೆ, ಕೇಂದ್ರ ಮಟ್ಟದಲ್ಲಿ ನೀಟ್ ಪರೀಕ್ಷೆ ಇತ್ಯಾದಿಗಳನ್ನು ಕ್ರಾಂತಿಕಾರಿ ಬದಲಾವಣೆ ಎಂದು ಪರಿಗಣಿಸಲಾಗಿದೆ. ಆದರೆ ನೀಟ್ ಪರೀಕ್ಷೆಯಲ್ಲಿ ಉಂಟಾಗಿರುವ ಗೊಂದಲಗಳು ಆರೋಪಗಳು, ಅವ್ಯವಹಾರಗಳ ಸರಮಾಲೆ ವೈದ್ಯಕೀಯ ಶಿಕ್ಷಣದಲ್ಲಿ ಕಪ್ಪು ಚುಕ್ಕೆ. ವಿದ್ಯಾರ್ಥಿಗಳ ಉಜ್ವಲ ಭವಿಷ್ಯಕ್ಕೆ ಹಿನ್ನಡೆ ಉಂಟಾಗಿದೆ. ಸರಕಾರ ಉನ್ನತ ಮಟ್ಟದಲ್ಲಿ ಕಠಿಣ ಕ್ರಮ ಕೈಗೊಳ್ಳಬೇಕು. ಇದರ ವಿಚಾರಣೆಯನ್ನು ಕೇಂದ್ರ ತನಿಖಾ ದಳಕ್ಕೆ ವಹಿಸಿರುವುದು ಸ್ವಾಗತಾರ್ಹ. ಶೀಘ್ರ ಹಾಗೂ ದೀರ್ಘಕಾಲಿಕ ಕ್ರಮಗಳನ್ನು ಕೈಗೊಂಡು ವೈದ್ಯಕೀಯ ವಿದ್ಯಾರ್ಥಿಗಳಲ್ಲಿ ಪಾಲಕರಲ್ಲಿ ಆತ್ಮವಿಶ್ವಾಸ ತುಂಬಬೇಕಿದೆ. ವೈದ್ಯಕೀಯ ಆಯೋಗವೂ ಸಹ ಭಾರತೀಯ ವೈದ್ಯಕೀಯ ಸಂಘದ ಸಲಹೆ ಸೂಚನೆಗಳನ್ನು ಪರಿಗಣಿಸಬೇಕು.

ಲೋಕಸಭಾ ಚುನಾವಣೆ ಪ್ರಕ್ರಿಯೆ ಮುಗಿದಿದ್ದು ಹೊಸ ಸರಕಾರ ರಚನೆಯಾಗಿದೆ. ಭಾರತದ ಪ್ರಬುದ್ಧ ಮತದಾರರು ತಮ್ಮ ಅಭಿಪ್ರಾಯ ತಿಳಿಸಿದ್ದಾರೆ. ಮುಂದಿನ ಐದು ವರ್ಷಗಳಲ್ಲಿ ಸುಭದ್ರ ಸರಕಾರ ಇರಲಿ ಮತ್ತು ದೇಶದ ಅವಶ್ಯಕತೆಗಳನ್ನು ಪೂರೈಸುವ ನಿರ್ಣಯಗಳನ್ನು ಕೈಗೊಳ್ಳಲಿ. ನೂತನ ಆರೋಗ್ಯ ಸಚಿವರಾಗಿ ಶ್ರೀ ಜಗತ್ ಪ್ರಕಾಶ ನಡ್ಡಾ ಅವರು ಅಧಿಕಾರ ಸ್ವೀಕರಿಸಿದ್ದಾರೆ. ಭಾರತೀಯ ವೈದ್ಯಕೀಯ ಸಂಘ ಅವರ ಸಚಿವಾಲಯದ ಜೊತೆ ವ್ಯವಹರಿಸಿ ಆರೋಗ್ಯ ಕ್ಷೇತ್ರದಲ್ಲಿ ಅವಶ್ಯವಿರುವ ಬದಲಾವಣೆಗೆ ಪ್ರಯತ್ನಿಸಲಿ.

ಕನ್ನಡ ವೈದ್ಯ ಬರಹಗಾರರ ಸಮಿತಿಯ ಐದನೇ ರಾಜ್ಯ ಸಮ್ಮೇಳನ ಬೆಳಗಾವಿಯಲ್ಲಿ ಹಿರಿಯ ವೈದ್ಯ ಸಾಹಿತಿ ಡಾ ನಾ ಸೋಮೇಶ್ವರ ಅವರ ಸರ್ವಾಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ಆಗಸ್ಟ್ ೨೪ ಮತ್ತು ೨೫ ರಂದು ಆಯೋಜಿಸಲಾಗುತ್ತಿದೆ. ವೈದ್ಯ ಸಾಹಿತ್ಯದ ಬೆಳವಣಿಗೆಗೆ ಕನ್ನಡ ವೈದ್ಯ ಬರಹಗಾರರ ವಾರ್ಷಿಕ ಸಮ್ಮೇಳನಗಳು ಮೈಲುಗಲ್ಲುಗಳು. ಕಳೆದ ಹಲವು ವರ್ಷಗಳಿಂದ ಕನ್ನಡ ವೈದ್ಯ ಬರಹಗಾರರ ಸಮಿತಿ ಅನೇಕ ವೈವಿಧ್ಯಮಯ ಕಾರ್ಯಕ್ರಮಗಳ ಮೂಲಕ ಕನ್ನಡ ಬಳಸಿ ವೈದ್ಯ ಸಾಹಿತ್ಯ ಬೆಳೆಸಿ ಘೋಷ ವಾಕ್ಯಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸಿದೆ. ಎಲ್ಲಾ ಕನ್ನಡ ವೈದ್ಯ ಬರಹಗಾರರು ಸಮ್ಮೇಳನಕ್ಕೆ ನೋಂದಾಯಿಸಿ ಸಕ್ರಿಯವಾಗಿ ಭಾಗವಹಿಸಿ ಯಶಸ್ವಿಗೊಳಿಸಿ. ಬೆಳಗಾವಿಯಲ್ಲಿ ಭೇಟಿಯಾಗುವ ಉತ್ಸಾಹದಲ್ಲಿ

ನಿಮ್ಮ ಅಭಿಪ್ರಾಯಗಳಿಗಾಗಿ ಕಾಯ್ದಿರುವ

ಪ್ರಧಾನ ಸಂಪಾದಕರು



**ವಿನುತಾ ಡಿ**
ತೃತೀಯ ಎಂಬಿಬಿಎಸ್,
ಸುಬ್ಬಯ್ಯ ವೈದ್ಯಕೀಯ ಮಹಾವಿದ್ಯಾಲಯ, ಶಿವಮೊಗ್ಗ

ವಿದ್ಯಾರ್ಥಿ ಲೋಕ

# ಕೆಡವರ್ ಎಂಬ ಜ್ಞಾನಸಂಪತ್ತನ್ನು ಭೇಟಿಯಾದ ಕ್ಷಣ



ಡಾ. ಶುಭ್ರತಾ ಕೆ. ಎಸ್.
ವಿಭಾಗೀಯ ಸಂಪಾದಕರು

ಎಲ್ಲಾ ವೈದ್ಯವಿದ್ಯಾರ್ಥಿಗಳ ಜೀವನದಲ್ಲಿ ಅವರು ಇಷ್ಟಪಟ್ಟರೂ, ಇಷ್ಟಪಡದಿದ್ದರೂ ಎಂದಿಗೂ ಅಳಿಸಲಾಗದ ನೆನಪೇ ಅಂಗರಚನಾ ಶಾಸ್ತ್ರದ ಜ್ಞಾನ ಸಂಪತ್ತಿನ ಮಾಲಿಕನೇ ಕೆಡವರ್.

ಜಗತ್ತಿನಲ್ಲಿ ಸತ್ತ ನಂತರವೂ ಸಾವಿರಾರು ಜೀವಗಳನ್ನು ಬದುಕಿಸುವ ಶಕ್ತಿ ಇರುವುದು ಕೆಡವರ್ ಎಂಬ ವೈದ್ಯಗುರುವಿಗೆ ಮಾತ್ರ.

ನನಗೆ ಚಿಕ್ಕಂದಿನಿಂದಲೂ ವೈದ್ಯಳಾಗಬೇಕೆಂಬ ಕನಸಿತ್ತು. ದೇವರ ದಯೆಯಿಂದ ಆ ಕನಸು ನನಸಾಗುತ್ತಿದೆ. ಹಾಗಾಗಿ ಕೆಡವರ್ ಅನ್ನು ನೋಡಬೇಕೆಂಬ ಹುಚ್ಚುತನವೋ ಅಥವಾ ಆಸಕ್ತಿಯೋ ತಿಳಿಯದು, ಯಾವಾಗಲೂ ನೋಡುವ ಅವಕಾಶಕ್ಕಾಗಿ ಕಾಯುತ್ತಿದ್ದೆ. ನಾನು ಮೈಸೂರಿನವಳು. ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಪ್ರತೀ ವರ್ಷ ಪ್ರದರ್ಶನ (exhibition) ಮಾಡುತ್ತಾರೆ. ನನಗೆ ಈ ವಿಷಯ ತಿಳಿದದ್ದು ನಾನು ೭ನೇ ತರಗತಿಯಲ್ಲಿ ಇರುವಾಗ. ಪ್ರತೀ ವರ್ಷ ನೋಡುವ ಆಸೆ ನಿರಾಸೆಯಾಗುತ್ತಿತ್ತು. ಒಮ್ಮೆ ನಾನು ನೀಟ್ ಪರೀಕ್ಷೆಗೆ ತಯಾರಿಯಾಗುತ್ತಿರುವಾಗ ಮೈಸೂರು ವೈದ್ಯಕೀಯ ಮಹಾವಿದ್ಯಾಲಯದ ಹತ್ತಿರ ಹೋಗಿದ್ದೆ. ಆಗ ಮೆಡಿಕಲ್ ಕಾಲೇಜ್ ಹೇಗೆ ಇರುತ್ತದೆ ನೋಡೋಣ ಎಂಬ ಕುತೂಹಲದಿಂದ ಒಳಗೆ ಹೋದೆ. ಆಗಲೂ ನನ್ನ ಕಣ್ಣುಗಳು ಹುಡುಕುತ್ತಿದ್ದದ್ದು ಡಿಸೆಕ್ಷನ್ ಕೊಠಡಿಯನ್ನು. ಆದರೆ ತಲೆಯಲ್ಲಿ ಓಡುತ್ತಿದ್ದದ್ದು ದೇಹರಚನೆಯನ್ನು ಕಂಡು ಆಶ್ಚರ್ಯಳಾಗುತ್ತೇನೋ ಅಥವಾ ಭಯಪಡುತ್ತೇನೋ ಅಥವಾ ಸಿನಿಮಾದಲ್ಲಿ ನೋಡುವ ಹಾಗೆ ಮೂರ್ಛೆ ತಪ್ಪುತ್ತೇನೋ ಎಂದು.

ಶವಾಗಾರ ಎಂಬ ಬೋರ್ಡ್‌ನ್ನು ನೋಡಿ ಡಿಸೆಕ್ಷನ್ ಕೊಠಡಿ ಎಂದು ಅಂದುಕೊಂಡು ಅದರ ಒಳಗೆ ಹೋದೆ. ಶವಗಾರವನ್ನು ನೋಡುಕೊಳ್ಳುತ್ತಿದ್ದ ವ್ಯಕ್ತಿ ನಾನು ಕೆಡವರ್‌ಅನ್ನು ತೋರಿಸಿ ಎಂದಿದ್ದಕ್ಕೆ, ಅವರಿಗೆ ನಾನು ಕೇಳಿದ್ದು ಅರ್ಥವಾಗದೇ, Freezer ಅಲ್ಲಿ ಇದ್ದ ಅನಾಥ ವೃದ್ಧೆಯ ಶವವನ್ನು ತೋರಿಸಿದರು. ನಂತರ ವಿಚಾರಿಸಿದಾಗ ತಿಳಿಯಿತು, ಡಿಸೆಕ್ಷನ್ ಕೊಠಡಿಯಲ್ಲಿ ಪರೀಕ್ಷೆ ನಡೆಯುತ್ತಿದ್ದದರಿಂದ ನನಗೆ ನೋಡಲು ಆ ಸಮಯದಲ್ಲಿ ಅನುಮತಿ ಇಲ್ಲ ಎಂದು. ಆವತ್ತೂ ನಿರಾಸೆಯಲ್ಲೇ ದಿನ ಕಳೆದೆ.

ನಂತರ ಎಂ.ಬಿ.ಬಿ.ಎಸ್. ಮೊದಲ ದಿನದಂದು ಡಿಸೆಕ್ಷನ್ ಕೊಠಡಿಗೆ ಕರೆದುಕೊಂಡು ಹೋಗುತ್ತಾರೆ ಎಂಬ ಆಸೆ ನಿರಾಸೆಯಾಯಿತು. ಏಕೆಂದರೆ ಅವರು ೫ ದಿನಗಳ ನಂತರ ಕರೆದುಕೊಂಡು ಹೋದರು.

ಕೊನೆಗೂ ನನ್ನ ಗುರುವನ್ನು ನೋಡುವ ಸಮಯ ಬಂದೇಬಿಟ್ಟಿತು. ಎಷ್ಟೋ ವರ್ಷಗಳ ಆಸೆ ನೆರವೇರಿತು. ಕೆಲವರಿಗೆ ಇದು ಹುಚ್ಚುತನ ಎನಿಸಬಹುದು, ಆದರೆ ಜಗತ್ತಿನಲ್ಲಿ ಎಲ್ಲರೂ ಯಾವುದಾದರೊಂದು ಆಸೆ ಹಿಂದೆ ಓಡುತ್ತಿರುತ್ತಾರೆ.



ಅಂತಹದೇ ಒಂದು ಆಸೆ ಹಿಂದೆ ನಾನು ಓಡುತ್ತಿದ್ದೆ.

ದಿನ ಕಳೆದಂತೆ ತಿಳಿಯಿತು, ಕೆಡವರ್ ಒಂದು ತರಹ ಗುಪ್ತಜ್ಞಾನ ನಿಧಿ ಇದ್ದ ಹಾಗೆ. ಹುಡುಕಿದಷ್ಟು ಹೊಸ ಹೊಸ ವಿಷಯ ತಿಳಿಯುತ್ತದೆ.

ದೇಹ ರಚನೆಯ ವಿಜ್ಞಾನದ ಮುಂದೆ ಯಾವ ಮನುಷ್ಯನ ಕಠಿಣವಾದ ಆವಿಷ್ಕಾರವೂ ಸರಿಸಾಟಿ ಇಲ್ಲ ಎಂದೆನಿಸುತ್ತದೆ. ಮನುಷ್ಯನು ತನ್ನ ಬುದ್ಧಿವಂತಿಕೆಯಿಂದ ಅಂಗರಚನಾ ಶಾಸ್ತ್ರವನ್ನು ಅರ್ಥ ಮಾಡಿಕೊಳ್ಳಲು ಎಂಥಹ ತಂತ್ರಜ್ಞಾನವನ್ನು ಸೃಷ್ಟಿಸಿದ್ದರೂ, ಕೆಡವರ್ ಎಂಬ ಮೂಕ ಶಿಕ್ಷಕ ಬೋಧಿಸುವ ಪ್ರಾಯೋಗಿಕ ಅನುಭವದ ಜ್ಞಾನದ ರುಚಿ ಉಣಿಸಲು ಸಾಧ್ಯವಿಲ್ಲ.

ಈಗಲೂ ಯಾವುದಾದರೂ ಅಂಗಗಳ ಬಗ್ಗೆ ಓದುವಾಗ ಆ ನನ್ನ ಗುರುವಿನ ದೇಹದ ಚಿತ್ರಪಟವನ್ನು ನೆನಪಿಸಿಕೊಳ್ಳದೇ ವಿಷಯವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ.

ಅಂಗರಚನಾ ಶಾಸ್ತ್ರ ಕಷ್ಟವೆನಿಸಬಹುದು. ಇಷ್ಟವಾಗದೇ ಇರಬಹುದು. ಆದರೆ ಪ್ರತಿಯೊಂದು ರೋಗಿಯ ಕಾಯಿಲೆ ಅರ್ಥ ಮಾಡಿಕೊಳ್ಳಲು ಅಥವಾ ಶಸ್ತ್ರಚಿಕಿತ್ಸೆ ಮಾಡಲೂ ಕೆಡವರ್ ಎಂಬ ಜ್ಞಾನ–ನಕ್ಷೆ ಇಲ್ಲದೇ ರೋಗವನ್ನು ಸರಿಪಡಿಸಲು ಸಾಧ್ಯವೇ??

ಪ್ರತೀ ಅಂತ್ಯದಲ್ಲೂ ಆರಂಭವಿರುತ್ತದೆ ಎಂಬ ಅರಿವಾಯಿತು. ಸತ್ತ ನಂತರ ಜೀವಬೆಳಕು ಕತ್ತಲಾಯಿತೆಂದು ಅನ್ನಿಸಬಹುದು. ಆದರೆ ಕೆಡವರ್ ಎಂಬ ಜೀವ ಸಾವಿರಾರು ಜೀವದೀಪಗಳನ್ನು ಪ್ರಕಾಶಮಾನವಾಗಿ ಬೆಳಗುವಂತೆ ಮಾಡುತ್ತದೆ.

ಪ್ರತಿಯೊಬ್ಬ ವೈದ್ಯನೂ ಕೆಡವರ್‌ಗೆ ಚಿರಋಣಿಯಾಗಿರಬೇಕು. ನಿಸ್ವಾರ್ಥ ಜ್ಞಾನಭಿಕ್ಷೆ ನೀಡುತ್ತದೆ, ಗುರುದಕ್ಷಿಣೆಯಾಗಿ ಏನನ್ನೂ ಬಯಸುವುದಿಲ್ಲ. ನಾವೆಲ್ಲರೂ ಕೊಡಬಹುದಾದ ಗುರುದಕ್ಷಿಣೆ, ಕೆಡವರ್‌ಗೆ ಸಲ್ಲಿಸಬೇಕಾದ ಗೌರವ ಮತ್ತು ಸಂಪಾದಿಸಿದ ಜ್ಞಾನದ ಸದುಪಯೋಗ. ○




**ಡಾ. ರಮೇಶ್ ಬಾಬು**
ನಿವೃತ್ತ ಪ್ರಾಧ್ಯಾಪಕರು, ಹುಬ್ಬಳ್ಳಿ

ಪದಬಂಧ

# ಪದಬಂಧ – ೧೯



**ಡಾ. ಸುಮಾ ಗುಡಿ**
ವಿಭಾಗೀಯ ಸಂಪಾದಕರು



**ಎಡದಿಂದ ಬಲಕ್ಕೆ:**

೧. ಕಂತು ಕಂತುಗಳಲ್ಲಿ ಪ್ರಕಟವಾಗುವ ಕತೆ? (೪) ೩. ಕೊನೆಗೂ ಆ ಕೊಲೆ______ಯನ್ನು ಪತ್ತೆಹಚ್ಚಿದರು (೩) ೫. ಸತ್ಯಭಾಮೆ ಶ್ರೀಕೃಷ್ಣನ ಬಳಿ ಕೇಳಿದ ಪುಷ್ಪ (೪) ೭. ದನವಲ್ಲ ಈ ಅನಂಗ (೩) ೮. ಬಾಲ ಶ್ರೀರಾಮನಿಂದ ಹತಳಾದ ರಕ್ಕಸಿ (೩) ೯. ಶಿವನ ವಾದ್ಯ (೪) ೧೧. ತನ್ನ ಮಗನೊಡನೆ ತನ್ನ ವೃಧ್ಯಾಪ್ಯವನ್ನು ಬದಲಿಸಿಕೊಂಡವನು (೩) ೧೩. ಮನುಷ್ಯರಲ್ಲಿಯೇ ಅತ್ಯಂತ ಕೀಳಾದವನು (೪) ೧೫. ಮರ್ಯಾದೆಯನ್ನೇ ಸಂಪತ್ತೆಂದು ತಿಳಿದವನು (೪) ೧೭. ಆಧಾರ (೩) ೧೯. ವೈಭವವನ್ನು ಬಯಸದ (೪) ೨೧. ರಮಣಿಯ ಪತಿ? (೩) ೨೨. ಅಲ್ಪ ಕಾಲಿಕ (೩) ೨೩. ವಿಧಾನಸಭೆ/ಲೋಕಸಭೆಯಲ್ಲಿ ಮಂಡಿಸಲಾಗುವ ನಿಯಮ (೪) ೨೫. ಹಾಸಿಗೆಯಲ್ಲಿ ಹಿಂಸಿಸುವ ಕೀಟ (೩) ೨೭. ಅವಸರ (೪) ೨೯. ರತ್ನಗಳಿಂದ ಮಾಡಿದ ಸರ (೪) ೩೧. ಅತಿ ಶ್ರೇಷ್ಠ (೩) ೩೩. ಗಣಗಳಿಗೆ ಒಡೆಯ (೪) ೩೫. ಸಾಮಾನ್ಯವಾಗಿ ಮನೆಯ ಮಧ್ಯ ಭಾಗದ ಕೋಣೆ (೩) ೩೬. ಹಳೆಯ ಕಾಲದ ಅತ್ಯಂತ ಕನಿಷ್ಠ ನಾಣ್ಯ (೩) ೩೭. ________ಯಾಗಿ ಇಸ್ತ್ರಿ? ಮಾಡಿದ ಉಡುಪು (೪) ೩೮. ಸಂಪತ್ತನ್ನು ಕೂಡಿಡುವ ಪೆಟ್ಟಿಗೆ (೪) ೩೯. ಯುದ್ಧದಲ್ಲಿ ಅನುಸರಿಸುವ ಯೋಜನೆ (೪)

**ಮೇಲಿನಿಂದ ಕೆಳಕ್ಕೆ:**

೧. ವಿದ್ಯಾಕಾಶಿ ಎಂದು ಹೆಸರಾದ ಉತ್ತರ ಕನ್ನಡದ ನಗರ (೪) ೨. ಈ ಯುಗದಲ್ಲಿ ಯಾವಾಗಲೂ ಮಂಜು ಸುರಿಯುತ್ತಿತ್ತೇ? (೪) ೩. ಮದ್ಯವ್ಯಸನಿಯನ್ನು ಹೀಗೂ ಕರೆಯಬಹುದಲ್ಲವೇ? (೪) ೪. ಕೀಟಲೆ ಮಾಡುವ ಪತಿ? (೪) ೫. ಸದಾ ಕಾಲುಕೆರೆಯುವ ನಮ್ಮ ನೆರೆದೇಶ (೪) ೬. ಹೀಗೆ ಬೇಧ ಮಾಡುವದು ಸರಿಯಲ್ಲ. (೪) ೧೦. ಪಾಠಗಳನ್ನು ಸರಿಯಾಗಿ ______ ಮಾಡಿಕೊಳ್ಳುವುದು ಉತ್ತಮ (೩) ೧೨. ಯಾತ್ರಾ ಸ್ಥಳಗಳ ಸಂದರ್ಶಕ? (೩) ೧೪. ಅಚ್ಚ ಬಿಳಿಬಣ್ಣ (೩) ೧೫. ಡಾ. ಅನುಪಮಾ ನಿರಂಜನ ರಚಿಸಿದ ಪೌರಾಣಿಕ ಕಾದಂಬರಿ (೩) ೧೬. ನಾಕವಲ್ಲ (೩) ೧೭. ಆಜ್ಞೆ (೩) ೧೮. ದೇಶದ ______ ಮಾಡುವುದು ಸೈನಿಕರ ಕಾಯಕ (೩) ೧೯. ಎಲ್ಲವೂ (೩) ೨೦. ಸರಕಾರಕ್ಕೆ ಸಲ್ಲಿಸಬೇಕಾದ ಹಣ (೩) ೨೪. ಭೂಮಿಯನ್ನು ಹೀಗೂ ಕರೆಯುತ್ತಾರೆ (೩) ೨೬. ಹಳ್ಳಿ ________ನೆಂದು ಹಳಿಯದಿರಿ ೨೮. ಮಕ್ಕಳ ಲೇಖನಿ (೩) ೨೯. ಸ್ವಂತ ಮಗನಲ್ಲ (೪) ೩೦. ವಿದೇಶ ಪ್ರಯಾಣಕ್ಕೆ ಬೇಕಾಗುವ ಒಪ್ಪಿಗೆ (೪) ೩೧. ಇನ್ನೊಬ್ಬನ ಪತ್ನಿ (೪) ೩೨. ಆರಾಧಿಸುವೆ ______ ಆದರಿಸು ನೀ ದಯೆತೋರಿ (೪) ೩೩. ಕಾಲಯಂತ್ರ (೪) ೩೪. ವೆಂಕಟರಮಣನ ಪ್ರಸಿದ್ಧ ಯಾತ್ರಾ ಸ್ಥಳ (೪)

**ಕಳೆದ ಸಂಚಿಕೆಯ ಪದಬಂಧ – ೧೬ರ ಸರಿಯುತ್ತರಗಳು**

**ಎಡದಿಂದ ಬಲಕ್ಕೆ**

೧. ಸೀತಾಪತಿ ೨. ಹಸಿರು ಹೊನ್ನು ೩. ರಾವಣ ೪. ದೂರ ಸರಿದರು ೫. ಗಳಗನಾಥ ೬. ಚಂದವಳ್ಳಿಯ ತೋಟ ೭. ನನ್ನ ಭಯಾಗ್ರಫಿ ೮. ಮಳಖೇಡ ೯. ರುದ್ರ ಪ್ರಯಾಗ ೧೦. ತಬ್ಬಲಿಯು ನೀನಾದೆ ಮಗನೆ ೧೧. ಕನ್ನಡಿಯಲ್ಲಿ ಕಂಡಾತ ೧೨. ಲಕ್ಕುಂಡಿ ೧೩. ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೇರಿಕ ೧೪. ಕುದುರೆಮುಖ ೧೫. ಪರಸಂಗದ ಗೆಂಡೆತಿಮ್ಮ ೧೬. ಥಟ್ ಅಂತ ಹೇಳಿ ೧೭. ತವರ ೧೮. ಗಡಿನಾಡು

**ಮೇಲಿನಿಂದ ಕೆಳಕ್ಕೆ :**

೧. ಸೀಮೋಲ್ಲಂಘನ ೨. ಪರಶುರಾಮ ೩. ಸಿಗಂಧೂರು ೪. ಮಲೆಗಳಲ್ಲಿ ಮದುಮಗಳು ೫. ಸರಸಮ್ಮನ ಸಮಾಧಿ ೬. ದೂದಸಾಗರ ೭. ದಮಯಂತಿ ೮. ಯಶವಂತ ಚಿತ್ತಾಲ ೯. ಟಗರು ೧೦. ಖೇಚರ ೧೧. ಉತ್ತರಾಯಣ ೧೨. ಮತದಾನ ೧೩. ಕಂಬನಿಯ ಕುಯಿಲು ೧೪. ಸದಾನಂದ ೧೫. ಹೊನ್ನಿನ ರಥ ೧೬. ಮೇರುಪರ್ವತ ೧೭. ಮುಖಜ ಭೂಮಿ ೧೮. ನಾಪಿತ ೧೯. ಸಂಧ್ಯಾರಾಗ



ಸಂದರ್ಶನ

# ಕನ್ನಡ ವೈದ್ಯ ಬರಹಗಾರರ ೫ನೇ ರಾಜ್ಯ ಸಮ್ಮೇಳನದ ಸರ್ವಾಧ್ಯಕ್ಷರೊಂದಿಗೆ ಸಂದರ್ಶನ

**ಡಾ. ಇಂದಿರಾ ದೊಡ್ಡಬಳ್ಳಾಪುರ**
ಸಂದರ್ಶಕರು



ಡಾ. ಅರವಿಂದ ಪಟೇಲ್
ವಿಭಾಗೀಯ ಸಂಪಾದಕರು

ಡಾ. ಸೋಮೇಶ್ವರ ಇಂದು ಕನ್ನಡ ನಾಡಿಗೆ ಬರಿಯ ಹೆಸರಾಗಿ ಉಳಿದಿಲ್ಲ" ಥಟ್ ಅಂತ ಹೇಳಿ ಸೋಮೇಶ್ವರ್ 'ಪುಸ್ತಕ ಸಂಸ್ಕೃತಿಯ ಭಾಗ' ಅಚ್ಚ ಕನ್ನಡದ ಹರಿಕಾರರು. ಅವರ ಸಂದರ್ಶನ ನಾನು ಮಾಡುತ್ತ ಇರುವುದೇ ನನಗೊಂದು ಹೆಮ್ಮೆ. ಈ ಬಾರಿಯ ವೈದ್ಯ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿ ಒಮ್ಮನದಿಂದ ಒಕ್ಕೊರಲಿನಿಂದ ಬಂದ ಹೆಸರೇ ಡಾ. ನಾ. ಸೋಮೇಶ್ವರ. ಅವರ ಸಾಧನೆಯ ಗರಿಗಳು ಅಪಾರ. ಅವರ ಮೇರು ವ್ಯಕ್ತಿತ್ವದ ಎಲ್ಲ ಆಯಾಮದ ಪರಿಚಯ ಮಾಡಲು ಪ್ರಯತ್ನಿಸುತ್ತಾ ಸಂದರ್ಶನ ಆರಂಭಿಸೋಣ

**ಸಂದರ್ಶಕಿ : ನಿಮ್ಮ ಬಾಲ್ಯ ಕಾಲದ ವಿಚಾರಗಳ, ವಿದ್ಯಾಭ್ಯಾಸದ ಬಗ್ಗೆ ಹೇಳುವಿರಾ?**

**ಡಾ. ಸೋಮೇಶ್ವರ್ :** ಅತ್ಯಂತ ಸರಳ ಬದುಕು, ಎಳವೆಯಲ್ಲೇ ತೀರಿ ಹೋದ ತಂದೆ ಅನಕ್ಷರಸ್ಥೆ ತಾಯಿ ವ್ಯವಹಾರ ಜ್ಞಾನ ತಿಳಿಯದೆ ಸಂಪತ್ತನ್ನು ಉಳಿಸಿಕೊಳ್ಳಲಾಗಲಿಲ್ಲ. ಮಲ್ಲೇಶ್ವರದ ಸರಕಾರಿ ಶಾಲಾ ಕಾಲೇಜಿನಲ್ಲೇ ನಮ್ಮ ವಿದ್ಯಾಭ್ಯಾಸ, ಆದರೆ ತುಂಬಾ ಒಳ್ಳೆಯ ಅಧ್ಯಾಪಕರು ನಮಗೆ ಸಿಕ್ಕರು–ರಾಮಚಂದ್ರ ಶರ್ಮ ತ್ಯಾಗಲಿ, ಸಂಪಟೂರು ವಿಶ್ವನಾಥ್ ಅವರಂತೂ ನಾಟಕ, ಸ್ವರ ನಿಯಂತ್ರಣ, ಧ್ವನಿ ಏರಿಳಿತ ಎಲ್ಲವನ್ನೂ ತರಬೇತಿಯ ಮೂಲಕ ನಮ್ಮೊಳಗೆ ಅಂತರ್ಗತಗೊಳಿಸಿದರು. ನಾನು ಇಂದು ಎಷ್ಟೇ ಹೊತ್ತು ಮಾತನಾಡಿದರೂ ಧ್ವನಿಯಲ್ಲಿ ಆಯಾಸ ಕಾಣದ ಹಾಗೆ ತಯ್ಯಾರಿ ಕೊಟ್ಟವರು ಅವರು. ನನ್ನ ಸುಧೀರ್ಘ ಮಾತುಕತೆ ಅವರದೇ ಕೃಪೆ. ರಾಮಚಂದ್ರ ತ್ಯಾಗಲಿ ಅವರನ್ನಂತೂ "ಹಿಂಸಕ" ಎಂದು ಕರೆಯುತ್ತಿದ್ದೆವು. ಹಿಂದಿ, ಸಂಸ್ಕೃತ, ಮತ್ತು ಕನ್ನಡದ ಪ್ರಕಾಂಡ ಪಂಡಿತರು. ತುಂಬ ಪ್ರೀತಿಯಿಂದ ನಮ್ಮ ವ್ಯಕ್ತಿತ್ವವನ್ನು ಇಂಚಿಂಚಾಗಿ ಕಡೆದವರು ನಮಗೆ ಸಿಕ್ಕ ಅಧ್ಯಾಪಕರು.

ಬಿ.ಎಸ್.ಸಿ.ಯಲ್ಲಿ ಬಾಟ್ನಿ ಝೂವಾಲಜಿ ಆದ ನಂತರ ಎಂ.ಎಸ್.ಸಿ.ಗೆ ಹೋಗಲು ಆಸೆಯಿತ್ತು. ಇರಲಿ ಎಂದು ಅರ್ಜಿ ಹಾಕಿದ್ದ ವೈದ್ಯಕೀಯ ಸೀಟೂ ಬೆಂಗಳೂರು ಮೆಡಿಕಲ್ ಕಾಲೇಜಿನಲ್ಲೇ ಸಿಕ್ಕಿತು. ಖರ್ಚು ವೆಚ್ಚದ ಚಿಂತೆಯಲ್ಲಿದ್ದ. ನನಗೆ ಅಧ್ಯಾಪಕರ ನೆರವಿನಿಂದ ಬ್ಯಾಂಕ್ ವಿದ್ಯಾಸಾಲ ದೊರೆತು ಬಿ. ಎಂ. ಸಿ.ಗೆ ಅಡಿಯಿಟ್ಟೆ. ದೂರದರ್ಶನದಲ್ಲಿ ಆಗ ವಿವಿಧ ಕಾಲೇಜುಗಳಿಂದ ಕಾರ್ಯಕ್ರಮಗಳು ಜರುಗುತ್ತಿತ್ತು. ಬಿ.ಎಂ.ಸಿ. ಯಿಂದ ಒಂದು ನಾಟಕ ಹಾಡು ಸ್ಕಿಟ್ ಮಾಡಿಬಂದೆವು. ಮುಂದೆ ದೂರ ದರ್ಶನದಲ್ಲಿ ಆರೋಗ್ಯ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದೆ.



**ಸಂದರ್ಶಕಿ : ವೈದ್ಯರಾಗದಿದ್ದರೆ ಬೇರೆ ಏನು ಆಗಿರುತ್ತಿದ್ದಿರಿ?**

**ಡಾ. ಸೋಮೇಶ್ವರ್ :** ಬಹುಶಃ

ಕನ್ನಡ ಸಾಹಿತ್ಯ–ನಾಟಕಗಳು ನನ್ನ ಆಯ್ಕೆ ಆಗಿರುತ್ತಿತ್ತು. ಕಾಲೇಜು ಜೀವನದಲ್ಲಿ ಸಾಕಷ್ಟು ನಾಟಕ ಬರೆದು ನಿರ್ದೇಶಿಸಿದ್ದೆ. ಗಂಭೀರ ಎಳೆಗಳ ದೀರ್ಘ ನಾಟಕಗಳು ನನ್ನ ಮೊದಲ ಆಯ್ಕೆ ಅಗಿತ್ತು.

ಚಿಕ್ಕ ಚಿಕ್ಕ ಅಂಶಗಳನ್ನು ತಿಳಿಸಿಕೊಡುವ ಕಿರು ನಾಟಕಗಳು, ಆಶು ನಾಟಕಗಳೂ ಬಹಳ. ಒ. ಆರ್. ಎಸ್. ವಾಂತಿ ಬೇಧಿ ಆದಾಗ ಕಾಲರಾ ಆದಾಗ ನಿರ್ಜಲೀಕರಣವನ್ನು ತಡೆಯಬಲ್ಲ ಅಮೃತಸಮಾನದಂತ ಪುಡಿ, ನೀರಿನಲ್ಲಿ ಬೆರೆಸಿ ನಿರಂತರ ಸೇವಿಸುತ್ತಾ ಇದ್ದರೆ ಜೀವ ಉಳಿಯುತ್ತದೆ. ಅದು ಆಗಷ್ಟೇ ಚಾಲ್ತಿಗೆ ಬಂದಿತ್ತು. ಈ ಪರಿಕಲ್ಪನೆಯನ್ನು ಬುದ್ಧ ಕಿಸಾ ಗೌತಮಿಯರ ಕಥೆಯ ಹಿನ್ನಲೆಯ ಕಿರುನಾಟಕ ಬರೆದು ಪ್ರಚಾರ ಮಾಡಿದ್ದೆವು, ಕುಟುಂಬ ಯೋಜನೆಯ ಪರಿಕಲ್ಪನೆಗೆ ಸತ್ಯವಾನ್ ಸಾವಿತ್ರಿ ಕಥೆಯ ಯಮಧರ್ಮರಾಜ ನೂರು ಮಕ್ಕಳು ಬೇಡ, ಒಂದು ಬೇಕು–ಎರಡು ಸಾಕು ಎಂದು ಹಿತವಚನ ನುಡಿಯುತ್ತಾನೆ!!

**ಸಂದರ್ಶಕಿ : ಇನ್ನು ಬೇರೆ ಆಗಬಹುದಿತ್ತೇ ?**

**ಡಾ. ಸೋಮೇಶ್ವರ್:** ಸಸ್ಯಶಾಸ್ತ್ರ ನನ್ನ ಅತ್ಯಂತ ಪ್ರೀತಿಯ ವಿಷಯ, ಪ್ರತಿ ಸಸ್ಯ ಪ್ರಭೇದಕ್ಕೂ ಒಂದೊಂದು ಐತಿಹ್ಯ ಪುರಾಣ ಕಥೆ ತಳಕು ಹಾಕಿಕೊಂಡಿದೆ. ಬಹುಶಃ ಸಸ್ಯಶಾಸ್ತ್ರಜ್ಞನಾಗಿರುತ್ತಿದ್ದೆ. ಮಕ್ಕಳಿಗೆ ಹಸಿರಿನ ಕತೆ ಹೇಳುವುದೂ ನನ್ನ ಪ್ರೀತಿಯ ವಿಷಯಗಳಲ್ಲಿ ಒಂದು.

**ಸಂದರ್ಶಕಿ : ಡಾಕ್ಟರ್ ಆದ ಕೂಡಲೆ ಪ್ರಾಕ್ಟೀಸ್ ಮಾಡಲು ಪ್ರಯತ್ನಿಸಲಿಲ್ಲವಾ?**

**ಸೋಮೇಶ್ವರ್ :** ನಾವು ಸಾದ್ಯಂತ ವೈದ್ಯಕೀಯ ಪರೀಕ್ಷೆ ನಡೆಸಿ ರೋಗನಿದಾನ ಮಾಡಿ ಚಿಕಿತ್ಸೆ ಕೊಟ್ಟಾಗ ಬರುವ ರೋಗಿಗಳು ಈವತ್ತು ಹಣವಿಲ್ಲ ಬರ್ಕೊಳಿ ನಾಳೆ ತರ್ತೀನಿ ಎನ್ನುವ ಜನರೇ ಆದಾಗ ವೃತ್ತಿಯೇ ದುಬಾರಿಯಾಯ್ತು, ರವಿ ಕಿರ್ಲೋಸ್ಕರ್ ಆಸ್ಪತೆಯಲ್ಲಿ ಕೆಲಸವೂ ಸಿಕ್ಕ ಮೇಲೆ ನನ್ನ ಎಲ್ಲ ಕೆಲಸ, ಹವ್ಯಾಸಗಳಿಗೂ ದೂರದರ್ಶನ ಕಾರ್ಯಕ್ರಮಗಳಿಗೂ ಅನುಕೂಲವಾಯ್ತು.

**ಸಂದರ್ಶಕಿ : ಉತ್ತರ ಕರ್ನಾಟಕ ಮತ್ತು ನಿಮ್ಮ ಬಾಂಧವ್ಯ ಹೇಗೆ ಶುರುವಾಯಿತು?**

**ಸೋಮೇಶ್ವರ್ :** ಯಾವುದೋ ಋಣ ನನ್ನನ್ನು ಅಲ್ಲಿಗೆ ಕರೆದೊಯ್ಯಿತು. ಡಾ. ಪಿ. ಎಸ್. ಶಂಕರ್ ಅವರು ಅವರ ಹುಟ್ಟುಹಬ್ಬವನ್ನು ಅತಿ ವಿಶಿಷ್ಟವಾಗಿ ಆಚರಿಸುತ್ತಾರೆ. ಅಲ್ಲಿ ಯಾರಿಗೂ ತನ್ನ ಹುಟ್ಟುಹಬ್ಬವೆಂದು ಹೇಳಿಕೊಳ್ಳದೇ ಅರೋಗ್ಯ ಸಂಭ್ರಮವನ್ನಾಗಿ ಆಚರಿಸುತ್ತಾರೆ.ಆರೋಗ್ಯ ವಿಚಾರ ವಿನಿಮಯ, ಚರ್ಚೆ, ಪುಸ್ತಕ ಬಿಡುಗಡೆ ಹೀಗೆ ದಿನವಿಡೀ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಅಲ್ಲಿ ಅವರು ನನ್ನ ಪುಸ್ತಕ “ಏಳುಸುತ್ತಿನ ಕೋಟೆಯೊಳಗೆ ಎಂಟು ಕೋಟಿ ಭಂಟರು “ವನ್ನು ನೋಡಿ ಪ್ರಶಸ್ತಿ ಕೊಟ್ಟರು. ಹಾಗೆಯೇ ಅಲ್ಲಿನ ಸಾಹಿತ್ಯಾಸಕ್ತ ಹಲವು ಹಿರಿಯರ ಪರಿಚಯವಾಯಿತು. ನನ್ನನ್ನು ಕೆಲವು ಕಾರ್ಯಕ್ರಮಗಳಿಗೆ ಕರೆದು ಅಲ್ಲಿಯ ಶಾಲಾಮಕ್ಕಳ, ಕಾಲೇಜು ವಿದ್ಯಾರ್ಥಿಗಳ ಜೊತೆ ಸಂಪರ್ಕವಾಯಿತು, ಅಲ್ಲದೆ ಸಾರ್ವಜನಿಕರನ್ನೂ ಕೂಡಿಸಿ ಸಂವಾದ ನಡೆಸುತ್ತಿದ್ದೆವು. ಆರಾಮವಾಗಿ ಅಶ್ವತ್ಥ ಕಟ್ಟೆಯ ಮೇಲೆ ಕುಳಿತು ಊರವರ ಆರೋಗ್ಯ – ಸಮಸ್ಯೆಗಳನ್ನು ಕೇಳಿ ಚರ್ಚಿಸಿ ಪರಿಹಾರ ಸೂಚಿಸಿ ಬರುತ್ತಿದ್ದೆವು. ಈಮಾತು ಕತೆಗಳು ಹಲವು ಬಾರಿ ರಾತ್ರಿ ಹನ್ನೊಂದು ದಾಟಿದ್ದೂ ಇದೆ. ಹೀಗೆ ಊರಿನವರು ನಮ್ಮ ಮೇಲೆ ಪ್ರೀತಿ ವಿಶ್ವಾಸ ತೋರುತ್ತಿದ್ದರು. ಆರೋಗ್ಯ ಸಂಬಂಧಿತ ಹಲವು ವಿಚಾರ ವಿನಿಮಯ ಮಾಡಲು ಇಲ್ಲಿ ಸಾಧ್ಯವಾಯಿತು.

ಶೈಕ್ಷಣಿಕವಾಗಿ ಅತಿ ಹಿಂದುಳಿದ ನಾಲ್ಕಾರು ತಾಲೂಕುಗಳು ಕೊಪ್ಪಳ, ಬೀದರ್, ಬಳ್ಳಾರಿ, ರಾಯಚೂರು ನಮ್ಮ ಕಾರ್ಯಕ್ಷೇತ್ರವಾಯಿತು. ಎಸ್. ಎಸ್. ಹಿರೇಮಠ ಅವರು ಅಲ್ಲಿನ ವಿದ್ಯಾರ್ಥಿಗಳ ನಿಕಟ ಸಂಪರ್ಕ ಇಟ್ಟುಕೊಂಡವರು. ನನಗೆ ಕಲಬುರ್ಗಿಗೆ ಕರೆದಾಗ ಒಂದು ದಿನದಲ್ಲಿ ಮೂರು ನಾಲ್ಕು ಕಡೆ ನಾನು ಮಾತನಾಡುವಂತೆ, ಎಲ್ಲಿಯೂ ಯಾರ ಸಮಯವೂ ವ್ಯರ್ಥವಾಗದಂತೆ ಮೊದಲೇ ಅತ್ಯುತ್ತಮ ಯೋಜನೆ ಮಾಡಿಟ್ಟುಕೊಂಡಿರುತ್ತಿದ್ದರು. ಯಾಕೆ ಈ ಮಕ್ಕಳಿಗೆ ಕಲಿಯಲು ಕಷ್ಟವಿದೆ? ಸದಾಕಾಲ ಈ ಭಾಗದ ಮಕ್ಕಳ ಕಳಪೆ ಪ್ರದರ್ಶನ ದೂರ ಮಾಡುವುದು ಹೇಗೆ? ಉತ್ತರವಾಗಿ ವ್ಯವಸ್ಥಿತ ರೀತಿಯಲ್ಲಿ ಓದುವ ನೆನಪಿಟ್ಟುಕೊಳ್ಳುವ ವಿಧಾನಗಳನ್ನು ಅವರಿಗೆ ಅರ್ಥವಾಗುವಂತೆ ಸರಳವಾಗಿ ಹೇಳಿಕೊಡಲು ಆರಂಭಿಸಿದೆವು. ಪ್ರತಿ ತಿಂಗಳ ಒಂದು ಶನಿವಾರ ಭಾನುವಾರ ಮಕ್ಕಳನ್ನು ಸೇರಿಸಿ ಅವರ ಕಲಿಕೆಗೆ ತರಬೇತಿಯನ್ನು ಕೊಡುವ ಪ್ರಯತ್ನ ನಡೆಯಿತು. ಆ ಎಲ್ಲ ಅಂಶಗಳನ್ನು “ಕಲಿಕೆ ಮತ್ತು ನೆನಪು “ಪುಸ್ತಕ ರೂಪದಲ್ಲಿ ತಂದೆವು. ಎಸ್. ಎಸ್. ಹಿರೇಮಠರ

ಒತ್ತಾಸೆ, ಸಾಂಗತ್ಯ ಇದನ್ನು ಸಾಧಿಸಿತು. ಇಲ್ಲಿ ಒಂದು ಸಂತಸದ ವಿಷಯ ಹಂಚಿಕೊಳ್ಳಬೇಕು. ದೊಡ್ಡಬಳ್ಳಾಪುರದಲ್ಲಿ ಅತಿ ವಿರಳ ಅನಾಥ ರೋಗಗಳ ಪ್ರಯೋಗಾಲಯವು ಕಾರ್ಯ ನಿರ್ವಹಿಸುತ್ತಿದೆ. ಅಲ್ಲಿ ಕೆಲಸ ಮಾಡುವ ವಿಜ್ಞಾನಿಯೊಬ್ಬ ಕಲಬುರ್ಗಿಯ ಅಭ್ಯರ್ಥಿ. ಆಕೆಯು ಕಲ್ಬುರ್ಗಿಯ ಹಿರೇಮಠರು ಆಯೋಜಿಸುತ್ತಿದ್ದ ಕಾರ್ಯಕ್ರಮಗಳ ವಿದ್ಯಾರ್ಥಿ ಆಗಿದ್ದವಳು. ಛಲದಿಂದ ಓದಿ ವಿಜ್ಞಾನಿಯಾಗಿ ನನ್ನ ಮುಂದೆ ತನ್ನ ಯಶೋಗಾಥೆ ಹೇಳಿಕೊಂಡಾಗ ಹಿರೇಮಠರ ಶ್ರಮಕ್ಕೆ ಫಲ ಸಿಕ್ಕಿದಂತಾಯಿತು.

ಹಾಗೆಯೇ ಅಲ್ಲಿ ಒಮ್ಮೆಒಂದು ದಿನಕ್ಕೆ ನಾಲ್ಕು ಕಾರ್ಯಕ್ರಮ ಇಟ್ಟುಕೊಂಡಿದ್ದರು. ಬೆಳಗ್ಗೆ ಎಂಟು ಗಂಟೆಗೆ ಶಾಲಾ ಮಕ್ಕಳೂ ಸೇರಿದ್ದರು. ಅವರ ನಿಸ್ತೇಜ ಮುಖಗಳು ಬೇರೆಯೇ ಕಥೆ ಹೇಳಿದ್ದವು. ಯಾರೆಲ್ಲಾ ತಿಂಡಿ ತಿಂದು ಬಂದಿದ್ದೀರಿ ಎಂದಾಗ ಒಂದೋ ಎರಡೋ ಮಕ್ಕಳನ್ನು ಹೊರತು ಪಡಿಸಿ ಮಿಕ್ಕ ಎಲ್ಲರೂ ಖಾಲಿ ಹೊಟ್ಟೆಯಲ್ಲಿ ಬಂದು ಕುಳಿತಿದ್ದರು. ನನ್ನ ಬಾಲ್ಯ ಇದಕ್ಕಿಂತ ಭಿನ್ನವಾದದ್ದಲ್ಲ...!! ಹಸಿದ ಹೊಟ್ಟೆಯಲ್ಲಿರುವ ಮಕ್ಕಳ ಮುಂದೆ ಪಾಠ ಮಾಡುವುದೆಷ್ಟು ಕ್ರೂರ.

ಕಾರ್ಯವಿಧಾನ ಬದಲಾಯಿಸಿ ಒಂಭತ್ತು ಗಂಟೆಯ ಮೇಲೆಯೇ ಮಕ್ಕಳ ತಿಂಡಿ ಆದ ಮೇಲೆಯೇ ನಮ್ಮ ಕಾರ್ಯಕ್ರಮ ಆರಂಭಿಸುತ್ತಿದ್ದೆವು. ಹದಿನೇಳು ವರ್ಷಗಳಿಂದ ಈ ಊರಿನ ಮಕ್ಕಳ ಬಾಂಧವ್ಯ ಮುಂದುವರೆಯುತ್ತಿದೆ.

ಒಮ್ಮೆ ಹಗರಿಬೊಮ್ಮನಹಳ್ಳಿಯಲ್ಲಿ ಸಮಾರಂಭ ಮುಗಿಸಿ ಬಳ್ಳಾರಿಗೆ ಬಂದು ಹೋಟೆಲ್ ಒಂದರಲ್ಲಿ ಊಟ ಮಾಡಿದೆವು. ಹಣ ಪಾವತಿಸಲು ಹೋದಾಗ ನಿಮ್ಮ ಹಣ ನಿಮ್ಮ ಅಭಿಮಾನಿಯಿಂದ ಸಂದಾಯವಾಗಿದೆ, ಎಂದು ವಿನಯದಿಂದ ಹೇಳಿದರು. ಯಾರು ಕೊಟ್ಟರು ನನಗೂ ತಿಳಿಯಲಿಲ್ಲ. ಹಿಂದೆ ಮುಂದೆ ಓಡಾಡಿ ಊಟ ಕೊಡಿಸಿದೆವೆಂಬ ಬಿಮ್ಮು ಹಮ್ಮು ಒಂದೂ ಇಲ್ಲದಂತೆ ಸದ್ದಿಲ್ಲದೆ ಆ ಹೊತ್ತಿನ ಹಸಿವು ನೀಗಿಸಿದ ಅಭಿಮಾನಿಗೆ ಒಂದು ಕೃತಜ್ಞತೆ.

**ಸಂದರ್ಶಕಿ : ಆಪರೇಷನ್ ಸಂಜೀವಿನಿ ರೂಪುಗೊಂಡಿದ್ದು ಹೇಗೆ**

**ಡಾ. ಸೋಮೇಶ್ವರ್ :** ಆಗ ನಾನು ಆಸ್ಟ್ರಾ ಝೆನೆಕಾ ಸಂಸ್ಥೆಯಲ್ಲಿ ವೈದ್ಯನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ, ಒಮ್ಮೆ ನಮ್ಮ ಸಂಸ್ಥೆಯ ಕಾರ್ಮಿಕನೊಬ್ಬನಿಗೆ




ನ್ಯೂರೋಸರ್ಜನ್ ಡಾ. ವೆಂಕಟರಮಣಯ್ಯ ಅವರ ಬಳಿ ಚಿಕಿತ್ಸೆಗಾಗಿ ಸಂಪರ್ಕಿಸಿದ್ದೆವು. ಆಗ ನನ್ನ ಕೆಲಸ ಆಸಕ್ತಿಗಳನ್ನು ಕುರಿತು ಮಾತನಾಡುತ್ತಾ ಅವರು ತತ್ ಕ್ಷಣಕ್ಕೆ ವೈದ್ಯಸೇವೆ ದೊರೆಯಲೇಬೇಕಾದಂತಹ ತುರ್ತು ಪರಿಸ್ಥಿತಿಗಳ ನಿರ್ವಹಣೆಗಳಿಗೆ ಸಮಯ ಅತಿಮುಖ್ಯವಾಗುತ್ತದೆ. ಆಸ್ಪತ್ರೆಗೆ ತಲುಪಲು ಅಂತಹ ಪರಿಸ್ಥಿತಿಯಲ್ಲಿ ಕ್ಷಣ ಕ್ಷಣದ ಗಣನೆಯೂ ಬಹುಮುಖ್ಯ. ಸುಸಜ್ಜಿತ ತುರ್ತು ಚಿಕಿತ್ಸಾವಾಹನ (ವೆಲ್ ಎಕ್ವಿಪ್ಡ್ ಆಂಬುಲೆನ್ಸ್) ಬೆಂಗಳೂರಿನಂಥ ನಗರದಲ್ಲಿ ತುಂಬಾ ಅವಶ್ಯಕ. ಈ ಒಂದು ವ್ಯವಸ್ಥೆಯನ್ನು ಆಪರೇಷನ್ ಸಂಜೀವಿನಿ ಹೆಸರಿನಲ್ಲಿ ಮಾಡುವ ಸಾಧ್ಯತೆಗಳ ಕುರಿತು ಚರ್ಚಿಸಿದರು. ಆಗ ಸರ್ಕಾರೀ ಆಂಬುಲೆನ್ಸ್ ವ್ಯವಸ್ಥೆ ಇರಲಿಲ್ಲ. ನಾನು ನಮ್ಮ ಸಂಸ್ಥೆಯಿಂದ ಒಂದು ವಾಹನದ ಪ್ರಾಯೋಜನೆ ಮಾಡಲು ಅಧಿಕಾರಿಗಳನ್ನು ಮನವೊಲಿಸಲು ಚರ್ಚಿಸಿದೆ. ಬೆಂಗಳೂರನ್ನು ನಾಲ್ಕು ವಿಭಾಗಗಳಂತೆ ಪರಿಗಣಿಸಿ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ದಿಕ್ಕುಗಳಲ್ಲಿ ಬೇರೆಬೇರೆ ವಾಹನಗಳ ವ್ಯವಸ್ಥೆಮಾಡಲು ನಿಯೋಜಿಸಲಾಯಿತು. ತುರ್ತು ಸಂಖ್ಯೆ 1068. ಕರೆ ಮಾಡಿದರೆ ಪ್ರಧಾನ ಕೇಂದ್ರಕ್ಕೆ ಸಂಪರ್ಕವಾಗುತ್ತಿತ್ತು. ಅಲ್ಲಿಂದ ರೋಗಿಯ ವಿಳಾಸಕ್ಕೆ ಸಮೀಪ ಇರುವ ವಾಹನ ಗುರುತಿಸಲು ಜಿ.ಪಿ. ಎಸ್. ವ್ಯವಸ್ಥೆ ಉಪಯೋಗಿಸಿ ಆ ವಾಹನ ನಿಯೋಜನೆ ಮಾಡಲಾಗುತ್ತಿತ್ತು. ಆಸ್ಟ್ರಾ ಝೆನೆಕಾ ಮೂರು ವರ್ಷಗಳ ಕಾಲ ಒಂದು ಆಂಬುಲೆನ್ಸ್, ಅದರ ಇಬ್ಬರು ಚಾಲಕರ ಸಂಬಳ ಹಾಗೂ ಬಳಕೆಯಾದ ಇಂಧನದ ಖರ್ಚು ವೆಚ್ಚಗಳನ್ನು ಪ್ರಾಯೋಜನೆ ಮಾಡಿತು. ಆ ವಾಹನವನ್ನು ಬಳ್ಳಾರಿ ರಸ್ತೆಯಲ್ಲಿ ನಿಲ್ಲಿಸಿಕೊಂಡಿರುತ್ತಿದ್ದರು. ಈ ವ್ಯವಸ್ಥೆಯು ದೇಶದಲ್ಲಿಯೇ ಪ್ರಪ್ರಥಮವಾಗಿ ಬೆಂಗಳೂರಿನಲ್ಲಿ ಕಾರ್ಯ ನಿರ್ವಹಿಸಿತು. ತುಂಬಾ ರೋಗಿಗಳಿಗೆ ಅತ್ಯಂತ ಉಪಯೋಗವೂ ಆಯಿತು.

ಈ ವಿಧಾನದಲ್ಲಿಯೇ ಕ್ರಮೇಣ ಸರ್ಕಾರೀ ೧೦೮ ಆಂಬ್ಯುಲೆನ್ಸ್ ಆರಂಭವಾದ ನಂತರ ಆಪರೇಶನ್ ಸಂಜೀವಿನಿಯನ್ನು ಹಿಂತೆಗೆದು ಕೊಂಡೆವು.

**ಸಂದರ್ಶಕಿ : ನಿಮಗೆ ನಾಟಕ ರಚನೆ, ನಿರ್ದೇಶನ, ನಟನೆ, ಕವನ, ಕಥನ, ಚಿತ್ರಕಲೆ, ಚಲನಚಿತ್ರ ಎಲ್ಲವೂ ಗೊತ್ತಿತ್ತು. ಎಲ್ಲವನ್ನೂ ಹಿನ್ನೆಲೆಗೆ ಬಿಟ್ಟು ವೈದ್ಯಸಾಹಿತ್ಯ ಮಾತ್ರ ಮುಂದುವರೆಸಿದಿರಿ? ವಿಶೇಷ ಕಾರಣವೇನಾದರೂ ಇದೆಯೆ?**

**ಡಾ. ಸೋಮೇಶ್ವರ್ :** ನನ್ನ ವೃತ್ತಿ ವೈದ್ಯಕೀಯ. ಅದು ಬರಿಯ ರೋಗ ಚಿಕಿತ್ಸೆ ಮಾತ್ರವಲ್ಲ. ರೋಗ ಬಾರದಂತೆ ತಡೆಗಟ್ಟುವ ತಿಳುವಳಿಕೆ ಕೊಡುವುದೂ ವೈದ್ಯನ ಕರ್ತವ್ಯ ಹಾಗೂ ಜವಾಬ್ದಾರಿ. ಒಬ್ಬ ರೋಗಿಯ ಮುಂದೆ ಈ ಅಂಶಗಳನ್ನು ಹತ್ತು ಹದಿನೈದು ನಿಮಿಷ ಮಾತನಾಡಿದರೆ, ನಾಲ್ಕೋ ಐದೋ ಜನರಿಗೆ ಮಾತ್ರ ಉಪಯೋಗವಾಗಬಹುದು. ಅದನ್ನೇ ಪುಸ್ತಕ ರೂಪದಲ್ಲಿ ತಂದಾಗ ತುಂಬಾ ಹೆಚ್ಚಿನ ಮಂದಿಗೆ ತಲುಪುವುದು, ಮತ್ತೆ ಮತ್ತೆ ಓದಲು ಸಿಗುವುದು ಹೆಚ್ಚು ಉಪಯುಕ್ತ ಎನ್ನಿಸಿತು. ಹಾಗಾಗಿ ಬರವಣಿಗೆಯ ಮೂಲಕ ತುಂಬಾ ವಿಷಯಗಳನ್ನು ಸಾಮಾನ್ಯ ಜನರಿಗೆ ಸುಲಭ ಕನ್ನಡದಲ್ಲಿ ತಿಳಿಸುವ ಪ್ರಯತ್ನ ಮಾಡಿದ್ದೇನೆ, ಇನ್ನೂ ಮಾಡಬೇಕು.

ನಾಟಕ ಸಾಹಿತ್ಯ ಕಥೆ ಕವನ ರಂಗಗಳಲ್ಲಿ ಈಗಾಗಲೇ ತುಂಬ ಸಾಧಿಸಿದ ದಿಗ್ಗಜರಿದ್ದಾರೆ. ಅವರ ಜೊತೆ ಸ್ಪರ್ಧೆಯ ಅವಶ್ಯಕತೆ ಇರಲಿಲ್ಲ. ಅಲ್ಲದೇ ಲಕ್ಷಾಂತರ ವೈದ್ಯರಿರುವ ಕನ್ನಡದಲ್ಲಿ ಬರೆಯುವ ಶಕ್ತಿ ಆಸಕ್ತಿ ಇರುವವರು ಕೆಲವೇ ಜನ. ಎಷ್ಟೊಂದು ವಿಷಯಗಳನ್ನು ಸಾಮಾನ್ಯರಿಗೆ ತಲುಪಿಸಬೇಕಿದೆ. ಹಾಗಾಗಿ ವೈದ್ಯಸಾಹಿತ್ಯ ನನ್ನ ಕಾರ್ಯಕ್ಷೇತ್ರವಾಯಿತು. ಇನ್ನೂ ತುಂಬಾ ಕೆಲಸ ಬಾಕಿ ಇದೆ.

ಸಂದರ್ಶಕಿ : ಕಣಾದ ಪತ್ರಿಕೆ ಹೇಗೆ ನಿಮ್ಮನ್ನು ಪ್ರಭಾವಿಸಿತು?

**ಡಾ. ಸೋಮೇಶ್ವರ್ :** ನಾನು ಪಿ.ಯು.ಸಿ. ಓದುತ್ತಿರುವಾಗ ಕಾಲೇಜಿನಲ್ಲಿ "ಕಣಾದ "ಪತ್ರಿಕೆಯ ಬಗ್ಗೆ ಅದು ನಡೆಸುತ್ತಿರುವ ವೈಜ್ಞಾನಿಕ ಲೇಖನ ಸ್ಪರ್ಧೆಯ ಬಗ್ಗೆ ನೋಟೀಸ್ ಹಾಕಿದ್ದರು. ಬಹುಮಾನವಾಗಿ ಸ್ವಲ್ಪ ಹಣ ಸಿಗುತ್ತಿತ್ತು, ನನ್ನ ಅವಶ್ಯಕತೆಗಾಗಿ ಸ್ಪರ್ಧೆಯಲ್ಲಿ ಪಾಲ್ಗೊಂಡೆ. ನಿರಂತರ ಒಂಭತ್ತು ವರ್ಷ ಬಹುಮಾನ ಪಡೆದೆ. ಇನ್ನು ನೀವು ಸ್ಪರ್ಧಿಸುವುದು ಸಾಕು., ಗೌರವ ಲೇಖಕರಾಗಿ ಮುಂದುವರೆಯಿರಿ ಎನ್ನುವ ಆದೇಶ ಸಂಪಾದಕ ಮಂಡಲಿಯಿಂದ ಬಂದಿತು, ಅದರಂತೆ ಈಗಲೂ ಕಣಾದಕ್ಕೆ ಲೇಖನಗಳನ್ನು ಬರೆದುಕೊಡುತ್ತಿದ್ದೇನೆ.

**ಸಂದರ್ಶಕಿ : ಅಂಕಣ ಬರಹ ಒಂದು ಪ್ರಖರ ಮಾಧ್ಯಮ. ನಿಮ್ಮ ಅನುಭವ**

**ಡಾ. ಸೋಮೇಶ್ವರ್ :** ಈಗ ನಿರಂತರವಾಗಿ ವಿಶ್ವವಾಣಿ ಪತ್ರಿಕೆಯಲ್ಲಿ "ಹಿಂತಿರುಗಿ ನೋಡಿದಾಗ" ಎನ್ನುವ ಅಂಕಣ ಬರುತ್ತಿದೆ. ಸಾಕಷ್ಟು ವಿಷಯಗಳ ಬಗ್ಗೆ ವಿವರವಾಗಿ ಅಧ್ಯಯನ ಮಾಡಿಯೇ ಈ ಅಂಕಣ ಬರೆಯುತ್ತಿದ್ದೇನೆ. ಕೆಲವೊಮ್ಮೆ ಆಯುರ್ವೇದ, ಸಸ್ಯಶಾಸ್ತ್ರ ಯುನಾನಿ ಕುರಿತು ಓದಿಯೇ ವಿಷಯ ಪ್ರತಿಪಾದನೆ ಮಾಡುವೆ. ಸಂಸ್ಕೃತದಲ್ಲಿ ಇರುವ ಗರ್ಭೋಪನಿಷತ್ ಬಗ್ಗೆ ಬರೆದಾಗ ನಮ್ಮ ಪೂರ್ವಜರ ಜ್ಞಾನ ಕಾಣ್ಕೆಗಳು ಎಷ್ಟೊಂದು ಹಿರಿದು, ಎಂತಹ ವ್ಯಾಪ್ತಿ ಉಳ್ಳದ್ದು, ಯಾವ ಆಧುನಿಕ ಪರಿಕರಗಳಿಲ್ಲದ ಆ ಸಮಯದಲ್ಲೇ ಭ್ರೂಣದ ಹಂತ ಹಂತದ ಬೆಳವಣಿಗೆಯನ್ನು ಎಷ್ಟೊಂದು ವಿವರವಾಗಿ ಅರಿತಿದ್ದರು, ಆಶ್ಚರ್ಯವಾಗುತ್ತದೆ.

ಹಿಂದೆ ಕನ್ನಡ ಪ್ರಭದಲ್ಲಿ" ಇಗೋ ವೈದ್ಯಕೀಯ" ಅಂಕಣವನ್ನು ಕೆಲವು ಕಾಲ ಬರೆದೆ.,. ಶ್ರೀ ಜಿ. ವೆಂಕಟಸುಬ್ಬಯ್ಯನವರು "ಇಗೋ ಕನ್ನಡ" ಅಂಕಣ ಬರೆಯುತ್ತಿದ್ದರು, ಅದರಲ್ಲಿ ಕನ್ನಡ ಪದಗಳ ವ್ಯುತ್ಪತ್ತಿ ವಿಶ್ಲೇಷಣೆ ಇರುತ್ತಿತು. ನಾನು ಬರೆದ" ಇಗೋ ವೈದ್ಯಕೀಯ" ದಲ್ಲಿ ವೈದ್ಯಕೀಯ ಪದಗಳ ಹುಟ್ಟು, ರಚನೆ, ಕನ್ನಡಕ್ಕೆ ಆ ಪದವನ್ನು ತರ್ಜುಮೆ ಮಾಡಬೇಕಾದರೆ ಅನುಸರಿಸಬೇಕಾದ ಕೆಲವು ರೀತಿ, ನಿಯಮಗಳ ಬಗ್ಗೆ ಚರ್ಚೆ ಮಾಡುತ್ತಿದ್ದೆ.

ಈ ಕೆಲಸಗಳಿಗೆ ತುಂಬಾ ಅಧ್ಯಯನ ಬೇಕಾಗಿತ್ತು. ನಮ್ಮ ಹಿಂದಿನವರ ಜ್ಞಾನವ್ಯಾಪ್ತಿ ಎಷ್ಟೆಂದು ಅರಿವಾಯಿತು. ಈ ಹುಡುಕಾಟದಿಂದ ತಿಳಿದ ವಿಷಯಗಳನ್ನು ? ಪೂರ್ವಸೂರಿಗಳ ಹೆಗಲೇರಿ ? ಎನ್ನುವ ಪುಸ್ತಕ ಬರೆದಿದ್ದೇನೆ. ಹಸ್ತಪ್ರತಿ ಹಂತದಲ್ಲಿಯೇ ಡಾ. ಸುನಂದಾ ಕುಲಕರ್ಣಿ ಹಸ್ತಪ್ರತಿ ಪ್ರಶಸ್ತಿ ಬಂದಿದೆ. ಮುಂದೆ ಮುದ್ರಣ ಮಾಡುವ ಯೋಜನೆಯಲ್ಲಿದೆ.

**ಸಂದರ್ಶಕಿ : ಗಡಿ ದಾಟಿ ಹೋದ" ಥಟ್ ಅಂತ ಹೇಳಿ" ಬಗ್ಗೆ ಥಟ್ ಅಂತ ಹೇಳಿ.?**

**ಡಾ. ಸೋಮೇಶ್ವರ್ :** ಪ್ರಪಂಚದ ಎಲ್ಲಾ ಕಡೆ ಥಟ್ ಅಂತ ಹೇಳಿ ಕಾರ್ಯಕ್ರಮ ನೋಡುವ ಕನ್ನಡಿಗರಿದ್ದಾರೆ. ಕತಾರ್ ಇಂಗ್ಲೆಂಡ್ ಅಮೇರಿಕಾ ಹೀಗೆ ಬೇರೆ ಬೇರೆ ದೇಶಗಳಲ್ಲಿ ಸಮಾರಂಭಗಳಿಗೆ ಹೋದಾಗ ರಸಪ್ರಶ್ನೆ ಕಾರ್ಯಕ್ರಮ ಮಾಡಿದಾಗ ಎಲ್ಲರೂ ಖುಷಿ ಪಟ್ಟರು. ಕರೋನಾ ಸಮಯದಲ್ಲಿ ಎಲ್ಲವೂ ಲಾಕ್ ಡೌನ್! ಸ್ಟುಡಿಯೋಗೆ ಹೋಗಿ ಕಾರ್ಯಕ್ರಮ ಮುದ್ರಣ ಮಾಡಲು ಅಸಾಧ್ಯವಾಯಿತು. ಆಗ ಕಾರ್ಯಕ್ರಮ ನಿಲ್ಲಿಸುವ ಬದಲಾಗಿ ಮನೆಗಳಿಂದಲೇ ಮೊಬೈಲ್, ಲ್ಯಾಪ್‌ಟಾಪ್ ಮೂಲಕವೇ ಸ್ಪರ್ಧೆಗೆ ಭಾಗವಹಿಸಲು ಪ್ರಯತ್ನ ಮಾಡಿದೆವು. ಪ್ರಾಯೋಗಿಕವಾಗಿ ಯಶಸ್ವಿಯಾಯಿತು. ಆಗ ವಿದೇಶದಲ್ಲಿದ್ದ ಸಾಕಷ್ಟು ಮಂದಿ ತಮ್ಮ ತಮ್ಮ ನೆಲೆಯಲ್ಲಿಯೇ ಇ–ಕಾರ್ಯಕ್ರಮ ಆನ್ ಲೈನ್ ಕಾರ್ಯಕ್ರಮದಲ್ಲಿ ಭಾಗವಹಿಸುವ ಆಸಕ್ತಿ ತೋರಿದರು. ಅವರು ಭಾರತಕ್ಕೆ ಬಂದಾಗಲೆಲ್ಲ ಅವಕಾಶ ಸಿಗದೇ ನಿರಾಶರಾಗಿದ್ದರು. ಪ್ರಥಮವಾಗಿ ಭಾರತದ ವಿವಿಧ ಪ್ರದೇಶಗಳಲ್ಲಿನ ಸ್ಪರ್ಧಿಗಳನ್ನ ಒಳಗೊಂಡು ನಿರಂತರ ಕೋವಿಡ್ ಕಾಲದಲ್ಲಿ ಕಾರ್ಯಕ್ರಮ ಪ್ರಸಾರವಾಯ್ತು. ಹಾಗೆಯೇ ವಿವಿಧ ಕಾಲಮಾನದಲ್ಲಿರುವ ವಿದೇಶೀ ಕನ್ನಡಿಗರಿಗಾಗಿ ಆನ್ ಲೈನ್ ರಸಪ್ರಶ್ನೆ ನಡೆಸಿಕೊಟ್ಟೆವು ಅಲ್ಲಿಯೂ ಸಹ ಪುಸ್ತಕಗಳನ್ನೇ ಬಹುಮಾನ ಕೊಟ್ಟೆವು. ಈ ಬುಕ್, ಆಡಿಯೋ ಬುಕ್ ಹಾಗೂ ಮುದ್ರಿತ ಪ್ರತಿಗಳನ್ನು ಬಳಸಿದೆವು. ಇತ್ತೀಚೆಗೆ ಇಡೀ ಪ್ರಪಂಚದ ವಿವಿಧ ದೇಶಗಳನ್ನು ಕಾಲಮಾನ ಗಣನೆಯ ಆಧಾರದಲ್ಲಿ ಆರು ವಿಭಾಗಗಳನ್ನು ಮಾಡಿ ರಸಪ್ರಶ್ನೆ ನಡೆಸಿದೆವು. ಅದರಲ್ಲಿ ಗೆದ್ದ ಎರಡೆರಡು ತಂಡಗಳನ್ನು (ಒಟ್ಟು ಹನ್ನೆರಡು ತಂಡ) ಒಟ್ಟು ಸೇರಿಸಿ ಸೆಮಿ ಫೈನಲ್, ಫೈನಲ್ ಸ್ಪರ್ಧೆ ನಡೆಸಲಾಯಿತು. ಅತ್ಯಂತ ಶಿಸ್ತಿನಿಂದ ಪ್ರೀತಿಯಿಂದ ಎಲ್ಲರೂ ಭಾಗವಹಿಸಿದ್ದರು. ಸ್ಪರ್ಧಿಗಳು ಅಮೇರಿಕಾ, ಇಂಗ್ಲೆಂಡ್, ಆಸ್ಟ್ರೇಲಿಯಾ, ಮಲೇಶಿಯಾ, ಸಿಂಗಪೂರ್, ಜರ್ಮನಿ ಹೀಗೆ ವಿವಿಧ ಕಾಲಮಾನದಲ್ಲಿದ್ದರೂ ಫೈನಲ್ಸ್ ಗೆ ಕಷ್ಟವಾಗಲಿಲ್ಲ. ಬಹುಶಃ ಈ ಮಟ್ಟದ ರಸಪ್ರಶ್ನೆ ಕಾರ್ಯಕ್ರಮ ಕನ್ನಡದಲ್ಲೇ ಮೊದಲು. ಬೇರೆ ಭಾಷೆಯಲ್ಲಿ ಈ ರೀತಿ ವ್ಯಾಪಕ ವ್ಯಾಪ್ತಿಯಲ್ಲಿ ರಸಪ್ರಶ್ನೆ ನಡೆದಿದ್ದು ಇದೆಯಾ ಪರಿಶೀಲಿಸಬೇಕು.


**ಸಂದರ್ಶಕಿ : "ಥಟ್ ಅಂತ ಹೇಳಿ" ಈಗ ಒಂದು ನುಡಿಗಟ್ಟಾಗಿದೆ – ಈ ಶೀರ್ಷಿಕೆ ಹೇಗೆ ಬಂತು?**

**ಡಾ. ಸೋಮೇಶ್ವರ್ :** ನನ್ನ ಸ್ವಲ್ಪ ಆದಾಯಕ್ಕಾಗಿ ದೂರದರ್ಶನದಲ್ಲಿ ಆರೋಗ್ಯ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಿದ್ದೆ. ಆಸ್ಪತ್ರೆಯೊಂದರ ಉದ್ಯೋಗದ ಅನಿವಾರ್ಯತೆಯಿಂದ ಶನಿವಾರ ಮತ್ತು ಭಾನುವಾರ ಮಾತ್ರ ದೂರದರ್ಶನಕ್ಕಾಗಿ ಸಮಯ ಸಿಗುತ್ತಿತ್ತು. ಆರೋಗ್ಯ–ಸಂದರ್ಶನ ನಡೆಸಿಕೊಡಲು ಸಮಯ ಹೊಂದಿಸುವುದು ಕಠಿನವಾಯಿತು. ಆಗ ಯೋಚಿಸಿದ ಕಾರ್ಯಕ್ರಮವೇ ರಸಪ್ರಶ್ನೆ. ವಾರದ ಎಲ್ಲಾ ಕಾರ್ಯಕ್ರಮಗಳನ್ನು ಶನಿವಾರ ಮತ್ತ ಭಾನುವಾರ ಮುದ್ರಿಸಿಕೊಂಡು ಪ್ರತಿದಿನ ಪ್ರಸಾರ ಮಾಡುವುದು ರಸಪ್ರಶ್ನೆಗೆ ಶೀರ್ಷಿಕೆಗಾಗಿ ಬಂದ ಹಲವು ಹೆಸರುಗಳಲ್ಲಿ? ಥಟ್ ಅಂತ ಹೇಳಿ? ಅನ್ನುವುದನ್ನು ಆಯ್ಕೆ ಮಾಡಿದೆವು.

ವ್ಯಾಕರಣಬದ್ಧವಾಗಿ ಸರಿಯಾದ ಪ್ರಯೋಗ ಅಲ್ಲವಾದರೂ ಜನರ ಮನಸ್ಸಿಗೆ ನಾಟುವ ಪದಪುಂಜವಾಗಿ ಆರಿಸಿಕೊಂಡೆವು. ಇದನ್ನು ಸೂಚಿಸಿದ್ದು ದೂರದರ್ಶನದಲ್ಲಿ ಕೆಲಸ ಮಾಡುತ್ತಿದ್ದ. ಶ್ರೀ ಎನ್. ಮೋಹನ್ ರಾಮ್ ಅವರು. ಈ ಕಾರ್ಯಕ್ರಮದಿಂದಾಗಿ ಸಾಕಷ್ಟು ಆಡುಮಾತಿನ ಪದಪುಂಜಗಳೂ ಕಾರ್ಟೂನುಗಳೂ ಹುಟ್ಟಿಕೊಂಡವು. "ಈ ಪುಸ್ತಕ ನನ್ನಲ್ಲೇ ಉಳಿಯಿತು" ಎನ್ನುವುದೊಂದು ನುಡಿಗಟ್ಟು. ಮೇಜಿನ ಮುಂದೆ ನಾನು ಕೂತಿರುವಂತೆ ಚಿತ್ರಿಸಿ ಮುಂದೆ ಪಕ್ಕದಲ್ಲೆಲ್ಲಾ ಪುಸ್ತಕ ರಾಶಿ ರಾಶಿ, ಇರುವಂತೆ ತೋರಿಸಿ ಮತ್ತೆ ಈ ಪುಸ್ತಕ.....!!" ನಕಾರಾತ್ಮಕ ತಂತ್ರಗಳಿಗೆ ಅವಕಾಶವಿಲ್ಲ" ಎನ್ನುವುದು ಮತ್ತೊಂದು.

ಈ ಕಾರ್ಯಕ್ರಮದ ಮತ್ತೊಂದು ಮಜಲು ಮನೆಗಳಲ್ಲಿ ಒಟ್ಟಿಗೆ ಕುಳಿತು ನೋಡುವ ಮೂರು ತಲೆಮಾರಿನ ಜನ. ಅಜ್ಜ ಅಜ್ಜಿಯರಿಗೂ ತಂದೆ ತಾಯಿಗೂ ಮಕ್ಕಳಿಗೂ" ಹೀಗೆ ಎಲ್ಲ ತಲೆಮಾರಿನವರಿಗೆ ಸರಿಯಾಗಬಲ್ಲ ಪ್ರಶ್ನೆಗಳನ್ನು ಒಳಗೊಂಡಿರುವಂತೆ ಪ್ರಶ್ನೆಗಳನ್ನು ರೂಪಿಸಲಾಗುತ್ತದೆ.

ಕೆಲವು ಮನೆಗಳಲ್ಲಿ ಮಕ್ಕಳನ್ನು ಕೂಡಿಸಿ ಪ್ರಶ್ನೆಗಳಿಗೆ ಉತ್ತರ ಕೊಟ್ಟವರಿಗೆ ಅಲ್ಲಿಯೇ ಇರುವ ಪುಸ್ತಕಗಳನ್ನು ಬಹುಮಾನವಾಗಿ ಕೊಡುವ ಅಭ್ಯಾಸ ಬೆಳೆಸಿಕೊಂಡಿದ್ದಾರೆ. ಮಕ್ಕಳಲ್ಲಿ "ಅಂಜರಿಕೆ ಹೋಗಲಾಡಿಸಿ ತಪ್ಪಾದರೂ ಪರವಾಗಿಲ್ಲ ಉತ್ತರಿಸುವ" ಶ್ವಾಸವನ್ನು ತುಂಬುತ್ತಿದ್ದಾರೆ. ಒಮ್ಮೆ ಒಬ್ಬ ಕೆ. ಎ. ಎಸ್. ಉತ್ತೀರ್ಣನಾದ ಅಭ್ಯರ್ಥಿಯೊಬ್ಬರು "ಥಟ್ ಅಂತ



ಹೇಳಿ" ಕಾರ್ಯಕ್ರಮ ಪರೀಕ್ಷೆ ಎದುರಿಸಲು ತುಂಬಾ ಸಹಾಯ ಮಾಡಿತು, ಎಂದದ್ದು ನನಗೆ ಧನ್ಯತೆಯ ಕ್ಷಣ

**ಸಂದರ್ಶಕಿ : ಲಿಮ್ಕಾ ಬುಕ್ ಆಫ್ ರೆಕಾರ್ಡಿಗೆ ಸೇರಿದ ನಿಮ್ಮ ಕಾರ್ಯಕ್ರಮದ ಅಪೂರ್ವ ಕ್ಷಣಗಳು ?**

**ಡಾ. ಸೋಮೇಶ್ವರ್:** ತುಂಬಾ ಇದೆ. ರಾಜಕಾರಣಿಗಳನ್ನೂ, ಹೆಸರಾಂತ ಕವಿ, ಸಾಹಿತಿಗಳನ್ನೂ, ಭಾಷಣಕಾರರನ್ನೂ, ಸಿನಿತಾರೆಯರನ್ನೂ ಸಂದರ್ಶಿಸಿದ ಭಾಗ್ಯ ನನ್ನದು.

"ನನ್ನ ತೇಜಸ್ವಿ" ಶ್ರೀಮತಿ ರಾಜೇಶ್ವರಿ ತೇಜಸ್ವಿಯವರು ಪತಿಯ ನೆನಪಲ್ಲಿ ಬರೆದ ಪುಸ್ತಕ. ಅದರಲ್ಲಿ ನಮ್ಮ ರಸಪ್ರಶ್ನೆ ಕಾರ್ಯಕ್ರಮ ವೀಕ್ಷಿಸಲು ದಂಪತಿಗಳು ತಪ್ಪಿಸುತ್ತಿರಲಿಲ್ಲವೆಂದು ಹಾಗೂ ತಾವು ತೆಗೆದುಕೊಂಡ ಪುಸ್ತಕಗಳ ಸ್ಪರ್ಧೆಯೂ ನಡೆಯುತ್ತಿತ್ತು, ಎಂದು ಆತ್ಮೀಯವಾಗಿ ನೆನಪಿಸಿಕೊಂಡಿದ್ದು ಮನಸು ತುಂಬಿ ಬಂತು.

ಥಟ್ ಅಂತ ಹೇಳಿ ರಸಪ್ರಶ್ನೆ ಕಾರ್ಯಕ್ರಮ ನಾಲ್ಕು ಸಾವಿರ ಕಂತುಗಳನ್ನು ಪೂರೈಸಿದ್ದು ನನಗಿಂತಾ ನನ್ನ ಗೆಳೆಯರಾದ ಎಸ್. ಎಸ್. ಹಿರೇಮಠರಿಗೆ ತುಂಬಾ ಸಂತೋಷದ ವಿಷಯ. ತಾವೇ ಹಿಂದುಳಿದ ಶಾಲಾ ಮಕ್ಕಳ ಅಭಿವೃದ್ಧಿಗಾಗಿ ತನ್ನ ಎಲ್ಲಾ ಪಿಂಚಣಿ ಹಣ ಧಾರೆ ಎರೆದ ನಿಸ್ವಾರ್ಥಿ. ಅಂತಹ ಅವರು ಸಿದ್ಧಾರೆಡ್ಡಿ ಫೌಂಡೇಶನ್ ಮೂಲಕ ಒಂದು ವಾರ ಪೂರ ಈ ಕಾರ್ಯಕ್ರಮದ ಬಗ್ಗೆ ವಿವಿಧ ಜನರಿಂದ ಮಾತನಾಡಿಸಿದರು. ಶಾಲಾ ಅಧ್ಯಾಪಕರೂ, ವಿದ್ಯಾರ್ಥಿಗಳೂ, ಗೆಳೆಯರೂ, ದೂರದ ಊರಿಂದ ಬಂದು ಸ್ಪರ್ಧೆಯಲ್ಲಿ ಭಾಗವಹಿಸಿದವರೂ ಥಟ್ ಅಂತ ಹೇಳಿ ಇಂದ ಆದ ಉಪಯೋಗದ ಬಗ್ಗೆ ಮಾತನಾಡಿದರು. ಈ ಕಾರ್ಯಕ್ರಮ ನನಗೆ ಸುಳಿವೇ ಕೊಡದೆ ಆಯೋಜಿಸಲಾಗಿತ್ತು. ಇದು ಯಾವ ಪ್ರಶಸ್ತಿಗೂ ಕಡಿಮೆಯಿಲ್ಲದ ಮೌಲ್ಯಯುತವಾದದ್ದು.

**ಸಂದರ್ಶಕಿ : ನಿಮ್ಮ ಮುಂದೆ ಇರುವ ಯೋಜನೆಗಳೇನು?**

**ಡಾ. ಸೋಮೇಶ್ವರ್ :** ಭಾರತದ ಮೊದಲ ಸಾಲಿನ ಮಹಿಳಾ ವೈದ್ಯರು ಕನ್ನಡದಲ್ಲಿ ತರಬೇಕಿದೆ. ಮನೆಯಿಂದ ಹೊರಗೆ ಕಾಲಿಡಲೂ ಬಿಡದ ಕಟ್ಟುಪಾಡುಗಳ ಸಂಕೋಲೆಯಿಂದ ಧೈರ್ಯವಾಗಿ ಹೊರಬಂದು ನಾನಾ ಕಠೋರ ಪರಿ ಸ್ಥಿತಿಗಳನ್ನು ಎದುರಿಸಿ ಮುನ್ನುಗ್ಗಿ ಮುಂದೆ ಧಾವಿಸಿದ ಆನಂದಿ ಬಾಯಿ ಜೋಶಿ, ಕುಮುದಿನಿ ಗಂಗೂಲಿಯವರಂಥ ಹೆಣ್ಣು ಮಕ್ಕಳಿಂದಲೇ ಇಂದು ವೈದ್ಯಕೀಯ ವಿದ್ಯಾಭ್ಯಾಸಕ್ಕೆ ಇಷ್ಟೊಂದು ಸುಲಭವಾಗಿ ನೂರಾರು ಹೆಣ್ಣುಮಕ್ಕಳು ಧಾವಿಸಿ ಬರುತ್ತಿದ್ದಾರೆ.

ಒಳ್ಳೆಯ ಅನುವಾದವೋ ಇಲ್ಲ ಸ್ವತಂತ್ರ ಕೃತಿಯಾಗಿಯೋ ಈ ಸಾಹಸಗಾಥೆ ಕನ್ನಡದಲ್ಲಿ ಬರಲೇಬೇಕು, ನನಗೆ ತುಂಬ ಮನಸ್ಸಿಗೆ ಹತ್ತಿರವಾದ ವಿಷಯಗಳು.

**ಸಂದರ್ಶಕಿ : ನಿಮ್ಮ ಪುಸ್ತಕಗಳಲ್ಲಿ ಅತಿ ಶ್ರಮ ಬೇಡಿದ ಕೃತಿ ಯಾವುದು?**

**ಡಾ. ಸೋಮೇಶ್ವರ್ :** "ನಮ್ಮ ದೇಹದ ವಿಜ್ಞಾನ" ವೈದ್ಯಕೀಯ ಶಾಸ್ತ್ರ ರಾಸಾಯನ ವಿಜ್ಞಾನ, ಭೌತಶಾಸ್ತ್ರ, ಗಣಿತ ಎಲ್ಲ ಆಯಾಮದಿಂದ ದೇಹದ ಕ್ರಿಯೆ ಪ್ರಕ್ರಿಯೆಗಳನ್ನು ವಿವರಿಸುವ ಒಂದು ಅಭೂತಪೂರ್ವ ಪ್ರಯತ್ನ. ನನಗೂ ತುಂಬ ಖುಷಿಕೊಟ್ಟ ಪುಸ್ತಕ.

**ಸಂದರ್ಶಕಿ:** ನಿಮ್ಮ ಎಲ್ಲ ಕನಸುಗಳು ನನಸಾಗಲಿ ನಿಮ್ಮ ಅರೋಗ್ಯ ಆಯಸ್ಸು ದೀರ್ಘವಾಗಿರಲಿ. ಎಲ್ಲ ಎಲ್ಲೆಗಳನ್ನು ಮೀರಿ ನಿಮ್ಮ ಕಾರ್ಯಕ್ರಮ ಮುರಿಯಲಾರದಷ್ಟು ದಾಖಲೆಗಳನ್ನು ಮಾಡಲಿ. ನಮಸ್ಕಾರ.

**ವಿಳಾಸ:**

**ವೈದ್ಯ ಸಂಪದ**

**ಐ ಎಮ್ ಎ ಹೌಸ್, ಐ ಎಮ್ ಎ ವೃತ್ತ,**
**ಆಲೂರು ವೆಂಕಟರಾವ್ ರಸ್ತೆ,**
**ಬೆಂಗಳೂರು** 560018,
**ದೂರವಾಣಿ:** 080 26703255,
**ಮಿಂಚಂಚೆ:** vaidyasampadaeditor@gmail.com



**ಡಾ. ಪ್ರಿಯಾ ಭಾಲ್ಕಿ**
ವಿಭಾಗೀಯ ಸಂಪಾದಕರು



**ಡಾ. ಶಾಂತಲಾ**
ವಿಭಾಗೀಯ ಸಂಪಾದಕರು

# ಚಿತ್ರ ಸಂಪದ

ಮಗು, ನೀ ನಗು.




ಮುಗ್ಧ ನೋಟ.




ಉಳಿವಿಗಾಗಿ ಹೋರಾಟ




ನೀಟ್ ಪರೀಕ್ಷೆ ಮುಂದೂಡಿಕೆ?
ನಾನು ತುಂಬಾ ಕಷ್ಟಪಟ್ಟು ಓದಿದೆ!!




ಡಾ. ಡಿ. ಟಿ. ಕೃಷ್ಣಮೂರ್ತಿ

## ಮಣಿಪುರ ಫುಲ್ವೆಟ್ಟಾ
ಡಾ ನಾಗರಾಜ್ ಸಿ. ಎಸ್.







## ಕರಿ ಕೊರಳಿನ ಸೂರಕ್ಕಿ
ಡಾ ನಾಗರಾಜ್ ಸಿ. ಎಸ್.




## ಸಂತ
ಡಾ. ಡಿ. ಟಿ. ಕೃಷ್ಣಮೂರ್ತಿ

ಡಾ. ನಿತ್ಯ ಸಕಲೇಶ ಪಾಟೀಲ್






ಹುಲಿ
ಡಾ. ಶ್ರೀಕಾಂತ್ ಬಳ್ಳಾರಿ


ಫ್ಲೋವರ್
ಡಾ ಶ್ರೀಕಾಂತ್ ಬಳ್ಳಾರಿ





ಡಾ. ಜ್ಯೋತಿ ಘೊಂಗಡೆಮಠ
ವಿಭಾಗೀಯ ಸಂಪಾದಕರು

# ಚಿಣ್ಣರ ಲೋಕ



ಕೆ ಬಸವರಾಜ್
ಎಂಬಿಬಿಎಸ್ ದ್ವಿತೀಯ ವರ್ಷ, ಮಹಾದೇವಪ್ಪ ರಾಂಪುರೆ ವೈದ್ಯಕೀಯ ಕಾಲೇಜು, ಕಲಬುರಗಿ



ಅನೇಕ್ಷಾ ಎಸ್. ಕೆ.
೧೧ ವರ್ಷ, ಬೆಂಗಳೂರು



ಗಹನ ಜಿ. ಜಿ.
೯ ವರ್ಷ, ಬೆಂಗಳೂರು

# ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ರಾಜ್ಯ ಶಾಖೆ
## ಕನ್ನಡ ವೈದ್ಯ ಬರಹಗಾರರ ಸಮಿತಿ
## ಕೆಎಲ್‌ಇ ವಿಶ್ವವಿದ್ಯಾಲಯ-ಕನ್ನಡ ಬಳಗ
## ಭಾರತೀಯ ವೈದ್ಯಕೀಯ ಸಂಘ ಬೆಳಗಾವಿ ಶಾಖೆ

ಕನ್ನಡ ಬಳಸಿ
ವೈದ್ಯ ಸಾಹಿತ್ಯ ಬೆಳೆಸಿ

ಡಾ. ನಾ ಸೋಮೇಶ್ವರ್ ಸರ್ವಾಧ್ಯಕ್ಷತೆಯಲ್ಲಿ

# ಕನ್ನಡ ವೈದ್ಯ ಬರಹಗಾರರ
# ಐದನೆಯ ರಾಜ್ಯ ಸಮ್ಮೇಳನ

**ಆರೋಗ್ಯದ ಅರಿವು ವೈದ್ಯರ ನಿಲುವು**

ಕೆ. ಎಲ್. ಇ. ಜವಾಹರಲಾಲ ನೆಹರು ವೈದ್ಯಕೀಯ ಮಹಾವಿದ್ಯಾಲಯ ಬೆಳಗಾವಿಯಲ್ಲಿ
ಆಗಸ್ಟ್ ೨೪, ೨೫ – ೨೦೨೪

### ವೈದ್ಯ ಕವಿ ಗೋಷ್ಠಿ

ಮಾಹಿತಿಗಾಗಿ ಸಂಪರ್ಕಿಸಿ
ಡಾ. ಗಡ್ಡಿ ದಿವಾಕರ್ – 9448371009
ಡಾ. ರಾಜೇಶ್ ಕುಲಕರ್ಣಿ – 9886010047

### ವೈದ್ಯಕೃತಿಗಳ ಪ್ರಶಸ್ತಿಗೆ ಆಹ್ವಾನ

ಮಾಹಿತಿಗಾಗಿ ಸಂಪರ್ಕಿಸಿ
ಡಾ. ವಿನಯ ಶ್ರೀನಿವಾಸ್ – 9844083284

### ವೈದ್ಯ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ

ಮಾಹಿತಿಗಾಗಿ ಸಂಪರ್ಕಿಸಿ
ಡಾ. ಶುಭ್ರತಾ ಕೆ. ಎಸ್. – 9448149927

### ಕಾವ್ಯ-ಕಥಾ ಕಮ್ಮಟ ಕಾರ್ಯಾಗಾರ

ಮಾಹಿತಿಗಾಗಿ ಸಂಪರ್ಕಿಸಿ
ಡಾ. ಇಂದಿರಾ ದೊಡ್ಡಬಳ್ಳಾಪುರ – 8970821216

ಸರ್ವರಿಗೂ ಆದರದ ಸ್ವಾಗತ

**ಡಾ. ಶ್ರೀನಿವಾಸ ಎಸ್.**
ರಾಜ್ಯಾಧ್ಯಕ್ಷರು
ಭಾವೈಸಂ ಕರ್ನಾಟಕ ರಾಜ್ಯ ಶಾಖೆ

**ಡಾ. ಕರುಣಾಕರ ಬಿ. ಪಿ.**
ಗೌರವ ಕಾರ್ಯದರ್ಶಿಗಳು
ಭಾವೈಸಂ ಕರ್ನಾಟಕ ರಾಜ್ಯಶಾಖೆ

**ಡಾ. ವೀಣಾ ಎನ್. ಸುಳ್ಯ**
ಅಧ್ಯಕ್ಷರು
ಕನ್ನಡ ವೈದ್ಯ ಬರಹಗಾರರ ಸಮಿತಿ

**ಡಾ. ಎನ್. ಎಸ್. ಮಹಾಂತ ಶೆಟ್ಟಿ**
ಸಮ್ಮೇಳನ ಸಂಘಟನಾ
ಅಧ್ಯಕ್ಷರು

**ಡಾ. ರವೀಂದ್ರ ಅನಗೋಳ**
ಅಧ್ಯಕ್ಷರು
ಭಾವೈಸಂ ಬೆಳಗಾವಿ

**ಡಾ. ಅವಿನಾಶ್ ಕವಿ**
ಸಮ್ಮೇಳನ
ಕಾರ್ಯದರ್ಶಿಗಳು

ನೊಂದಾಯಿಸಿಕೊಳ್ಳಲು
ಕ್ಯೂಆರ್ ಕೋಡ್ ಬಳಸಿ

ನೊಂದಾಯಿಸಿಕೊಳ್ಳಿ